
UNIVERSAL LIBRARY
OU_200004
UNIVERSAL LIBRARY

OSMANIA UNIVERSITY
LIBRARY

Call No. K83 K46 Ve

Name of Book ವೀರರಾಜ ವಿಜಯ

Name of Author ಕೃಷ್ಣಯ್ಯ


ಶ್ರೀ
ವೀರರಾಜ
ವಿಜಯ
ಡಿ. ಎಸ್. ಕೃಷ್ಣಯ್ಯ.
೧॥ ಆಣೆ

ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ

# ವೀರರಾಜ ವಿಜಯ

(ಐತಿಹಾಸಿಕ ಕಾದಂಬರಿ)

ಲೇಖಕ:

*D. N. Krishnaih,*

M. A., B. E. D.

VIRAJPET

ಮುದ್ರಕ ಹಾಗು ಪ್ರಕಾಶಕ

**ಭಿ. ಪ. ಕಾಳೆ.**

ಶ್ರೀ ಶೇಷಾಚಲ ಪ್ರೆಸ್ಸ,

ಆನಂದವನ-ಅಗಡಿ

1941

(ಎಲ್ಲ ಹಕ್ಕುಗಳು ಪ್ರಕಾಶಕರಿಂದ ಕಾದಿಡಲಾಗಿವೆ)

MANOHARA GRANTHA BHANDAR ೨ ಅಣೆ
DHARWAR

# ಗ್ರಂಥಕರ್ತನ ಮುನ್ನುಡಿ

ನನಗೆ ಚಿಕ್ಕಂದಿನಿಂದಲೂ ಕಾದಂಬರಿಗಳನ್ನು ಓದುವದರಲ್ಲಿ ತುಂಬಾ ಪ್ರೇಮ. ಐತಿಹಾಸಿಕ ಕಾದಂಬರಿಗಳಲ್ಲಿ ನನಗೆ ಆಸಕ್ತಿಯು ಇನ್ನೂ ಹೆಚ್ಚು; ಆದರೆ ನಾನು ಓದಿದ ಹೆಚ್ಚಿನ ಐತಿಹಾಸಿಕ ಕಾದಂಬರಿಗಳು ರಾಜಪುತ್ರರ, ಮರಾಟರ ಮತ್ತು ಮಹಮ್ಮದೀಯ ಅರಸರ ಚರಿತ್ರೆಗಳಿಗೆ ಸಂಬಂಧಿಸಿದುವಾಗಿದ್ದುವು. ಆಗ ನನಗೆ ನಮ್ಮ ಕನ್ನಡನಾಡಿನ ಮೇಲಿನ ಐತಿಹಾಸಿಕ ಕಾದಂಬರಿಗಳಿಲ್ಲವಲ್ಲ? ಎಂಬ ಚಿಂತೆಯುಂಟಾಗುತ್ತಿತ್ತು. ನಾವು ಹೆಚ್ಚಾಗಿ ಐತಿಹಾಸಿಕ ಕಾದಂಬರಿಗಳಿಂದಲೇ ದೇಶದ ಹಿಂದಿನ ಕಾಲದ ವಿದ್ಯಮಾನಗಳನ್ನು ತಿಳಿಯುವೆನೆಂದರೆ ತಪ್ಪಾಗಲಾರದು. ರಾಜಪುತ್ರರ ಉಜ್ವಲ ದೇಶಾಭಿಮಾನ, ಸ್ವಾತಂತ್ರ್ಯಪ್ರೇಮ, ಆತ್ಮಗೌರವ, ಅವರ ಸ್ತ್ರೀಯರ ಪಾತಿವ್ರತ್ಯ, ಸ್ವಾಭಿಮಾನ ಮೊದಲಾದ ಗುಣಗಳು ನಮಗೆ ಕಾದಂಬರಿಗಳಿಂದಲೇ ಮನದಟ್ಟಾಗಿದೆಯೆಂದು ಹೇಳಬಹುದು. ಹೀಗಿರುವಲ್ಲಿ ನಮ್ಮ ಕನ್ನಡ ನಾಡಿನ ಹಿಂದಿನ ವೈಭವ, ಕನ್ನಡಿಗರ ಹಿಂದಿನ ವೀರತ್ವ ಮೊದಲಾದವುಗಳನ್ನು ನಾವು ತಿಳಿಯಬೇಕಾದರೆ ನಮ್ಮಲ್ಲಿಯೂ ನಮ್ಮ ದೇಶಕ್ಕೆ ಸಂಬಂಧಿಸಿದ ಐತಿಹಾಸಿಕ ಕಾದಂಬರಿಗಳೇ ಬೇಕು. ಕನ್ನಡನಾಡಿನ ಮೇಲೆ ಇಂದು ಪರಭಾಷಿಯರ ಆಕ್ರಮಣವು ಇದ್ದರೂ ಇಂದಿಗೂ ಕನ್ನಡನಾಡು ವಿಸ್ತಾರವಾಗಿಯೇ ಇದೆ. ಕನ್ನಡನಾಡಿನ ಜನರಿಗೆ ತಮ್ಮೊಳಗೆ ಪರಸ್ಪರ ಪರಿಚಯವಿರುವದಿಲ್ಲ. ಕನ್ನಡನಾಡಿನ ಒಂದು ಮೂಲೆಯಲ್ಲಿರುವ ಜನರ ವಿಶಿಷ್ಟ ಸಂಸ್ಕೃತಿಯು ಇನ್ನೊಂದು ಮೂಲೆಯಲ್ಲಿರುವವರಿಗೆ ತಿಳಿದಿರುವದಿಲ್ಲ. ಆದುದರಿಂದ ನನಗೆ ಮೊದಲು ನಮ್ಮ ನಮ್ಮ ಪರಿಚಯವಾಗಬೇಕೆಂದೆನಿಸುತ್ತದೆ.

ನಾನು ಬರೆದಿರುವ ಈ ಚಿಕ್ಕ ಕಾದಂಬರಿಯು ಕೊಡಗು ಪ್ರಾಂತ್ಯದ ಇತಿಹಾಸಕ್ಕೆ ಸಂಬಂಧಿಸಿರುವದು. ಕೊಡಗು ಬೆಟ್ಟ-ಗುಡ್ಡಗಳ ಸೀಮೆಯಾಗಿದೆಯೆಂದೂ ಇಲ್ಲಿನ ಜನರಲ್ಲಿ ಮುಖ್ಯ ಜನಾಂಗವಾಗಿರುವ ಕೊಡಗರಿಗೆ ಹಿಂದೂ ದೇಶದ ಇತರ ಜನರಿಗಿಂತ ವಿಶೇಷವಾದ ಒಂದು ವಿಶಿಷ್ಟ ಸಂಸ್ಕೃತಿ

ಇದೆಯೆಂದೂ ಇವರ ಪದ್ಧತಿಗಳೂ, ಉಡುಪುಗಳೂ, ಹಬ್ಬಗಳೂ ಇತರ ಹಿಂದುಗಳವುಗಳಿಗಿಂತ ಪೂರ್ತಿಯಾಗಿ ಭಿನ್ನವಾಗಿವೆಯೆಂದೂ ಅನೇಕ ಕನ್ನಡಿಗರಿಗೆ ತಿಳಿದಿರಲಾರದು. ಅವುಗಳಲ್ಲಿ ಕೆಲವನ್ನು ಈ ಕಾದಂಬರಿಯಲ್ಲಿ ಚಿತ್ರಿಸಲು ಪ್ರಯತ್ನಿಸಿರುವೆನು. ಈ ಕಾದಂಬರಿಯಲ್ಲಿ ಬರೆದಿರುವಂಥ ವಿಷಯಗಳಿಗೆ ಕೊಡಗಿನ ಚರಿತ್ರೆಯ ಅನೇಕ ಘಟನೆಗಳು ಆಧಾರವಾಗಿವೆ.

ಕೊಡಗಿನ ರಾಜಕುಮಾರರನ್ನು ಪೆರಿಯಾಪಟ್ಟಣದಲ್ಲಿ ಸೆರೆಯಲ್ಲಿ ಇಟ್ಟುದುದೂ, ಟಿಪ್ಪುಸುಲ್ತಾನನು ವೀರರಾಜನ ಸಹೋದರಿಯರನ್ನು ತನ್ನ ಜನಾನಕ್ಕೆ ಸೇರಿಸಿದುದೂ, ವೀರರಾಜನು ಪೆರಿಯಾಪಟ್ಟಣದಿಂದ ತಪ್ಪಿಸಿಕೊಂಡು ಬಂದು ಕೊಡಗನ್ನು ತಿರುಗಿ ತನ್ನ ಸ್ವಾಧೀನಪಡಿಸಿಕೊಂಡುದೂ, ಖಾದರ್ ಖಾನ್ ಖೈಸಗಿಯು ರಾಜನಿಗೆ ಸಹಾಯ ಮಾಡಿದುದೂ ಈ ಚರಿತ್ರೆಯಲ್ಲಿ ಸಂಕ್ಷಿಪ್ತವಾಗಿ ಹೇಳಲ್ಪಟ್ಟಿವೆ. ವೀರರಾಜನು ಪೆರಿಯಾಪಟ್ಟಣದಿಂದ ತಪ್ಪಿಸಿಕೊಂಡು ಬರುವಾಗ ಸಹಾಯ ಮಾಡಿದ ಹೊಂಬಾಳೆ ನಾಯಕ ಮತ್ತು ಇಸ್ಮಾಯಿಲ್ ಖಾನನ ವಂಶಜರು ಇಂದಿಗೂ ಆ ರಾಜನು ವಂಶಪಾರಂಪರ್ಯವಾಗಿ ಕೊಟ್ಟ ಜಹಗೀರುಗಳನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಈ ಘಟನೆಗಳಲ್ಲಿ ಕೆಲವು ಬರೆವಣಿಗೆಯಲ್ಲಿವೆ. ಕೆಲವು ಜನರಿಂದ ಪರಂಪರೆಯಾಗಿ ಬಂದ ಕಥೆಗಳಲ್ಲಿ ಅಡಕವಾಗಿವೆ.

ಇದುವರೆಗೆ ನಾನು ಕೊಡಗಿನ ಚರಿತ್ರೆಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಬೇರೆ ಬೇರೆ ಪುಸ್ತಕಗಳಿಂದಲೂ, ಕೈಬರೆಹಗಳಿಂದಲೂ, ಪರಂಪರೆಯಾಗಿ ಬಂದ ದಂತಕಥೆಗಳಿಂದಲೂ ಸಂಗ್ರಹಿಸಿ 'ಕೊಡಗಿನ ಚರಿತ್ರೆಯ ಕಥೆಗಳು' ಎಂಬ ಹೆಸರಿನಿಂದ ಹಲವು ಚಿಕ್ಕ ಕಥೆಗಳನ್ನು 'ಕೊಡಗು' ವಾರಪತ್ರಿಕೆಯಲ್ಲಿ ಪ್ರಕಟಿಸಿರುವೆನು; ಆದರೆ ಕಾದಂಬರಿಯಾಗಿ ಬರೆದುದು ಇದೇ ಮೊದಲಾದುದರಿಂದ, ಈ ಪುಸ್ತಕದಲ್ಲಿ ಅನೇಕ ಕುಂದು ಕೊರತೆಗಳಿರಬಹುದು; ಆದರೂ ಗುಣಗ್ರಾಹಿಗಳಾದ ವಾಚಕರು ಇದರಲ್ಲಿರುವ ತಪ್ಪುಗಳನ್ನು ಮನ್ನಿಸಿ ಇದನ್ನು ಸ್ವೀಕರಿಸಬೇಕೆಂದು ಬೇಡಿಕೊಳ್ಳುವೆನು.

ವೀರರಾಜೇಂದ್ರಪೇಟೆ
೨೬—೬—೧೯೪೨

ಡಿ. ಯನ್. ಕೃಷ್ಣಯ.

— —

# ಪ್ರಕಾಶಕರ ಮುನ್ನುಡಿ

ಕೊಡಗು ಪ್ರಾಂತವು ನಮ್ಮ ಕನ್ನಡ ನಾಡಿಗೆ ಸೇರಿದ್ದೇ ಆದರೂ ನಮ್ಮ ಉತ್ತರ ಕರ್ನಾಟಕದವರಿಗೆ ಕೊಡಗಿನ ಐತಿಹಾಸಿಕ, ಸಾಮಾಜಿಕ, ಪ್ರಾದೇಶಿಕ ಸಂಗತಿಗಳು ಹೆಚ್ಚಾಗಿ ತಿಳಿದಿಲ್ಲ. ಆದರಿಂದ ಆ ಸಂಗತಿಗಳನ್ನೊಳಗೊಂಡ ಈ ಪುಸ್ತಕವನ್ನು ನಮ್ಮ ಮಿತ್ರ ಶ್ರೀ. ಡಿ. ಎಸ್. ಕೃಷ್ಣಯ್ಯನವರಿಂದ ಬರೆಯಿಸಿ ನಮ್ಮ ಗ್ರಂಥಮಾಲೆಯಲ್ಲಿ ಈ ಸಾರೆ ಪ್ರಕಟಿಸಿರುವೆವು. ವಾಚಕರು ಇದನ್ನು ಓದಿ, ಇದರ ಗುಣಾವಗುಣಗಳನ್ನು ಪ್ರತ್ಯಕ್ಷ ಕಂಡುಹಿಡಿಯಲಿರುವದರಿಂದ ನಾವು ಆ ಬಗ್ಗೆ ಈಗ ಏನೂ ಬರೆಯುವ ಗೋಜಿಗೆ ಹೋಗುವದಿಲ್ಲ.

ಶ್ರೀಮಾನ್ ಡಿ. ಎಸ್. ಕೃಷ್ಣಯ್ಯನವರು ಈ ಪುಸ್ತಕವನ್ನು ಶ್ರೀ ಶೇ. ಗ್ರಂಥಮಾಲೆಗಾಗಿ ಬರೆದು ಕೊಟ್ಟ ಬಗ್ಗೆ ನಾವು ಅವರಿಗೆ ಚಿರಋಣಿಯಾಗಿರುತ್ತೇವೆ.

ಆನಂದವನ<br>
ತಾ|| ೭—೭—೪೧

—ಪ್ರಕಾಶಕ

# ವೀರರಾಜ ವಿಜಯ

(ಐತಿಹಾಸಿಕ ಕಾದಂಬರಿ)

## ದಳ : : ೧

ಮಡಿಕೇರಿಯಿಂದ ಹದಿನೈದು ಮೈಲುಗಳ ದೂರದಲ್ಲಿ ನೂರಂಬಾಡ ಎಂಬ ಗ್ರಾಮವೊಂದಿದ್ದಿತು. ಗ್ರಾಮದ ಸಮೀಪದಲ್ಲಿ ಒಂದು ಗೊಂಡಾರಣ್ಯ. ಅಲ್ಲಿ ನಾನಾ ಜಾತಿಯ ಮರಗಳು ನಿಬಿಡವಾಗಿ ಬೆಳೆದಿದ್ದವು. ಇವುಗಳ ಕೊಂಬೆಗಳೂ ಕೊಂಬೆಗಳಲ್ಲಿನ ಎಲೆಗಳೂ ಮರಗಳ ಸುತ್ತಲೂ ಅಗಲವಾಗಿ ಹರಡಿದ್ದು, ಸೂರ್ಯರಶ್ಮಿಯನ್ನು ಕೆಳಕ್ಕೆ ಬೀಳಗೊಡುತ್ತಿರಲಿಲ್ಲ. ನಡುಮಧ್ಯಾಹ್ನದಲ್ಲಿಯೂ ಆ ವನವಲ್ಲಿ ಬೆಳಕು ಬಹಳ ಅಸ್ಪುಟವಾಗಿದ್ದಿತು. ಆದರಿಂದ ಆ ವನವನ್ನು ಪ್ರವೇಶಿಸಲು ಜನರು ಬಹಳ ಅಂಜುತ್ತಿದ್ದರು. ಇಂಥಾ ಕಟ್ಟಡವಿಯಲ್ಲಿ ಒಂದು ದೊಡ್ಡದಾದ ಮಾವಿನ ಮರದ ಬುಡದಲ್ಲಿ ಕುಳಿತುಕೊಂಡು ಮೂವರು ಏನನ್ನೋ ಮಾತನಾಡಿಕೊಳ್ಳುತ್ತಿದ್ದರು. ಅವರಲ್ಲಿ ಒಬ್ಬನು ಬ್ರಾಹ್ಮಣನಾಗಿದ್ದನು. ಇವನಿಗೆ ಸುಮಾರು ನಲುವತ್ತು ವರ್ಷ ಪ್ರಾಯವಾಗಿರಬಹುದು. ಇವನು ಒಂದು ಪಂಚೆಯನ್ನು ಉಟ್ಟು ಇನ್ನೊಂದು ಧೋತರವನ್ನು ಹೊದ್ದಿದ್ದನು. ಉಳಿದ ಇಬ್ಬರು ಬಿಳಿ ಕುಪ್ಪಸವನ್ನು ತೊಟ್ಟಿದ್ದರು. ಇವರ ಕುಪ್ಪಸವು ಕುತ್ತಿಗೆಯಿಂದ ಮೊಣಕಾಲಿನ ವರೆಗೆ ಚಾಚಿದ್ದಿತು. ತಲೆಗೆ ವಸ್ತ್ರಗಳನ್ನು ಕಟ್ಟಿಕೊಂಡಿದ್ದರು. ಇವರು ಕೈಗಳಲ್ಲಿ ಒಂದೊಂದು ಒಡಿ ಕತ್ತಿಯನ್ನು ಹಿಡಿದುಕೊಂಡಿದ್ದರು. ಇವರು ಕೊಡಗರಾಗಿದ್ದರು. ಇವರ ಪ್ರಾಯವು ಸುಮಾರು ಮೂವತ್ತು ವರ್ಷಗಳೊಳಗಿದ್ದಿತು. ಅವರು ಸಂಭಾಷಣೋದ್ಯುಕ್ತರಾಗಿರಲು, ಅವರಲ್ಲಿ ಒಬ್ಬನು ಆ ಬ್ರಾಹ್ಮಣನನ್ನು ಕುರಿತು: "ಸ್ವಾಮೀ! ಸುಬ್ಬಯ್ಯ ಕರಣಿಕರೇ, ದೇಶದಲ್ಲೆಲ್ಲಾ ಟಿಪ್ಪುವಿನ ಸೈನಿಕರ ಕಾಟವು ಹೆಚ್ಚಾಯಿತು. ಎಲ್ಲಿ ನೋಡಿದರೂ ಹಿಂಸೆ, ಅತ್ಯಾಚಾರ, ಕೊಲೆಗಳು ನಡೆಯುತ್ತಲಿವೆ. ನಮ್ಮ ಹೆಂಗಸರಿಗೆ ಮರ್ಯಾದೆಯಿಂದ ಬದುಕುವುದು ಕಷ್ಟವಾಗಿದೆ. ಏನು ಮಾಡುವದಕ್ಕೂ ದಿಕ್ಕು ತೋಚದಾಗಿದೆ" ಎಂದನು. ಆಗ ಇನ್ನೊಬ್ಬನು

"ದಿನದಿನಕ್ಕೆ ಇವರ ಅತ್ಯಾಚಾರವು ಹೆಚ್ಚುತ್ತಲಿದೆ. ಇವತ್ತು ಒಂದು ಗ್ರಾಮ ದವರ ಮೇಲೆ ಅತ್ಯಾಚಾರ ನಡೆಸಿದರೆ ನಾಳೆ ಇನ್ನೊಂದು ಗ್ರಾಮದವರ ಮೇಲೆ ಅತ್ಯಾಚಾರ ನಡೆಸುವರು ಹೀಗಾಗಿ ದಿನಬೆಳಗಾದರೆ ಜನರು ತಮ್ಮ ಜೀವಕ್ಕೆ ಏನು ಅಪಾಯುವಾಗಬಹುದೋ, ತಮ್ಮ ಹೆಂಗಸರು-ಮಕ್ಕಳ ಅವಸ್ಥೆ ಏನಾಗ ಬಹುದೋ? ಎಂದು ಅಂಜಿಕೊಂಡಿರುವರು ಈ ಕಷ್ಟಕಾಲವು ಎಂದಿಗೆ ತೀರು ವುದೋ ಏನೋ! ನಮ್ಮ ರಾಜನಾದರೋ ಶಿರಿಯಾಪಟ್ಟಣದಲ್ಲಿ ಸೆರೆಯಲ್ಲಿ ದ್ದಾನೆ. ಅಂತೂ ನಮಗೆ ಜೀವಿಸುವುದೇ ಕಷ್ಟವಾಗಿದೆ."

ಬ್ರಾಹ್ಮಣ: 'ಹೌದು ಮಾಚು, ದೇಶದಲ್ಲೆಲ್ಲ ಜನರಲ್ಲಿ ಹಾ ಹಾ ಕಾರವುಂಟಾಗಿದೆ! ಏನಾದರೂ ಮಾಡಿ ನಾವು ಟಿಪ್ಪುವಿನ ಆಳಿಕೆಯನ್ನು ಕೊನೆಗಾಣಿಸಬೇಕು. ಇದಕ್ಕೆ ಮೊದಲು ನಾವು ನಮ್ಮ ರಾಜಕುಮಾರ ರನ್ನು ಸೆರೆಯಿಂದ ಬಿಡಿಸಬೇಕು. ವೀರರಾಜರು ಶೂರರು. ಅವರು ಕೊಡ ಗಿಗೆ ಬಂದರೆಂದರೆ, ಕೊಡಗು ಸ್ವತಂತ್ರವಾದ ತೆಯೇ ಸರಿ."

ಮಾಚು:—"ನೀವು ಹೇಳುವದು ಸರಿ: ಆದರೆ ನಮ್ಮ ರಾಜನನ್ನು ಬಿಡಿಸುವದು ಹೇಗೆ? ಶಿರಿಯಾಪಟ್ಟಣದ ಕೋಟೆಯು ಭದ್ರವಾಗಿದೆ. ಅಲ್ಲಿ ಪಹರೆಯು ಬಲವಾಗಿದೆ. ನಾವು ಯುದ್ಧಮಾಡಿ ಜಯಿಸಲಿಕ್ಕಾಗುತ್ತದೆಯೋ? ನನಗೆ ಯಾವ ದಾರಿಯೂ ಕಾಣುವದಿಲ್ಲ."

ಸುಬ್ಬಯ್ಯ:—"ಮಾಚು ಅಯ್ಯಪ್ಪ, ನೀವು ಅದಕ್ಕೆ ಅಂಜಬೇಡಿರಿ. ನಾನು ನಿಮಗೆ ಉಪಾಯವನ್ನು ಹೇಳಿಕೊಡುತ್ತೇನೆ" ಎಂದು ಏನನ್ನೋ ಅವರ ಕಿವಿಯಲ್ಲಿ ಪಿಸಿಪಿಸಿ ಮಾತಾಡಿದನು. ಈ ಮಾತನ್ನು ಕೇಳಿ ಅವ ರಿಬ್ಬರ ಮುಖಗಳೂ ಪ್ರಫುಲ್ಲಿತವಾದವು ಅವರು ಹಾಗೇ ಮಾಡೋಣವೆಂದು ಹೇಳಿ, ಅಲ್ಲಿಂದ ಹೊರಟರು. ಅವರು ಹೊರಟು ಸುಮಾರು ಐವತ್ತು ಮಾರು ಬರುವವರೊಳಗಾಗಿ ದೂರದಿಂದ ಒಂದೇಸವನೆ "ಅಯ್ಯೋ! ನನ್ನನ್ನು ಕೊಂದು ಹಾಕುತ್ತಾರೆ ಯಾರಾದರೂ ನನ್ನನ್ನು ಬದುಕಿಸಿರಿ, ಯಾರಾದರೂ ನನ್ನನ್ನು ಬದುಕಿಸಿರಿ, ನನ್ನನ್ನು ಕೊಂದುಹಾಕುತ್ತಾರೆ!" ಎಂದು ಗಟ್ಟಿಯಾಗಿ ಒಬ್ಬ ಹೆಂಗಸಿನ ಆರ್ತನಾದವು ಕೇಳಿಸಿತು. ಆಗ ಮಾಚು ಮತ್ತು ಅಯ್ಯಪ್ಪನೆಂಬ ಆತನ ಸಂಗಡಿಗ ಇವರು ಆ ಕೂಗು ಬರುತ್ತಿದ್ದ ಕಡೆಗೆ ಓಡಿ ಹೋದರು. ಹಾಗೆ ಸ್ವಲ್ಪ ದೂರ ಹೋಗುವಾಗ ಅವರಿಗೆ ಒಂದು ಊರು ಕಾಣಿಸಿತು. ಊರಿನಲ್ಲಿ ಅನೇಕ ಮನೆಗಳು ಉರಿಯುತ್ತಿದ್ದು, ಆಕಾ

ಠಕ್ಕೆ ಹೊಗೆಯೇಳುತ್ತಿತ್ತು. ಒಬ್ಬ ಎಳೆಪ್ರಾಯದ ಸ್ತ್ರೀಯು "ಅಯ್ಯೋ! ನನ್ನನ್ನು ಕಾಪಾಡಿರಿ, ನನ್ನನ್ನು ಕೊಂದುಹಾಕುತ್ತಾರೆ!" ಎಂದು ಕೂಗುತ್ತ ಕಾಡಿನ ಕಡೆಗೆ ಓಡುತ್ತೋಡುತ್ತ ಬರುತ್ತಿದ್ದಳು. ಅವಳ ಹಿಂದಿನಿಂದ ಎರಡು-ಮೂರು ಜನ ಸಿಪಾಯಿಗಳು ಅವಳನ್ನು ಬೆನ್ನಟ್ಟಿಕೊಂಡು ಬರುತ್ತಿದ್ದರು ಆಕೆ ಎಷ್ಟಾದರೂ ಹೆಂಗಸು. ಅವಳಿಗೆ ಗಂಡಸರ ಹಾಗೆ ಜೋರಾಗಿ ಓಡುವ ದಕ್ಕಾಗುತ್ತದೆಯೇ? ಅವಳು ಕಾಡಿನ ಅಂಚಿಗೆ ಸುಮಾರು ಒಂದು ಫರ್ಲಾಂಗು ದೂರ ಬರುವಷ್ಟರಲ್ಲಿ ಸೋತು ಬಿದ್ದುಬಿಟ್ಟಳು. ಆಗ ಆ ಸಿಪಾಯಿಗಳು ಓಡಿ ಬಂದು ಅವಳನ್ನು ಹಿಡಿದುಕೊಂಡರು. ಆ ಸಮಯಕ್ಕೆ ನಮ್ಮ ಇಬ್ಬರು ಯುವಕರೂ ಆ ಕಾಡಿನ ಅಂಚಿಗೆ ತಲುಪಿದ್ದರು. ಆಗ ಅವರ ಕಣ್ಣಿಗೆ ಈ ದೃಶ್ಯವು ಗೋಚರಿಸಿತು. ಒಡನೆಯೇ ತಮ್ಮ ಸ್ತ್ರೀಯೊಬ್ಬಳನ್ನು ಶತ್ರುಗಳು ಅತ್ಯಾಚಾರಕ್ಕೊಳಪಡಿಸುವದನ್ನು ನೋಡಿ ಇವರ ಕಣ್ಣುಗಳು ಕೆಂಪಾದವು. ತತ್ಕ್ಷಣವೇ ಇವರು ತಮ್ಮ ಕತ್ತಿಗಳನ್ನು ಕೈಯಲ್ಲಿ ಹಿಡಿದುಕೊಂಡು ವೇಗವಾಗಿ ಆ ಸಿಪಾಯಿಗಳ ಕಡೆಗೆ ಓಡಿ ಹೋದರು. ಅಕಸ್ಮಾತ್ತಾಗಿ ತಮ್ಮ ಮೇಲೆ ಇಬ್ಬರು ತರುಣರು ಏರಿ ಬರುವದನ್ನು ಈ ಸಿಪಾಯಿಗಳು ಕಂಡು ದಿಗಿಲುಗೊಂಡರು. ಅಷ್ಟರೊಳಗಾಗಿ ಮಾಚುವು ಬಂದು ತನ್ನ ಒಡಿಕತ್ತಿಯಿಂದ ಒಬ್ಬ ಸಿಪಾಯಿಗೆ ಹೊಡೆದನು. ಆ ಪೆಟ್ಟು ಅವನ ತಲೆಯನ್ನು ತಪ್ಪಿ ಬಲಗಿವಿಯನ್ನು ಒರೆಸಿಕೊಂಡು ಬಲಭುಜದ ಮೇಲೆ ಬಿತ್ತು. ಆಗ ಅವನ ಭುಜದಿಂದ ಕೈ ಕತ್ತರಿಸಿ ಕೆಳಕ್ಕೆ ಬಿತ್ತು. ಆ ಸಿಪಾಯಿಯು ನೆಲಕ್ಕೆ ಬಿದ್ದುಬಿಟ್ಟನು! ಇಷ್ಟರಲ್ಲಿ ಇನ್ನಿಬ್ಬರು ಸಿಪಾಯಿಗಳು ಇವರನ್ನು ಹೊಡೆಯುವದಕ್ಕೆ ಕತ್ತಿಯನ್ನು ಎತ್ತಿದರು. ಆಗ ಅಯ್ಯಪ್ಪನು ಒಬ್ಬ ಸಿಪಾಯಿಯ ಕತ್ತಿಗೆ ತನ್ನ ಒಡಿಕತ್ತಿಯಿಂದ ಹೊಡೆದನು. ಕತ್ತಿಯು ಎರಡು ತುಂಡಾಯಿತು. ಸಿಪಾಯಿಯು ಓಡತೊಡಗಲು, ಅಯ್ಯಪ್ಪನೂ ಮಾಚುವೂ ಇನ್ನೊಬ್ಬ ಸಿಪಾಯಿಯೊಡನೆ ಯುದ್ಧಮಾಡುತ್ತಲಿರಲು, ಈ ಮಧ್ಯೆ ಕೈ ತುಂಡಾಗಿ ಬಿದ್ದಿದ್ದ ಸಿಪಾಯಿಯು ಎದ್ದು ಹಿಂದಿನಿಂದ ಮಾಚುವಿನ ತಲೆಗೆ ತನ್ನ ಎಡಗೈಯಲ್ಲಿ ಹಿಡಿದಿದ್ದ ಕತ್ತಿಯಿಂದ ಹೊಡೆಯಲು ಕೈ ಎತ್ತಿದನು ಅಷ್ಟರಲ್ಲಿ ಸುಬ್ಬಯ್ಯನು ಅವನ ತಲೆಗೆ ಹೊಡೆದು ಅವನನ್ನು ಬೀಳಿಸಿಬಿಟ್ಟನು. ಕತ್ತಿಯನ್ನು ಎತ್ತಿದ್ದ ಅವನ ಕೈಗೆ ಬಲವಾಗಿ ಇನ್ನೊಂದು ಪೆಟ್ಟು ಬಿದ್ದು ಅವನ ಕತ್ತಿಯು ದೂರದಲ್ಲಿ ಹೋಗಿಬಿತ್ತು. ಅವನು ಹಿಂದಿರುಗಿ ನೋಡ

ಲಾಗಿ ಸುಬ್ಬಯ್ಯನು ಕೈಯಲ್ಲಿ ದಪ್ಪವಾದ ಒಂದು ನಾಗಬೆತ್ತವನ್ನು ಹಿಡಿದುಕೊಂಡು ನಿಂತಿದ್ದನು. ಆಗ ಮಾಚುವಿನ ಸಂಗಡ ಯುದ್ಧಮಾಡುತ್ತಲಿದ್ದ ಸಿಪಾಯಿಯು ಇನ್ನು ತನಗೆ ಉಳಿಗಾಲವಿಲ್ಲವೆಂದು ತಿಳಿದು ಓಡಿ ಹೋದನು. ಮಾಚು ಮತ್ತು ಅಯ್ಯಪ್ಪ ಇವರಿಗೂ ಒಂದೆರಡು ಗಾಯಗಳಾಗಿದ್ದುವು. ಈಗ ಅವರಿಗೆ ಆ ಹೆಣ್ಣುಮಗಳ ಯೋಚನೆಯುಂಟಾಯಿತು. ಆ ಹೆಣ್ಣುಮಗಳು ಇವರ ಯುದ್ಧಮಧ್ಯದಲ್ಲಿ ಎದ್ದು ಒಂದು ಮರದ ಮರೆಯಲ್ಲಿ ನಿಂತುಕೊಂಡು ಇವರು ಯುದ್ಧಮಾಡುವದನ್ನು ನೋಡುತ್ತಿದ್ದಳು; ಮನಸ್ಸಿನಲ್ಲಿ ಆ ಕೊಡಗು ಯುವಕರಿಗೆ ಜಯವಾಗಲೆಂದು ದೇವರನ್ನು ಪ್ರಾರ್ಥಿಸುತ್ತಲಿದ್ದಳು. ಆ ಯುವಕರು ಸುತ್ತಲೂ ನೋಡಿ ಕೊನೆಗೆ ಆ ಯುವತಿಯು ಮರದ ಮರೆಯಲ್ಲಿ ನಿಂತಿರುವುದನ್ನು ಕಂಡರು ಯುವಕರು ತನ್ನೆಡೆಗೆ ದೃಷ್ಟಿಯನ್ನು ಪಸರಿಸಿದ್ದರಿಂದ ಆಕೆಗೆ ಲಜ್ಜೆಯುಂಟಾಗಿ ಮುಖವನ್ನು ತಗ್ಗಿಸಿದಳು. ಅವಳ ಮುಖವೆಲ್ಲ ಕೂಡಲೆ ರಕ್ತವರ್ಣವನ್ನು ತಾಳಿತು.

ಅವಳನ್ನು ಹೇಗೆ ಮಾತಾಡಿಸುವದೆಂದು ಈ ಯುವಕರಿಗೆ ಸಂಕೋಚವಾಯಿತು. ಆಗ ಸುಬ್ಬಯ್ಯನು ಆ ಹೆಣ್ಣುಮಗಳನ್ನು ಕರೆದು:—'ಅಮ್ಮಾ, ಇತ್ತ ಬಾ. ನಾಚಿಕೆ ಪಡಬೇಡ. ನೋಡು, ಈ ಯುವಕರು ಇಪ್ಪೊತ್ತು ಸಮಯಕ್ಕೆ ಸರಿಯಾಗಿ ಬಾರದಿದ್ದರೆ ನೀನು ಮುಸಲ್ಮಾನರ ಪಾಲಾಗುತ್ತಿದ್ದೆ. ನೀನು ಯಾರು?' ಎಂದು ಕೇಳಿದನು.

ಆಗ ತರುಣಿಯು ಅವರೆಲ್ಲರನ್ನೂ ಕೃತಜ್ಞತಾಪೂರ್ವಕ ದೃಷ್ಟಿಯಿಂದ ನೋಡುತ್ತ:—"ನೀವು ನನ್ನನ್ನು ಬದುಕಿಸಿದಿರಿ. ಅಲ್ಲಿ ಕಾಣುವ ದೊಡ್ಡ ಮನೆಯು ನಮ್ಮದು ಇವತ್ತು ಮಧ್ಯಾಹ್ನ ಅಕಸ್ಮಾತ್ತಾಗಿ ಹತ್ತಿಪ್ಪತ್ತು ಮುಸಲ್ಮಾನ ಸಿಪಾಯಿಗಳು ಬಂದು ನಮ್ಮ ಮನೆ ಮತ್ತು ನಮ್ಮ ನೆರೆಕೇರಿಯ ಮನೆಗಳ ಮೇಲೆ ಬಿದ್ದರು. ನಮ್ಮ ಮನೆಯಲ್ಲಿ ನನ್ನ ವೃದ್ಧ ತಂದೆ-ತಾಯಿಗಳೂ ನನ್ನ ತಮ್ಮನೂ ನಾನೂ ಇದ್ದೆವು. ಆ ಸಿಪಾಯಿಗಳು ನನ್ನ ತಂದೆಯನ್ನೂ ತಮ್ಮನನ್ನೂ ಹೊಡೆದು ಕಂಬಕ್ಕೆ ಕಟ್ಟಿ ಹಾಕಿ, ಮನೆಯನ್ನು ಸುಲಿಗೆ ಮಾಡುತ್ತಿದ್ದರು ಆಗ ನಾನು ಹೆದರಿ ಮನೆಯ ಹಿಂದುಗಡೆಯ ಕಾಡಿಗೆ ಅಡಗಿಕೊಳ್ಳುವದಕ್ಕೆ ಓಡಿಹೋಗುತ್ತಿದ್ದೆನು. ಆಗ ಸಿಪಾಯಿಗಳಾರೋ ನನ್ನನ್ನು ಕಂಡು ಬೆದರಿಸಿಕೊಂಡು ಬಂದರು. ಆಗ ನನ್ನ ಭಾಗದ ದೇವತೆಗಳ ಹಾಗೆ ನೀವು ಮೂವರೂ ಬಂದಿರಿ.'' ಎಂದು ಹೇಳಿ, ಆ ಯುವಕರನ್ನು ಕಡೆಗಣ್ಣ

ನೋಟದಿಂದ ನೋಡಿದಳು. ಸುಬ್ಬಯ್ಯನು: 'ಅಮ್ಮಾ! ನೀನು ಈಗ ಒಬ್ಬಳೇ ನಿನ್ನ ಮನೆಗೆ ಹೋಗಬಲ್ಲೆಯಾ?' ಎಂದು ಕೇಳಿದನು.

ಹೆಣ್ಣುಮಗಳು:—'ಕೂಡದು. ನನಗೆ ಬಹಳ ಭಯವಾಗುತ್ತದೆ. ನನ್ನ ತಂದೆಯ ಅವಸ್ಥೆ ಏನಾಗಿದೆಯೋ ಏನೊ! ನೀವು ದಯವಿಟ್ಟು ನಮ್ಮ ಮನೆಗೆ ಬರಬೇಕು' ಎಂದು ಹೇಳುತ್ತ ಅಳತೊಡಗಿದಳು. ಆಗ ಸುಬ್ಬಯ್ಯನೂ ಆ ತರುಣವೀರನೂ ಆ ಹೆಣ್ಣುಮಗಳೊಡನೆ ಹೊರಟರು. ಆ ಹೆಣ್ಣುಮಗಳು ಹೋಗುತ್ತಿರುವಾಗ ಆಗಾಗ ಮಾಚುವನ್ನು ಓರೆಗಣ್ಣಿನಿಂದ ನೋಡುತ್ತಿದ್ದಳು. ಹಾಗೆಯೇ ಮಾಚುವೂ ಅವಳನ್ನು ನೋಡುತ್ತಿದ್ದನು. ಒಮ್ಮೊಮ್ಮೆ ಅವರ ದೃಷ್ಟಿಯು ಸಂಧಿಸಿದಾಗ ಅವಳಿಗೆ ಲಜ್ಜೆಯಿಂದ ಮುಖವು ಕೆಂಪಾಗುತ್ತಿತ್ತು. ಆಗ ಆಕೆಯು ತನ್ನ ತಲೆಯನ್ನು ತಗ್ಗಿಸುತ್ತಲಿದ್ದಳು ಹೀಗೆ ನಡೆಯುತ್ತ ಸ್ವಲ್ಪ ದೂರ ಮುಂದಕ್ಕೆ ಹೋಗುವಾಗ ಅವಳ ಮನೆಯು ಸಿಕ್ಕಿತು. ಮನೆಯಲ್ಲಿ ಒಂದು ಕಡೆ ಜನರು ಗುಂಪು ಕಟ್ಟಿಕೊಂಡಿದ್ದರು. ಕೆಲವರು ಹೆಂಗಸರು ಅಲ್ಲಿ ಅಳುತ್ತಿದ್ದರು. ಸಿಪಾಯಿಗಳು ಮನೆಯಲ್ಲಿ ಇದ್ದುಬಿದ್ದುದನ್ನೆಲ್ಲ ಸುಲಿಗೆ ಮಾಡಿ, ಕೆಲವು ಮನೆಗಳಿಗೆ ಬೆಂಕಿ ಹಚ್ಚಿ ಹೋಗಿದ್ದರು. ನಮ್ಮ ತರುಣರೂ ಸುಬ್ಬಯ್ಯನೂ ಅಲ್ಲಿಗೆ ತಲುಪಿದ ಕೂಡಲೆ ಕೆಲವು ಹೆಂಗಸರ ರೋದನವು ಹೆಚ್ಚಾಯಿತು, ಕೆಲವರು ಸಿಪಾಯಿಗಳ ಕೈಗೆ ಸಿಕ್ಕಿಬಿದ್ದಿದ್ದ ಹೆಣ್ಣುಮಗಳು ಸುರಕ್ಷಿತವಾಗಿ ಹಿಂದಕ್ಕೆ ಬಂದದ್ದನ್ನು ನೋಡಿ ಓಡಿ ಹೋಗಿ ಆಕೆಯನ್ನು ತಪ್ಪಿಕೊಂಡರು. ನಮ್ಮ ಮೂವರು ಅಲ್ಲಿಗೆ ಹೋಗಿ ನೋಡಲಾಗಿ ಆ ಹೆಣ್ಣುಮಗಳ ವೃದ್ಧತಂದೆಯು ಕೆಳಗೆ ಸತ್ತು ಬಿದ್ದಿದ್ದನು ಅವನ ಕಿರಿಯ ಮಗನೂ ಪೆಟ್ಟಿನ ಬಾಧೆಯಿಂದ ನರಳುತ್ತಿದ್ದನು. ಮುದುಕನ ಹೆಂಡತಿಯು ಒಂದು ಸಾರಿ ಗಂಡನ ಕಡೆಗೂ ಮತ್ತೊಂದು ಸಾರಿ ಮಗನ ಕಡೆಗೂ ನೋಡುತ್ತ ಎದೆಯನ್ನು ಬಡಿದುಕೊಂಡು ಅಳುತ್ತಲಿದ್ದಳು. ಆಗ ನಮ್ಮ ಹೆಣ್ಣುಮಗಳು ತನ್ನ ತಾಯಿಯ ಮುಂದೆ ಹೋಗಿ ಬಿದ್ದಳು. ಆಗ ದುಃಖದಲ್ಲಿ ಮುಳುಗಿ ಹೋಗಿದ್ದ ತಾಯಿಯು ಕ್ಷಣಕಾಲ ಆಶ್ಚರ್ಯದಿಂದ ಸ್ತಂಭಿತಳಾದಳು. ಆಕೆಯು ತನ್ನ ಮಗಳು ಟಿಪ್ಪುವಿನ ಸೈನಿಕರ ಪಾಲಾಗಿ ಮಡಿಕೇರಿಯಲ್ಲಿ ಯಾರಾದರೊಬ್ಬ ಅಧಿಕಾರಿಯ ಜನಾನಕ್ಕೆ ಸೇರಿಸಲ್ಪಡುತ್ತಾಳೆಂದು ತಿಳಿದಿದ್ದಳು. ಈಗ ಆಕೆಯು ತನ್ನ ಮಗಳನ್ನು ಕುರಿತು:—'ಪೂವಿ! ನೀನು ಹೇಗೆ ಆ ಕಟುಕರ ಕೈಯಿಂದ

ತಪ್ಪಿಸಿಕೊಂಡು ಬಂದೆ?' ಎಂದು ಕೇಳುತ್ತ ಅವಳನ್ನು ಎದೆಗವಚಿಕೊಂಡಳು. ಆಗ ಪೂವಮ್ಮನು ಮಾಚು ಮತ್ತು ಅಯ್ಯಪ್ಪ ನಿಂತಿದ್ದ ಕಡೆ ಒಂದು ಸಾರೆ ಮುಖವೆತ್ತಿ ತಿರುಗಿ ಮುಖ ತಗ್ಗಿಸಿಬಿಟ್ಟಳು. ಆಗ ಮಾಚುವೂ ಅಯ್ಯಪ್ಪನೂ ಆ ಮುದುಕಿಯ ಹತ್ತಿರ ಬಂದು ಅವಳಿಗೆ ನಮಸ್ಕರಿಸಿ:--'ತಾಯಿ! ದುಖಪಡಬೇಡಿ. ದುಃಖಪಟ್ಟರೆ ಸತ್ತವರು ಜೀವಂತರಾಗುವದಿಲ್ಲ ಇನ್ನು ಮುಂದಿನ ಕಾರ್ಯವನ್ನು ಮಾಡುವ ಆಲೋಚನೆ ಮಾಡಿ ನಾವು ನಿಮಗೆ ಸಹಾಯ ಮಾಡುವೆವು.'

ಆಗ ಆ ಮುದುಕಿಯು ಹೆಣದ ಮೇಲೆ ಬಿದ್ದು ಇನ್ನಷ್ಟು ಅಳತೊಡಗಿದಳು ಇತ್ತಲಾಗಿ ಮಾಚುವೂ ಅಯ್ಯಪ್ಪನೂ ಸಂಕಟಪಡುತ್ತಲಿದ್ದ ಹುಡುಗನನ್ನು ಉಪಚರಿಸಿದರು. ಸ್ವಲ್ಪ ಹೊತ್ತಿನಲ್ಲಿ ಆ ಹುಡುಗನು ಚೇತರಿಸಿಕೊಂಡೆದ್ದನು. ಆಗ ಮುದುಕಿಯು ತನ್ನ ಮಗಳ ಮತ್ತು ಮಗನ ಮುಖವನ್ನು ನೋಡಿ ಸ್ವಲ್ಪ ಸಮಾಧಾನ ಮಾಡಿಕೊಂಡಳು. ಅನಂತರ ಮಾಚು, ಅಯ್ಯಪ್ಪ ಮತ್ತು ನೆರೆದಿದ್ದ ಜನರೆಲ್ಲಾ ಸೇರಿ ಅಲ್ಲಿ ಸತ್ತು ಬಿದ್ದಿದ್ದ ಮೃತಶರೀರಗಳನ್ನು ಸಂಸ್ಕಾರ ಮಾಡಿದರು.

ಈ ಮಧ್ಯೆ ಅಲ್ಲಿದ್ದ ಜನರೆಲ್ಲರೂ ಮಾಚು ಮತ್ತು ಅಯ್ಯಪ್ಪ ಇವರನ್ನು ನೋಡಿ, "ನಮ್ಮ ದೇಶಕ್ಕೆ ಇಂಥಾ ದುರವಸ್ಥೆಯು ಬಂತಲ್ಲಾ! ಈ ದುರ್ದೆಶೆಯು ಎಂದು ಕೊನೆಗಾಣುವುದು?" ಎಂದು ಹೇಳಿ ತಮ್ಮ ಕಷ್ಟಗಳನ್ನು ಹೇಳಿಕೊಂಡರು ಇವರು ಅವರಿಗೆ, "ಹೆದರಬೇಡಿ. ಬೇಗನೆ ನಮಗೆ ಒಳ್ಳೇ ದಿನಗಳು ಬರುವವು. ನಮ್ಮ ರಾಜನು ಬೇಗ ಬರುವನು. ನೀವು ಗುಟ್ಟಾಗಿ ನಮ್ಮವರಿಗೆಲ್ಲಾ ಹೇಳಿ ಕತ್ತಿ, ಕೋವಿ, ಮದ್ದುಗಳನ್ನು ಸಂಗ್ರಹ ಮಾಡಿಕೊಂಡು ಇಟ್ಟಿರಿ" ಎಂದು ಹೇಳಿ ಹೊರಡುವುದಕ್ಕನುವಾದರು. ಆಗ ಪೂವಮ್ಮನು ತಾಯಿಯ ಹತ್ತಿರ ಬಂದು ಏನನ್ನೋ ಮೆಲ್ಲಗೆ ನುಡಿದಳು. ಆಗ ತಾಯಿಯು ಅವರ ಬಳಿಗೆ ಬಂದು, "ಅಪ್ಪಾ, ನೀವು ಇವತ್ತು ಹೋಗಬೇಡಿ. ನೀವು ಬಹಳ ಆಯಾಸಗೊಂಡಿರುವಿರಿ ನೀವು ಇಂದು ವಿಶ್ರಮಿಸಿಕೊಂಡು ಹೋಗಿ" ಎಂದಳು. ಆಗ ಪೂವಮ್ಮನು ಮಾಚುವಿನ ಕಡೆಗೆ ನೀವು ಇಂದು ಹೋಗಬೇಡವೆಂದು ದೈನ್ಯೋಕ್ತಿಯಿಂದ ಬೇಡುವಳೋ ಎಂಬ ದೃಷ್ಟಿಯಿಂದ ನೋಡಿದಳು. ಆಗ ಮಾಚುವು ಮನಸ್ಸನ್ನು ನೋಯಿಸುವದಕ್ಕೆ ಇಷ್ಟಪಡದೆ, ಆ ಮುದುಕಿಯ ಮಾತಿಗೆ ಒಪ್ಪಿದನು. ಅಯ್ಯಪ್ಪನೂ

ನಿಂತನು. ಪೂವಮ್ಮನೂ ತರುಣರೂ ಪರಸ್ಪರ ಮಾತನಾಡಿರಲಿಲ್ಲ. ಪೂವಮ್ಮನು ಅವಿವಾಹಿತ ಕನ್ಯೆಯಾದ್ದರಿಂದ ಅವಳು ತರುಣರೊಡನೆ ಮಾತನಾಡುವುದಕ್ಕೆ ನಾಚುತ್ತಿದ್ದಳು; ಆದರೆ ಈಗ ಅವಳ ಮೇಲೆ ಅವರು ಮಾಡಿದ ಉಪಕಾರದ ಪಾಶವು ಅವಳನ್ನು ಅವರ ಕಡೆಗೆ ಎಳೆಯಿತು. ಅಷ್ಟುಮಾತ್ರವಲ್ಲ, ಅವರಿಬ್ಬರೊಳಗೆ ಮಾಚುವನ್ನು ಅವಳು ಪ್ರೀತಿಸಲಾರಂಭಿಸಿದ್ದರಿಂದ ಅವನಲ್ಲಿ ಆಕೆಯ ಪ್ರೇಮಾಂಕುರವು ಮೊಳೆಯಿತು ಇದ್ದಕ್ಕಿದ್ದ ಹಾಗೆ ಅದು ಬೆಳೆದು ಮರವಾಗತೊಡಗಿತು ಇದು ಮಾಚುವಿಗೆ ತಿಳಿಯದಿರಲಿಲ್ಲ. ಅವಳನ್ನು ಇವರು ಕರೆತಂದು ಬಿಟ್ಟಾಗಿನಿಂದ ಅದು ದುಃಖದ ಸಮಯವಾದರೂ ಅವಳು ಒಮ್ಮೊಮ್ಮೆ ಮಾಚುವಿನ ಕಡೆಗೆ ತನ್ನ ಓರೆನೋಟವನ್ನು ಬೀರಿ ತನ್ನ ಪ್ರೇಮವನ್ನು ವ್ಯಕ್ತಪಡಿಸುತ್ತಿದ್ದಳು ಮಾಚುವಿಗೂ ಇವಳ ಮೇಲೆ ಮನಸ್ಸು ಹರಿಯಿತು. ನೋಡುವುದಕ್ಕೆ ಸುಂದರಿ. ವಯಸ್ಸಿನಲ್ಲಿ ಆಗ ತಾನೇ ಯೌವನದಲ್ಲಿ ಕಾಲಿಟ್ಟಿದ್ದಳು ಗುಣವು ಚೆನ್ನಾಗಿರುವಂತೆ ತೋರುತ್ತಿತ್ತು ಅವನು ಮನಸ್ಸು ಸೋಲದೆ ಏನು ಮಾಡ್ಯಾನ? ಹಾಗಾಗಿ ಅವನು ಆ ದಿವಸ ಅಲ್ಲಿ ಆ ತನ್ನ ಸ್ನೇಹಿತನೊಡನೆ ನಿಂತನು.

---

## ದಳ :: ೨

ಬೇಗನೆ ರಾತ್ರಿಯಾಯಿತು. ಸುತ್ತುಮುತ್ತಲಿನ ಜನರೆಲ್ಲರೂ ತಮ್ಮ ಮನೆಗಳಿಗೆ ಹೋಗಿ ಟಿಪ್ಪುವಿನ ಸೈನಿಕರ ಸುಲಿಗೆಯಿಂದುಳಿದಿದ್ದ ಪದಾರ್ಥಗಳನ್ನು ಸಂಪಡಿಸಿ ತಮ್ಮ ಮುಂದಿನ ಕಾರ್ಯವನ್ನು ಚಿಂತಿಸತೊಡಗಿದರು. ಇತ್ತಲಾಗಿ ಪೂವಮ್ಮನು ಲಜ್ಜೆಯಿಂದ ಅಳುಕುತ್ತಾ-ಅಳುಕುತ್ತಾ ತನ್ನ ತನ್ನ ತಾಯಿಗೆ ಮನಸ್ಸಿನ ಇಂಗಿತವನ್ನು ತಿಳಿಸಿದಳು. ಅವಳಿಗೆ ಮೊದಲು ತನ್ನ ಮಗಳು ತಾನೇ ಗಂಡನನ್ನು ಆರಿಸಿಕೊಂಡದ್ದಕ್ಕೆ ಆಶ್ಚರ್ಯವಾಯಿತು ಎಂತಹ ಹುಡುಗಿಯಿವಳು? ಗಂಡು ಬೀರಿ. ನಾವು ಆರಿಸುವವರನ್ನು ಕಾಯುವುದರ ಬದಲು ತಾನೇ ಈತನನ್ನು ನಾನು ಮದುವೆಯಾಗಬೇಕು, ಎಂದು ಹೇಳುತ್ತಾಳೆ. ಕಾಲವು ತೀರಾ ಕೆಟ್ಟುಹೋಯಿತು! ಎಂದು ಯೋಚಿಸಿದಳು; ಆದರೆ ಆಗಿನ ಕಷ್ಟಕಾಲದಲ್ಲಿ ತನ್ನ ಮಗಳನ್ನು ಯಾರಾದರೊಬ್ಬ ಯೋಗ್ಯ ತರುಣನಿಗೆ ಕೊಟ್ಟು ಆದಷ್ಟು ಬೇಗನೆ ತನ್ನ ಜವಾಬ್ದಾರಿಯನ್ನು ಕಳೆದುಕೊಳ್ಳು

ವದು ಒಳ್ಳೆಯದೆಂದು ಅವಳಿಗೆ ತೋರಿತು. ಶತ್ರುಗಳು ಗ್ರಾಮ-ಗ್ರಾಮ ಸೂರೆಮಾಡುತ್ತಿದ್ದರು. ಯಾರಿಗೂ ನೆಮ್ಮದಿಯಿರಲಿಲ್ಲ. ಪ್ರಾಯದ ಹೆಂಗಸರಿಗಂತೂ ಉಳಿಗಾಲವಿರಲಿಲ್ಲ. ಅವರಿಗೆ ತಮ್ಮ ಮಾನವನ್ನು ರಕ್ಷಿಸಿಕೊಂಡು ಇರುವುದೆಂದರೆ ಜೀವಕ್ಕೆ ಜೀವ ಬಂದಂತಾಗುತ್ತಿತ್ತು. ಆದುದರಿಂದ ಈಗ ಯೋಗ್ಯ ತರುಣನು ಬಂದಾಗ, ತಾನು ಮಗಳನ್ನು ಕೊಟ್ಟರೆ ತನ್ನ ಭಾರವು ತಪ್ಪಿತು, ಎಂದು ಯೋಚಿಸಿದಳು; ಆದರೆ ಇದಕ್ಕೆ ಈಗ ಅವಳ ಗಂಡನು ಶೀರಿಷ್ಟರಿಂದ ಅವಳ ಮಗನ ಸಮ್ಮತಿ ಬೇಕಾಗಿದ್ದಿತು.

ಟಿಪ್ಪುವಿನ ಸೈನಿಕರು ಮನೆಯನ್ನು ಸುಲಿಗೆ ಮಾಡಿ ಮನೆಯ ಯಜಮಾನನನ್ನು ಹೊಡೆದು ಕಟ್ಟಿಹಾಕಿದ್ದನ್ನು ಕಾಡಿನಿಂದ ಅಡಗಿ ನೋಡುತ್ತಲಿದ್ದ ಒಬ್ಬ ಹುಡುಗನು ಈ ವರ್ತಮಾನವನ್ನು ತನ್ನ ನೆರೆಗ್ರಾಮದವರಿಗೆ ಹೇಳಿದ್ದನು. ಆ ಗ್ರಾಮದಿಂದ ಬೆಪ್ಪಸಾಡಿಗೆ ಹೋಗುವವನೊಬ್ಬನು ಆ ಕೂಡಲೆ ಹೊರಟು, ವೇಗವಾಗಿ ನಡೆದು, ಈ ವರ್ತಮಾನವನ್ನು ಆ ಮುದುಕನ ಮಗನಿಗೆ ತಿಳಿಸಿದನು. ಈ ಕೆಟ್ಟ ವರ್ತಮಾನವನ್ನು ಕೇಳಿದಾಗ ಮಾದಪ್ಪನಿಗೆ ಸಿಡಿಲು ಬಡಿದ ಹಾಗಾಯಿತು. ಒಡನೆಯೇ ಮರುಮಾತನಾಡದೆ ಅವನು ತನ್ನ ಮನೆಗೆ ಹೊರಟರೂ ಆಗ ಅಲ್ಲಿದ್ದವರು ಅವನಿಗೆ ಬಹಳ ಜಾಗರೂಕತೆಯಿಂದ ಹೋಗಬೇಕೆಂದೂ, ಶತ್ರುಗಳ ಕೈಗೆ ಸಿಕ್ಕಿಬಿದ್ದರೆ ನಿನಗೆ ಒಳ್ಳೆಯದಾಗಲಿಕ್ಕಿಲ್ಲವೆಂದೂ ತಿಳಿಸಿದರು. ಮಾದಪ್ಪನು ಎಚ್ಚರದಿಂದ ಹೋಗುತ್ತೇನೆಂದು ಹೇಳಿ ತನಗೆ ವರ್ತಮಾನವನ್ನು ಕೊಟ್ಟ ಕೆಲಸದ ಹುಡುಗನನ್ನು ಜೊತೆಯಲ್ಲಿ ಕರೆಕೊಂಡು ಹೊರಟನು. ಕಾಡುದಾರಿಗಳಲ್ಲಿ ನಡೆಯುತ್ತ ತನ್ನ ಮನೆಗೆ ರಾತ್ರಿ ಸುಮಾರು ಹತ್ತುಘಂಟೆಗೆ ಬಂದು ತಲುಪಿದನು. ಅಲ್ಲಿ ಸ್ವಲ್ಪ ಹೊತ್ತು ಸುತ್ತಲೂ ಏನಾದರೂ ಗಲಭೆಯು ಕೇಳುತ್ತದೋ ಎಂದು ಆಲಿಸಿ ನೋಡಿದನು. ಏನೂ ಕೇಳಬರಲಿಲ್ಲ; ಆದರೆ ತನ್ನ ಮನೆಯ ದಕ್ಷಿಣ ದಿಕ್ಕಿನ ತೋಟದ ಬದಿಯಲ್ಲಿ ಬೆಂಕಿಯ ಬೆಳಕು ಅವನಿಗೆ ಕಾಣಿಸಿತು. ಆಗ ಅವನಿಗೆ ತಟಕ್ಕನೆ ಅದರ ಕಾರಣವು ತಿಳಿದು ಆಕಾಶವೇ ಅವನ ತಲೆಯ ಮೇಲೆ ಕಳಚಿಬಿದ್ದಂತಾಯಿತು. ತನ್ನ ಮನೆಯಲ್ಲಿ ಸಿಪಾಯಿಗಳು ಯಾರನ್ನೋ ಕೊಂದುಹಾಕಿರಬಹುದೆಂದು ಅವನಿಗೆ ನಿಶ್ಚಯವಾಯಿತು. ಅನಂತರ ಅವನು ಎದ್ದು ತನ್ನ ಮನೆಯ ಹಿಂದುಗಡೆಯ ತೋಟಕ್ಕೆ ನುಗ್ಗಿ ಶಬ್ದಮಾಡದೆ ಮೆಲ್ಲನೆ ಬಂದು ಮನೆಯ ಬಲಪಾರ್ಶ್ವದ ಒಂದು ಕೋಣೆಯ

ಹೊರಬದಿಯಲ್ಲಿ ನಿಂತನು. ಆ ಕೋಣೆಯು ಅವನ ತಂದೆಯು ಮಲಗುವ ಕೋಣೆಯಾಗಿತ್ತು. ಆ ಕೋಣೆಯಿಂದ ಅವನ ತಾಯಿಯು ಸಣ್ಣಸ್ವರದಿಂದ 'ಅಯ್ಯೋ! ನಮ್ಮ ಅವಸ್ಥೆಯು ಹೀಗಾಯಿತಲ್ಲ. ದೇವರು ನಮಗೆ ಇಂಥಾ ಕಷ್ಟವನ್ನು ಯಾತಕ್ಕೆ ಕೊಟ್ಟನೋ? ಪೂರ್ವಜನ್ಮದಲ್ಲಿ ನಾವೇನು ಪಾಪವನ್ನು ಮಾಡಿದ್ದೆವೋ?' ಎಂದು ಅಳುತ್ತಾ ಇದ್ದಳು. ಹತ್ತಿರದಲ್ಲಿಯೇ ಇದ್ದ ಅವಳ ಎರಡನೆಯ ಮಗನು ಆಗಾಗ 'ಅಮ್ಮಾ! ಮೈ ಕೈ ಬಹಳ ನೋವು. ನಿದ್ರೆ ಬರುವದಿಲ್ಲವೆಂದು ನರಳುತ್ತಿದ್ದನು. ಪೂವಮ್ಮನು ಅಳಬೇಡವಪ್ಪಾ ಎಂದು ಅವನ ಮೈಯನ್ನು ಆಗಾಗ ಸವರುತ್ತಾ ಸಂತೈಸುತ್ತಿದ್ದಳು.

ಈ ದೃಶ್ಯವನ್ನು ಗೋಡೆಯ ಕಿಂಡಿಯಿಂದ ನೋಡಿ ಮತ್ತು ತನ್ನ ತಾಯಿಯ ಅಳುವಿಕೆಯನ್ನೂ ದುಃಖವನ್ನೂ ನೋಡಿ ಮಾದಪ್ಪನಿಗೆ ಎದೆಯೊಡೆದ ಹಾಗಾಯಿತು. ಆಗ ಅವನು ತನ್ನ ತಂಗಿಯನ್ನು ಕರೆದು ಬಾಗಿಲು ತೆರೆಸಿ ಒಳಗೆ ಹೋಗೋಣವೆಂದೆನಿಸಿತು; ಆದರೆ ಅದಕ್ಕೆ ಮೊದಲು ಮನೆಯ ಅಕ್ಕಪಕ್ಕಗಳಲ್ಲಿ ಯಾರಾದರೂ ಜನರಿದ್ದಾರೆಯೋ? ಎಂದು ನೋಡಿ ಯಾರೂ ಇಲ್ಲವೆಂಬುದು ದೃಢವಾದ ಮೇಲೆ ಮೆಲ್ಲನೆ ಅಮ್ಮಾ, ಅಮ್ಮಾ, ಎಂದು ಕರೆದನು; ಅಪಾರ ವ್ಯಸನದಲ್ಲಿದ್ದ ತಾಯಿಗೆ ಮಾದಪ್ಪನು ಕರೆದದ್ದು ಕೇಳಿಸಲಿಲ್ಲ. ಆದರೆ ಪೂವಮ್ಮನಿಗೆ ಏನೋ ಶಬ್ದವಾದ ಹಾಗಾಗಲು, ಗೋಡೆಯ ಕಿಂಡಿಯ ಬಳಿಗೆ ಬಂದು ಆಲಿಸಿದಳು. ಮಾದಪ್ಪನು ಈಗ ಪೂವಿ, ಪೂವಿ, ಎಂದು ತನ್ನ ತಂಗಿಯನ್ನು ಕರೆದನು. ಆಗ ಅವಳಿಗೆ ತನ್ನ ಅಣ್ಣನು ಬಂದಿರುವನೆಂದು ತಿಳಿದು 'ಇಲ್ಲಿ ಬರುತ್ತೇನೆ' ಎಂದು ಹೇಳಿ ತಾಯಿಗೆ ತಿಳಿಸಿದಳು. ತಾಯಿಯೂ ಮಗಳೂ ಒಟ್ಟಾಗಿ ಮನೆಯ ಹಿಂದಿನ ಕೋಣೆಗೆ ಬಂದು ಸ್ವಲ್ಪ ಶಬ್ದ ಮಾಡದೆ ಬಾಗಿಲನ್ನು ತೆರೆದರು. ಆಗ ಮಾದಪ್ಪನು ಒಳಗೆ ಬಂದನು. ಅವನನ್ನು ನೋಡಿದೊಡನೆಯೇ ಅವನ ತಾಯಿಗೆ ದುಃಖವು ಮೇರೆದಪ್ಪಿ ಉಕ್ಕಿ ಬಂದು "ಮಗೂ, ನಿನ್ನ ತಂದೆಯನ್ನು ನೀಚ ಜನರು ಕೊಂದು ಬಿಟ್ಟರು. ಮನೆಯಲ್ಲಿದ್ದುದನ್ನೆಲ್ಲಾ ದೋಚಿಕೊಂಡು ಹೋದರು. ನಮ್ಮ ಬಾಳು ನಾಯಿಯ ಬಾಳಾಯಿತು!" ಎಂದು ಹೇಳುತ್ತಾ ಗೋಳೋ ಎಂದು ಅಳುವುದಕ್ಕೆ ತೊಡಗಿದಳು. ಅಳುವುದನ್ನು ಕೇಳಿ ಎದುರು ಕೋಣೆಯಲ್ಲಿ ಮಲಗಿದ್ದ ಮಾಚು ಮತ್ತು ಅಯ್ಯಪ್ಪ ಇವರಿಬ್ಬರೂ ಎದ್ದು ಏನು ಹೊಸ ಅಪಾಯ ಸಂಭವಿಸಿತೋ ಎಂದು ತಮ್ಮ ಕತ್ತಿಗಳನ್ನು ಹಿಡಿದುಕೊಂಡು ಅಳುವು ಕೇಳಿ ಬರುತ್ತಿದ್ದ ಕೋಣೆಯ

ಕಡೆಗೆ ಓಡಿ ಬಂದರು. ಅಪರಿಚಿತರಿಬ್ಬರು ಕತ್ತಿಯನ್ನು ಹಿಡಿದುಕೊಂಡು ತನ್ನ ಕೋಣೆಯ ಬಾಗಿಲಿಗೆ ಬಂದದ್ದನ್ನು ನೋಡಿ ಮಾದಪ್ಪನಿಗೆ ಭಯ, ವಿಸ್ಮಯ, ಕೋಪಗಳುಂಟಾದುವು. ಅವನು ಆ ಕ್ಷಣವೇ ಅಲ್ಲಿ ಈಗ ತಾನೇ ಕೆಳಗೆ ಇಟ್ಟಿದ್ದ ತನ್ನ ಒಡಿ ಕತ್ತಿಯನ್ನು ತೆಗೆದುಕೊಂಡು ಅವರನ್ನು ಎದುರಿಸುವದಕ್ಕೆ ಹೋದನು. ಆಗ ಪ್ರೂವಮ್ಮನು ನಡುವೆ ಬಂದು:—"ಅಣ್ಣಾ, ಅವರು ಶತ್ರುಗಳಲ್ಲ. ನಮಗೆ ಸಹಾಯ ಮಾಡಿದವರು. ಅವರನ್ನು ಕಡಿಯುವದಕ್ಕೆ ಹೋಗಬೇಡ" ಎಂದು ಹೇಳಿದಳು. ಆಗ ತಾಯಿಯು: "ಅಪ್ಪಾ, ಇವರು ನಮ್ಮ ಆಪ್ತರು. ಮಧ್ಯಾಹ್ನ ನಮ್ಮ ಪ್ರೂವಿಯನ್ನು ಶಿಪಾಯಿಗಳ ಕೈಯಿಂದ ಬಿಡಿಸಿದವರೇ ಇವರು. ಆ ಮೋಟೆ ಸಿಸ್ತ ತಂದೆಯ ದಶಪ ಕಾರ್ಯಕ್ಕೂ ಇವರೇ ಸಹಾಯ ಮಾಡಿದರು" ಎಂದು ಹೇಳಿದಳು. ಈ ಮಾತುಗಳನ್ನು ಕೇಳಿ ಮಾದಪ್ಪನು ಕತ್ತಿಯನ್ನು ಕೆಳಗಿಟ್ಟು ಮಾಚು ಮತ್ತು ಅಯ್ಯಪ್ಪ ಇವರಿಬ್ಬರ ಹತ್ತಿರ ಹೋಗಿ ಕೊಡಗಿನ ಪದ್ಧತಿಯ ಮೇರೆಗೆ ನಮಸ್ಕಾರ ಮಾಡಿದನು. ಅವರೂ ಪ್ರತಿ ನಮಸ್ಕಾರ ಮಾಡಿದರು. ಅನಂತರ ಮಾದಪ್ಪನು ತಾನು ಹೇಗೆ ಟಿಪ್ಪುವಿನ ಸೈನಿಕರನ್ನು ತಪ್ಪಿಸಿ ಜಪ್ಪುನಾಡಿನಿಂದ ಕಾಡುದಾರಿಯಾಗಿ ಬಂದೆನೆಂದು ಹೇಳಿ, ತನ್ನ ತಂದೆಯು ಮೃತನಾದದಕ್ಕಾಗಿ ಗೋಳಾಡತೊಡಗಿದನು. ಆಗ ಈ ತರುಣರಿಬ್ಬರೂ ಆ ಮನೆಯವರನ್ನೆಲ್ಲ ಸಂತೈಸತೊಡಗಿದರು.

ಮಾರನೇ ದಿನ ಮಾಚು ಮತ್ತು ಅವನ ಸ್ನೇಹಿತನು ಅಲ್ಲಿಂದ ಹೊರಡಲನುವಾದರು. ಆಗ ಪ್ರೂವಮ್ಮನ ತಾಯಿಯು ಮಾದಪ್ಪನೊಡನೆ:—"ಮಾದೂ, ನಮ್ಮ ಪ್ರೂವಿಗೆ ಮಾಚುವಿನ ಮೇಲೆ ಮನಸ್ಸಾಗಿದೆ. ಅವನೂ ಒಳ್ಳೇ ಯುವಕನಂತೆ ಕಾಣುತ್ತಾನೆ. ಅವರಿಗೆ ಮದುವೆ ಮಾಡಿಕೊಟ್ಟುಬಿಟ್ಟರೆ ನಮ್ಮ ಭಾರವು ತಪ್ಪಿದಂತಾಗುತ್ತದೆ. ನಿನ್ನೆಯ ಅವಾಂತರ ನೆನಿಸಿದರೆ, ನನ್ನ ಮೈ ಜುಮ್ಮೆನ್ನುತ್ತದೆ. ಆದ್ದರಿಂದ ಆದಷ್ಟು ಬೇಗನೆ ಪ್ರೂವಿಯನ್ನು ದಾಟಿಸಿ ಬಿಡುವಾ."

ಮಾದಪ್ಪ:—"ಇದು ಒಳ್ಳೆಯ ವಿಚಾರ. ನನಗೆ ಮಾಚುವು ಯೋಗ್ಯವರನೆಂದು ತೋರುತ್ತದೆ; ಆದರೂ ಯಾವ ಕಾರ್ಯಗಳಲ್ಲಿಯೂ ದುಡುಕುವದು ಹಿತಕರವಲ್ಲ. ಮಾಚುವೂ ಅಯ್ಯಪ್ಪನೂ ಹೋಗುವ ಮೊದಲು ಮಾಚುವಿಗೆ ಈ ವಿಷಯದಲ್ಲಿ ಒಂದು ಮಾತನ್ನು ಕೇಳಿಬಿಡುವ. ಅನುಕೂಲವಾದರೆ ಬೇಸಿಗೆಯಲ್ಲಿ ಮದುವೆ ಮಾಡಿಬಿಡುವ."

ಅನಂತರ ಮಾದಪ್ಪನು ಮಾಚುವನ್ನು ಕುರಿತು: "ಅಣ್ಣಾ, ನಮ್ಮ ಕಷ್ಟಕಾಲದಲ್ಲಿ ನೀವು ನಮಗೆ ಸಹಾಯಮಾಡಿದ ಉಪಕಾರವನ್ನು ಹೇಗೆ ತೀರಿಸುವೆನೆಂದು ಗೊತ್ತಾಗದು. ನೀವು ನನ್ನ ಒಳ್ಳೆಯ ಸಮಯದಲ್ಲಿ ಒದಗಿದ್ದರೆ ನನ್ನ ಪ್ರೇಮಿಯು ಸಿಪಾಯಿಗಳ ಪಾಲಾಗುತ್ತಿದ್ದಳು. ಪ್ರೇಮಿಯು ನಿಮ್ಮಿಂದಲೇ ಉಳಿದಳು. ಆದ್ದರಿಂದ ಮದುವೆಯಾಗದಿರುವ ನಿಮಗೆ ಅವಳನ್ನು ಕೊಟ್ಟುಬಿಡಬೇಕೆಂದು ನಮ್ಮ ತಾಯಿಗೆ ಆಸೆಯಾಗಿದೆ" ಎಂದನು.

ಆಗ ಮಾಚಣ್ಣನ ಮುಖವು ಅರಳಿತು. ಲಜ್ಜೆಯು ಮೂಡಿದ ಮುಖವನ್ನು ಸ್ವಲ್ಪ ಕೆಳಗೆ ಮಾಡಿದನು. ಅಯ್ಯಪ್ಪನು "ಮಾದಪ್ಪಣ್ಣಾ, ನಿಮ್ಮ ಅಭಿಪ್ರಾಯವು ಒಳ್ಳೆಯದೇ ಸರಿ." ನಮ್ಮ ಮಾಚುವಿಗೂ ಮನಸ್ಸಿದ್ದ ಹಾಗೆ ತೋರುತ್ತದೆ; ಆದರೆ ಅವನಿಗೆ ತನ್ನ ತಂದೆ-ತಾಯಿಗಳನ್ನು ಕೇಳದೆ ಯಾವ ಮಾತನ್ನೂ ಆಡುವದಕ್ಕಾಗುವದಿಲ್ಲ; ಮತ್ತು ಈಗ ದೇಶವು ಟಿಪ್ಪುವಿನ ಸ್ವಾಧೀನದಲ್ಲಿದೆ. ಮೊದಲು ನಮ್ಮ ರಾಜನನ್ನು ಸೆರೆಯಿಂದ ಬಿಡಿಸಬೇಕು ಇಲ್ಲಿಂದ ಶತ್ರುಗಳನ್ನು ಓಡಿಸಿ ನಮ್ಮ ರಾಜನನ್ನು ಸಿಂಹಾಸನದ ಮೇಲೆ ಕೂರಿಸಬೇಕು. ಅಷ್ಟು ಮಾಡಿದ ಮೇಲೆ ನಾವು ನಮ್ಮ ಮನೆಗೆಲಸವನ್ನು ನೋಡಬೇಕು. ಏನು ಮಾಚು, ನಿನ್ನ ಅಭಿಪ್ರಾಯವೇನು?" ಎಂದನು.

ಮಾಚುವು ಇಷ್ಟರವರೆಗೆ ತಾನು ಅನ್ಯಮನಸ್ಕನ ಹಾಗೆ ತೋರಿಸಿಕೊಂಡಿದ್ದನು. ಈಗ ಅವನಿಗೆ ಕಷ್ಟಕ್ಕೆ ಬಂತು. ಅವನ ಮನಸ್ಸು ಅವಳಲ್ಲಿ ನೆಟ್ಟಿತ್ತು; ಆದರೆ ಅವನಿಗೆ ಆಗಲೇ ಒಪ್ಪುವದಕ್ಕೆ ಸಾಧ್ಯವಾಗಿರಲಿಲ್ಲ. ತನ್ನ ತಂದೆ-ತಾಯಿಗಳನ್ನೂ ಹಿರಿಯರನ್ನೂ ಕೇಳಿ ಆತನು ಅವರ ಸಮ್ಮತಿಯನ್ನು ಪಡೆಯಬೇಕಾಗಿದ್ದಿತು. ಆಗ ಕುಟುಂಬದ ಕಟ್ಟು ಬಲವಾಗಿತ್ತು. ರಾಜಮಾನನ ಇಷ್ಟೆಯನ್ನು ಯಾರೂ ಮೀರಬಾರದಾಗಿದ್ದಿತು. ಮಾಚುವಿಗೆ ಅದೊಂದೇ ಅಡ್ಡಿಯಿದ್ದುದು ಮಾತ್ರವಲ್ಲ. ಈಗ ದೇಶದ ಸ್ವಾತಂತ್ರ್ಯವನ್ನು ಗಳಿಸುವದಕ್ಕೋಸ್ಕರ ಅಯ್ಯಪ್ಪಮೊದಲಾದವರೊಡನೆ ಆತ ಹಟತೊಟ್ಟಿದ್ದನು. ಕೊಡಗುದೇಶವು ಟಿಪ್ಪುವಿನ ಕೈತಪ್ಪಿ ತಮ್ಮ ಮೊದಲಿನ ಅರಸರ ಸ್ವಾಧೀನಕ್ಕೆ ಬರುವ ವರೆಗೆ ತಾವು ತಮ್ಮ ಸುಖದ ಕಡೆಗೆ ಲಕ್ಷ್ಯವಿಡುವದಿಲ್ಲವೆಂದು ಆತನೂ ಆತನ ಜೊತೆಯವರೂ ನಿಶ್ಚಯಿಸಿದ್ದರು. ಅದಕ್ಕೋಸ್ಕರ ಮಾಚುವೂ ಅಯ್ಯಪ್ಪನೂ ದೇಶದಲ್ಲೆಲ್ಲಾ ಗುಟ್ಟಾಗಿ ಸಂಚರಿಸುತ್ತಿದ್ದು, ಅಲ್ಲಲ್ಲಿ ಯುವಕರನ್ನು ಸೇರಿಸಿ ಕತ್ತಿ-ಕೋವಿಗಳನ್ನು ಜೊತೆಮಾಡಿಕೊಂಡಿದ್ದರು. ಯುದ್ಧಕ್ಕೆ

ಸಿದ್ಧರಿರಬೇಕೆಂದು ಅವರಿಗೆ ಹೇಳಿ, ಅವರಿಂದ ಕರಿನಾಗ ಯುದ್ಧಕ್ಕೆ ಬರುವೆವು' ಎಂದು ಮಾತು ತೆಗೆದುಕೊಳ್ಳುತ್ತಿದ್ದರು. ಕರಣೀಕ ಸುಬ್ಬಯ್ಯನು ಇವರಿಗೆ ಆಗಾಗ ಸಲಹೆಗಳನ್ನು ಕೊಡುತ್ತಿದ್ದನು.

ಹೀಗೆ ಅವನ ಮನಸ್ಸಿನಲ್ಲಿ ಒಂದು ಕಡೆ ಪೂವಿಯ ಮೇಲಿರುವ ಪ್ರೇಮ; ಇನ್ನೊಂದು ಕಡೆ ದೇಶಾಭಿಮಾನ ಇವೆರಡು ಭಾವನೆಗಳು ಉದಯಿಸಿ, ಕೊನೆಗೆ ದೇಶಾಭಿಮಾನವೇ ಜಯಿಸಿತು. ಆಗ ಮಾಚುವು:—"ಈಗ ನಾನು ಏನನ್ನೂ ಹೇಳಲಾರೆನು. ನಮ್ಮ ಕಾವೇರಿ ತಾಯಿಯ ಮತ್ತು ತಗ್ಗ ತಪ್ಪನ ಭೂಮಿಯನ್ನು ಶತ್ರುಗಳು ಹಿಡಿದುಕೊಂಡ ಮೇಲೆ ಅವನ್ನು ಜಯಿಸಿದ ವಿನಹಾ ನನ್ನ ವಿವಾಹದ ಯೋಚನೆ ಏಕೆ? ಆಗ ದೇವರ ಇಷ್ಟವಿದ್ದಂತೆ ಆಗಲಿ" ಎಂದನು.

ಆಗ ಮಾದಪ್ಪನ ತಾಯಿಯು:—"ನಮ್ಮ ರಾಜನು ಬರುವದು ಯಾವಾಗಲೋ? ಟಿಪ್ಪುವು ಆಗಾಗ ಬಂದು ಜನರನ್ನೆಲ್ಲ ಸೋಲಿಸಿ, ಜಾತಿ ಕೆಡಿಸಿ, ಹಿಡಿದುಕೊಂಡು ಹೋಗುವನು. ಟಿಪ್ಪುವನ್ನು ಓಡಿಸುವವರು ಯಾರು? ಇವೆಲ್ಲ ಆಗು-ಹೋಗುವ ಕೆಲಸವಲ್ಲ. 'ದೇಶ, ದೇಶ' ಎಂದು ಮದುವೆ ಮಾಡಿಕೊಳ್ಳದೆ ಇರುವದಕ್ಕಾಗುತ್ತದೆಯೇ? ನೀವು ಹುಡುಗರು ಹೀಗೆ ಮಾಡಿದರೆ, ಹುಡುಗಿಯರ ಗತಿ ಏನಾಗಬೇಕು? ಅವರನ್ನು ರಕ್ಷಿಸುವವರು ಯಾರು?" ಎಂದಳು.

ಆಗ ಅಯ್ಯಪ್ಪನು:—"ತಾಯಿ, ನೀವನ್ನುವದು ಸಜ; ಆದರೆ ಟಿಪ್ಪುವಿನ ಸೈನಿಕರನ್ನು ಇನ್ನು ಒಂದೆರಡು ವರ್ಷಗಳಲ್ಲೇ ಓಡಿಸಬಹುದೆಂದು ನಮಗೆ ನಂಬಿಕೆಯಿದೆ ನಾವು ಅದಕ್ಕೆ ಬೇಕಾದ ಏರ್ಪಾಡು ಮಾಡುತ್ತಲಿದ್ದೇವೆ ಆ ದೇವರ ದಯೆಯಿದ್ದರೆ, ನಮ್ಮ ರಾಜನ ಬಿಡುಗಡೆಯು ಬೇಗನೆ ಆಗುವದು. ದೇಶವು ಟಿಪ್ಪುವಿನ ಕೈತಪ್ಪುವದು. ಆಗ ನಿಮ್ಮ ಹೆಣ್ಣು ಮಕ್ಕಳಿಗೆ ಗಂಡಂದಿರು ದೊರಕುವರು" ಎಂದು ಹೇಳಿದನು

ಮಾದಪ್ಪ:—ಅಣ್ಣಾ, ನನ್ನನ್ನೂ ನಿಮ್ಮ ಜೊತೆಯಲ್ಲಿ ಕರೆದುಕೊಳ್ಳಿ. ನಾನೂ ನನ್ನ ಕೈಲಾದಮಟ್ಟಿಗೆ ದೇಶಸೇವೆಯನ್ನು ಮಾಡುವೆನು.

ಮಾದಪ್ಪನ ತಾಯಿ:-ಮಾದು, ನೀನು ಹೋಗುತ್ತೀಯಾ? ಬೇಡಪ್ಪಾ. ನಿನ್ನ ತಂದೆಯು ನಮ್ಮನ್ನು ಬಿಟ್ಟು ಹೊರಟುಹೋದರು. ನೀನು ಈಗ

ಯುದ್ಧಕ್ಕೆ ಹೋದರೆ ನನಗೆ ಯಾರ ಗತಿ? (ಮಾಚುವಿನ ಮತ್ತು ಅಯ್ಯಪ್ಪನ ಕಡೆಗೆ ತಿರುಗಿ) ಅಪ್ಪಾ, ನೀವು ಇವನನ್ನು ಕರೆದುಕೊಂಡು ಹೋಗಬೇಡಿರಿ' ಎಂದು ಅಳುಮುಖದಿಂದ ಹೇಳಿದಳು. ಆಗ ಅಯ್ಯಪ್ಪನು 'ತಾಯಿ, ಈಗ ನಾವು ಮಾದಪ್ಪನನ್ನು ಕರೆದುಕೊಂಡು ಹೋಗುವುದಿಲ್ಲ. ಅವನು ಇಲ್ಲಿಯೇ ಇದ್ದು ನಮಗೆ ಬೇಕಾದ ಸಹಾಯವನ್ನು ಮಾಡಿದರೆ ಸಾಕು' ಎಂದು ಹೇಳಿದನು.

ಅನಂತರ ಅವರು ಮಾದಪ್ಪನೊಡನೆ—'ಅಣ್ಣಾ, ನೀನು ಈ ನಾಡಿನಲ್ಲಿರುವ ಯುವಕರಿಗೆ ಕತ್ತಿ-ಕೋವಿಗಳನ್ನು ಸಿದ್ಧಪಡಿಸಿಕೊಂಡು ಯುದ್ಧಕ್ಕೆ ತಯಾರಾಗುವಂತೆ ಹೇಳಬೇಕು. ಅವರು ಗುಂಡು ಹೊಡೆಯುವದಕ್ಕೆ ಚನ್ನಾಗಿ ಕಲಿತಿರಬೇಕು. ಇದೆಲ್ಲಾ ಬಹಳ ಗುಟ್ಟಾಗಿ ನಡೆಯಬೇಕು. ಎಲ್ಲಲ್ಲ ಹಬ್ಬಗಳಲ್ಲಿ ಆಟದ ಕೂಟಗಳಲ್ಲಿ ಗುರಿ ಹೊಡೆಯುವವನ್ನು ಅಭ್ಯಾಸ ಮಾಡಬೇಕು. ಶತ್ರುಗಳಿಗೆ ಯಾವ ಸಂಶಯಕ್ಕೂ ಆಸ್ಪದ ಕೊಡಬಾರದು. ನಾವೂ ಒಂದು ಸಾರಿ ಈ ನಾಡು ಸುತ್ತಿ ಹೋಗುತ್ತೇವೆ,' ಎಂದರು.

ಮಾದಪ್ಪನು ತನ್ನ ತಾಯಿಗೆ ದುಃಖವುಂಟಾಗುತ್ತದೆಂದು, ಹಾಗೆಯೇ ಆಗಲಿ, ಎಂದು ಒಪ್ಪಿಕೊಂಡನು. ಮಾಚು ಮತ್ತು ಅಯ್ಯಪ್ಪನು ಅಲ್ಲಿಂದ ಹೋಗಲು ಹೊರಟರು. ಆಗ ಒಳಗಡೆಗೆ ಪೂವಿಯು ಕಣ್ಣೀರು ಸುರಿಸುತ್ತಾ ಬಾಗಲಿನಿಂದ ನೋಡುತ್ತಿದ್ದಳು. ಮಾಚುವು ಆಗಾಗ ಬಾಗಿಲ ಕಡೆಗೆ ನೋಡುತ್ತಿದ್ದನು. ಆಗ ಒಮ್ಮೆ ಅವರಿಬ್ಬರ ನೋಟಗಳೂ ಸಂಧಿಸಿದುವು. ಪೂವಿಯು ಲಜ್ಜೆಯಿಂದ ಮುಖವನ್ನು ತಗ್ಗಿಸಿದಳು. ಮಾಚುವಿಗೂ ಮುಖವು ಕೆಂಪಾಯಿತು. ಇದನ್ನೆಲ್ಲಾ ನೋಡಿಕೊಂಡಿದ್ದ ಪೂವಿಯ ತಾಯಿಯು 'ಮಾಚು, ಪೂವಿಯನ್ನು ಮರೆಯಬೇಡವಪ್ಪಾ. ಅವಳನ್ನು ರಕ್ಷಿಸಿದ್ದೀಯೆ. ಇನ್ನಾದರೂ ನೀನು ಅವಳನ್ನು ರಕ್ಷಿಸಬೇಕು.' ಎಂದಳು. ಆಗ ಮಾಚು 'ತಾಯಿ, ನಿನ್ನ ಆಶೀರ್ವಾದ, ದೇವರ ಅನುಗ್ರಹ ಇದ್ದರೆ ನೀವು ಹೇಳಿದ ಹಾಗೆಯೇ ಆಗಲಿ' ಎಂದನು. ನಂತರ ಅಯ್ಯಪ್ಪನು 'ತಾಯೀ, ನಾವು ಹೋಗಿ ಬರುತ್ತೇವೆ. ಅನುಕೂಲವಾದಾಗಲೆಲ್ಲ ಬರುತ್ತೇವೆ. ಹೇಗೂ ಮಾಚುವಿಗೆ ಇಲ್ಲಿಯ ಹುಡುಗಿಯೇ ನಿಶ್ಚಯವಾದಮೇಲೆ ನೀವು ನಮ್ಮ ನೆಂಟರೇ ಆದಿರಿ' ಎಂದು ಹೇಳಿ, ಹೊರಟು ಹೋದನು.

——

ಸಾವಿರದ ಏಳುನೂರಾ ಎಂಭತ್ತೆಂಟನೆಯ ಇಸವಿ ನವೆಂಬರ ತಿಂಗಳ ಒಂದು ಮಂಗಳವಾರ. ಅಂದು ಪಿರಿಯಾಪಟ್ಟಣದ ಸಂತೆ. ಹಳ್ಳಿ ಹಳ್ಳಿಗಳಿಂದ ಜನರು ಸಾಮಾನುಗಳನ್ನು ಕೊಳ್ಳಲು ಸಂತೆಗೆ ಬಂದಿದ್ದಾರೆ. ದೂರ ದೂರದ ಪಟ್ಟಣಗಳಿಂದ ವರ್ತಕರು ಬಂದು, ತಮ್ಮ ಸಾಮಾನುಗಳನ್ನು ಮುಂದಿಟ್ಟುಕೊಂಡು ಕುಳಿತಿದ್ದಾರೆ. ನವೆಂಬರ ತಿಂಗಳಾದರೂ ಬಿಸಿಲಿನ ಬೇಗೆಯು ಹೆಚ್ಚಾಗಿದ್ದಿತು. ಆ ಸಂತೆಮಾಳದ ಒಂದು ಬದಿಯಲ್ಲಿ ಕಿತ್ತಳೆ ಹಣ್ಣುಗಳನ್ನು ಗುಡ್ಡೆ ಹಾಕಿಕೊಂಡು ಇಬ್ಬರು ಕುಳಿತುಕೊಂಡಿದ್ದರು. ಅವರು ನೋಡುವದಕ್ಕೆ ಎತ್ತರವಾಗಿದ್ದು ದೃಢವಾದ ಮೈಕಟ್ಟಿನವರಾಗಿದ್ದರು. ಅವರ ಉಡುಪು ಸುತ್ತುಮುತ್ತಲಿನ ಹಳ್ಳಿಯವರ ಉಡುಪಿನಂತಿತ್ತು. ಅವರು ಆಗಾಗ 'ಕಿತ್ತಳೆಹಣ್ಣು ಬೇಕೋ ಕೊಡಗಿನ ಕಿತ್ತಳೆಹಣ್ಣು? ಒಳ್ಳೇ ಕಿತ್ತಳೆಹಣ್ಣು.'' ಎಂದು ಕೂಗುತ್ತಿದ್ದರು. ಅವರ ಅಂಗಡಿಯ ಎದುರಿನಲ್ಲಿ ಅನೇಕ ಆಲಸಿ ಜನರೂ ಮಕ್ಕಳೂ ಅವರನ್ನೂ ಇವರು ಮಾರಲಿಕ್ಕಿಟ್ಟಿದ್ದ ಕಿತ್ತಳೆಹಣ್ಣುಗಳನ್ನೂ ನೋಡುತ್ತ ನಿಂತಿದ್ದರು.

ಸುಮಾರು ಮೂರು ಗಂಟೆ ಹೊತ್ತಾಗಿದ್ದಿತು. ಆಗ ಪಿರಿಯಾಪಟ್ಟಣದ ಕೋಟೆಯ ಕಿಲ್ಲೆದಾರನಾಗಿದ್ದ ಅಬ್ದುಲ್ ರಹಮಾನ್‌ಖಾನನು ಕುದುರೆಯ ಮೇಲೆ ಕುಳಿತುಕೊಂಡು ಸಂತೇಮಾಳಕ್ಕೆ ಬಂದನು. ಅವನ ಹಿಂದೆ ಅವನ ಮುನಷಿ ಮಾಧವರಾಯನೂ ಐದಾರು ಜನ ಸೈನಿಕರೂ ನಡೆದುಕೊಂಡು ಬರುತ್ತಿದ್ದರು. ಅಬ್ದುಲ್ ರಹಮಾನ್‌ಖಾನನು ಸಂತೇಮಾಳವನ್ನು ಸುತ್ತುತ್ತಾ ಬರುವಾಗ ಕಿತ್ತಳೇಹಣ್ಣಿನ ಅಂಗಡಿಯ ಮುಂದುಗಡೆಯಲ್ಲಿ ತುಂಬಾ ಜನರು ನಿಂತಿರುವದನ್ನು ನೋಡಿ, ಹಿಂದುಸ್ತಾನಿಯಲ್ಲಿ ಅಲ್ಲಿ ನಿಂತವರೊಡನೆ: "ಇದೇನು, ಇಲ್ಲಿ ತುಂಬಾ ಜನರು ನಿಂತಿದ್ದಾರೆ?" ಎಂದು ಕೇಳಿದನು. ಆಗ ಒಬ್ಬನು: "ಮಹಾರಾಜ್, ಅಲ್ಲಿ ಇಬ್ಬರು ಕಿತ್ತಳೇ ಹಣ್ಣುಗಳನ್ನು ಮಾರುತ್ತಲಿದ್ದಾರೆ. ಕಿತ್ತಳೇ ಹಣ್ಣುಗಳು ಬಹಳ ಚೆನ್ನಾಗಿವೆ." ಎಂದನು.

ಆಗ ಖಾನನು ಕುದುರೆಯನ್ನು ಅಂಗಡಿಯ ಎದುರಿಗೆ ನಡೆಸಿದನು ಖಾನನನ್ನು ನೋಡಿ ಅಲ್ಲಿದ್ದ ಜನರೆಲ್ಲರೂ ಬದಿಗೆ ಸರಿದರು. ಖಾನನು ಕಿತ್ತಳೆ ಹಣ್ಣುಗಳನ್ನು ನೋಡಿ, "ಬಹಳ ಚೆನ್ನಾಗಿವೆ ಇವನ್ನು ಯಾರು ತಂದವರು?" ಎಂದು ಕೇಳಿದನು. ಆಗ ಆ ಅಂಗಡಿಯವರು ಒಳ್ಳೊಳ್ಳೆಯ ಹಣ್ಣುಗಳನ್ನು ಆರಿಸಿ ಒಂದು ಬುಟ್ಟಿಯಲ್ಲಿ ತುಂಬಿ ಖಾನನಿಗೆ ತೆಗೆದುಕೊಳ್ಳ

ಬೇಕೆಂದು ಹೇಳಿದರು. ಖಾನನಿಗೆ ಇವರ ಇನಾಮಿನಿಂದ ಸಂತೋಷವಾದರೂ ಇವರಿಗೆ ಸಿಟ್ಟು ಬಂದವನಂತೆ ನಟಿಸುತ್ತ:—"ನೀವು ಎಲ್ಲಿಂದ ಬಂದಿದ್ದೀರಿ? ನಿಮ್ಮನ್ನು ನೋಡುವಾಗ ಕೊಡಗರಂತೆ ಕಾಣುತ್ತದೆ. ನೀವು ವೇಷ ಬದಲಾಯಿಸಿದ್ದೀರಿ" ಎಂದನು. ಆಗ ಆ ಅಂಗಡಿಯವರಿಗೆ ಮನಸ್ಸಿನಲ್ಲಿ ಭೀತಿಯುಂಟಾದರೂ ಎದುರಿಗೆ ತೋರ್ಪಡಿಸಿಕೊಳ್ಳದೆ ಕೆಲವು ಚೆನ್ನಾಗಿರುವ ಹಣ್ಣುಗಳನ್ನು ತಂದು ಖಾನನ ಮುಂದೆ ಹಿಡಿದರು. ಖಾನನು ಅವುಗಳಲ್ಲಿ ಕೆಲವನ್ನು ತೆಗೆದುಕೊಂಡು, ಅವರನ್ನು ನೋಡಿ ಹಿಂದುಸ್ತಾನಿಯಲ್ಲಿ, "ನೀವು ಯಾರು? ಕೊಡಗರ ಹಾಗೆ ಕಾಣುತ್ತದೆ! ನೀವು ಇಲ್ಲಿಗೆ ಹೇಗೆ ಬಂದಿರಿ?" ಎಂದು ಮತ್ತೆ ಕೇಳಿದನು. ಆಗ ಅವರು "ನಮಗೆ ಹಿಂದುಸ್ತಾನಿ ಬರುವದಿಲ್ಲ ಬುದ್ಧೀ!" ಎಂದು ಹೇಳಿದರು. ಇದನ್ನು ಕೇಳಿ ಖಾನನು ತನ್ನ ಮುನಷಿಯಾಗಿದ್ದ ಮಾಧವರಾಯನನ್ನು ಕರೆದು, "ಕೇಳು, ಇವರು ಎಲ್ಲಿಂದ ಇಲ್ಲಿಗೆ ಬಂದರು? ಇವರಿಗೆ ಈ ಹಣ್ಣು ಹೇಗೆ ಸಿಕ್ಕಿತು?" ಎಂದನು. ಅವನು ಖಾನನು ಹೇಳಿದ ಹಾಗೆ ಕೇಳಿದನು.

ವ್ಯಾಪಾರಸ್ಥರು:—ನಮ್ಮದು ಇಲ್ಲಿಂದ ಐದಾರು ಮೈಲು ದೂರದ ಹಳ್ಳಿ ಬುದ್ಧೀ. ಅಲ್ಲಿಂದ ಕೊಡಗಿನ ಗಡಿಗೆ ಹೋಗಿ ಅಲ್ಲಿ ಉಕ್ಕಡದ ಸಾರದ ಸಾಹುಕಾರರಿಂದ ಹಣ್ಣು ಕೊಂಡುಕೊಂಡು ಮಾರಿ ಹೊಟ್ಟೆ ಹೊರೆಯುತ್ತೇವೆ ಬುದ್ಧೀ. ಡವರ ಹೊಟ್ಟೆಗೆ ಹೊಡೀ ಬ್ಯಾಡಿ ಬುದ್ಧೀ.

ಮಾಧವರಾಯ:—ಒಳ್ಳೇದು. ಎಲ್ಲಿಯಾದರೂ ನಿಮ್ಮ ಮೇಲೆ ಸಂಶಯ ಬಂದರೆ ನಿಮ್ಮ ತಲೆಯು ನಿಮ್ಮ ಕುತ್ತಿಗೆಯ ಮೇಲೆ ಇರಲಾರದು ಎಚ್ಚರಿಕೆ!

ವ್ಯಾಪಾರಸ್ಥರು:— ಹಾಗೆಯೇ ಆಗಲಿ ಸ್ವಾಮಿ. ತಾವೂ ಸ್ವಲ್ಪ ಕಿತ್ತಳೆ ಹಣ್ಣುಗಳನ್ನು ತೆಗೆದುಕೊಳ್ಳಬೇಕು.

ಮಾಧವರಾಯ:— ಈಗ ಬೇಡ. ಖಾನಸಾಹೇಬರು ನೋಡಿದರೆ ನನ್ನ ಮೇಲೆ ಸಿಟ್ಟು ಮಾಡಿಯಾರು. ಸಾಯಂಕಾಲ ಕೋಟೆಯ ಹತ್ತಿರ ಹಣ್ಣು ತೆಗೆದುಕೊಂಡು ಬನ್ನಿ.

ಇಷ್ಟು ಮಾತಾಡಿದ ಮೇಲೆ ಖಾನನು ಮಾಧವರಾಯನನ್ನೂ ಇತರ ಪರಿವಾರದವರನ್ನೂ ತನ್ನ ಸಂಗಡ ಬರಹೇಳಿ ಮುಂದಕ್ಕೆ ಹೊರಟನು: ಆದರೆ ಅವರಲ್ಲಿ ಒಬ್ಬನು ತಿರುತಿರುಗಿ ನೋಡುತ್ತ ಮುಂದಕ್ಕೆ ಹೋಗುತ್ತಿದ್ದನು.

ಇತ್ತಲಾಗಿ ಕಿತ್ತಳೆ ಹಣ್ಣಿನ ವ್ಯಾಪಾರಸ್ಥರು ತಮ್ಮ ತಮ್ಮೊಳಗೆ ಪಿಸಿ

ಪಿಸಿ ಮಾತಾಡಹತ್ತಿದರು. ಅಣ್ಣಾ, ಹೇಗೂ ಇವತ್ತು ತಪ್ಪಿಸಿಕೊಂಡೆವು. ಇನ್ನು ಇಲ್ಲಿ ನಮ್ಮ ಅಂಗಡಿಯನ್ನು ಹೆಚ್ಚು ದಿವಸ ಇಡಬಾರದು ಇನ್ನೊಬ್ಬನು:—ಹೇಗಾದರೂ ಆಗಲಿ. ಅಂಗಡಿ ಇಟ್ಟದ್ದಕ್ಕೆ ಕೆಲವು ಪಹರೆಯುವರನ್ನು ಗುರುತುಮಾಡಿಕೊಂಡದ್ದಾಯಿತು ಜಾತಿ ಕೆಟ್ಟ ಕೆಲವು ಕೊಡಗರನ್ನು ನೋಡಿದ್ದಾಯಿತು.

ಮೊದಲನೆಯವನು:-- ಇನ್ನು ನಮ್ಮ ಕೆಲಸವನ್ನು ಒಂದೆರಡು ವಾರಗಳೊಳಗೆ ಮುಗಿಸಬೇಕು. ಈಗ ಬೇಗನೆ ಈ ಅಂಗಡಿಯನ್ನು ಮುಚ್ಚೋಣ. ಉಳಿದಿರುವ ಕಿತ್ತಳೆ ಹಣ್ಣುಗಳನ್ನು ಕಿಲ್ಲೆದಾರನಿಗೂ ಮುನ್ಸಿಗೂ ಇನ್ನೊಬ್ಬಿಬ್ಬರು ಸರದಾರರಿಗೂ ಕೊಡಬೇಕು. ಎಂದು ಹೇಳಿ, ಹಣ್ಣುಗಳನ್ನು ಕುಕ್ಕೆಗಳಲ್ಲಿ ತುಂಬುವದಕ್ಕೆ ತೊಡಗಿದನು

ಇವರನ್ನು ಬಹಳ ಹೊತ್ತಿನಿಂದ ನೋಡಿಕೊಳ್ಳುತ್ತ ಒಬ್ಬ ಮನುಷ್ಯನು ದೂರದಲ್ಲಿ ಕುಳಿತುಕೊಂಡಿದ್ದನು ಇವರು ತಮ್ಮ ಅಂಗಡಿಯನ್ನು ತೆಗೆದು ಕಿತ್ತಳೆ ಹಣ್ಣುಗಳನ್ನು ಹೊತ್ತುಕೊಂಡು ಹೋಗುವಾಗ ಇವರ ಹಿಂದೆಯೇ ಅವರನ್ನು ಹಿಂಬಾಲಿಸಿ ಹೋದನು ಅವರು ಸಂತೆಯೊಳಗಿಂದ ಕೋಟೆಯ ಬಲಭಾಗಕ್ಕೆ ಹೋಗಿ ಅಲ್ಲಿ ತಾವು ಬಾಡಿಗೆಗೆ ಮಾಡಿದ್ದ ಒಂದು ಸಣ್ಣ ಕೊಠಡಿಯೊಳಗೆ ಹೊಕ್ಕರು. ಈ ವ್ಯಕ್ತಿಯು ಆ ಮನೆಯನ್ನು ಗುರುತು ಮಾಡಿ ಮನಸ್ಸಿನಲ್ಲಿಯೇ ಹಿಗ್ಗಿಕೊಂಡು, ತಾನೂ ಬಂದಿದ್ದ ದಾರಿಯಲ್ಲಿಯೇ ಮರಳಿತು.

---

## ದಳ :: ೪

ಸುಮಾರು ಹತ್ತುಘಂಟೆ ರಾತ್ರಿ. ನಮ್ಮ ವ್ಯಾಪಾರಿಗಳು ರಾತ್ರಿಭೋಜನವನ್ನು ತೀರಿಸಿ ಮಲಗಿಕೊಂಡಿದ್ದಾರೆ. ಆಗ ಒಂದೇಸವನೆ ಬಾಗಿಲು ತಟ್ಟಿದ ಶಬ್ದವಾಯಿತು. 'ಈ ರಾತ್ರಿಯಲ್ಲಿ ಯಾರು ಬಾಗಿಲನ್ನು ತಟ್ಟುತ್ತಾರಪ್ಪಾ? ಇದರಲ್ಲಿ ಏನಾದರೂ ಮೋಸಕೃತ್ಯವಿದೆಯೆ? ನಮಗೆ ಅಪಾಯವು ಸಂಭವಿಸಬಹುದೊ?' ಎಂದು ಚಿಂತಿಸಿದರು. ಆಗ ಹೊರಗಿನಿಂದ (ಕೊಡಗುಭಾಷೆಯಲ್ಲಿ) 'ಹೆದರಬೇಡಿ; ನಾನು ನಿಮ್ಮ ಹಿತಚಿಂತಕನೇ ಆಗಿದ್ದೇನೆ. ಬಾಗಿಲು ತೆರೆಯಿರಿ' ಎಂದು ಆಡಿದ ಮಾತುಗಳು ಕೇಳಿ ಬಂದವು. ಕೊಡಗು ಭಾಷೆಯಲ್ಲಿ ಹೊರಗಿನಿಂದ ಮಾತನಾಡಿದ್ದನ್ನು ಕೇಳಿ ಒಳಗಿದ್ದವರಿಗೆ ಆಶ್ಚರ್ಯವೂ,

ಭಯ-ವೂ ಉಂಟಾದುವು. ಅವರು ಒಳಗಿನಿಂದಲೇ ಕನ್ನಡ ಭಾಷೆಯಲ್ಲಿ 'ನೀವಾಡುವ ಮಾತುಗಳು ನಮಗೆ ಅರ್ಥವಾಗುವದಿಲ್ಲ. ನಿಮಗೆ ಕೆಲಸವಿದ್ದರೆ ಬೆಳಿಗ್ಗೆ ಬನ್ನಿ' ಎಂದರು. ಆಗ 'ಬೆಳಿಗ್ಗೆ ಬರುವುದಕ್ಕೆ ಸಮಯವಿಲ್ಲ. ನನ್ನ ಕೆಲಸವು ಬಹಳ ಆತುರದ ಕೆಲಸ ಬೇಗನೆ ಬಾಗಿಲು ತೆರೆಯಿರಿ,' ಎಂದು ಹೇಳಿದನು.

ವ್ಯಾಪಾರಿಗಳು:—ನಮ್ಮಲ್ಲಿ ಅಂಥಾ ಆತುರದ ಕೆಲಸವೇನಯ್ಯಾ? ನಮಗೆ ಈಗ ಬಾಗಿಲು ತೆರೆಯುವದಕ್ಕೆ ಆಗುವದಿಲ್ಲ. ಬೇಕಾದರೆ ಬೆಳಿಗ್ಗೆ ಬನ್ನಿ.

ಆಗಂತುಕ:—ಬೇಗನೆ ಬಾಗಿಲು ತೆಗೆಯುತ್ತೀರೋ ಇಲ್ಲವೋ? ತೆರೆಯದಿದ್ದರೆ ಬಾಗಿಲು ಒಡೆದು ಬರುತ್ತೇವೆ.

ಆಗ ವ್ಯಾಪಾರಿಗಳು ಹೆದರಿದರು. 'ಹೊರಗೆ ಎಷ್ಟು ಜನರಿದ್ದಾರೋ ಏನೋ? ಬಾಗಿಲು ತೆರೆದರೂ ಮೋಸ; ತೆರೆಯದಿದ್ದರೂ ಮೋಸ. ದೇವರೇ ಗತಿ' ಎಂದು ಮನಸ್ಸಿನಲ್ಲಿಯೇ ಯೋಚಿಸಿ, ಮೆಲ್ಲನೆ ಬಾಗಿಲು ತೆರೆದರು; ಆದರೆ ಕೈಯಲ್ಲಿ ಒಡಿಕತ್ತಿಗಳನ್ನು ಹಿಡಿದುಕೊಂಡು, ಸಮಯ ಬಂದರೆ ಅವುಗಳಿಂದ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಬೇಕೆಂದಿದ್ದರು. ಬಾಗಿಲನ್ನು ತೆರೆದೊಡನೆಯೇ ಮುಸಲ್ಮಾನರ ಉಡುಪನ್ನು ಧರಿಸಿದ ಮನುಷ್ಯನೊಬ್ಬನು ಒಳಗೆ ಬಂದನು. ಒಳಗೆ ಬಂದ ಮನುಷ್ಯನು ಒಬ್ಬನೇ ಇದ್ದನು. ಆದುದರಿಂದ ನಮ್ಮ ವ್ಯಾಪಾರಿಗಳಿಗೆ ಧೈರ್ಯವಾಯಿತು. ಮುಸಲ್ಮಾನನು ಒಳಕ್ಕೆ ಬಂದೊಡನೆ ತನ್ನ ತಲೆಯ ಮುಂಡಾಸವನ್ನು ತೆಗೆದು ಕೆಳಕ್ಕೆಸೆದು ಕೆಳಗೆ ಕುಳಿತುಕೊಂಡನು ಹಣ್ಣು ವ್ಯಾಪಾರಸ್ಥರೂ ಕೆಳಗೆ ಕುಳಿತುಕೊಂಡರು. ಆಗ ಆ ಮುಸಲ್ಮಾನನು ಕೊಡಗು ಭಾಷೆಯಲ್ಲಿ ಅವರೊಡನೆ ಮಾತನಾಡತೊಡಗಿದನು:—

'ನನ್ನ ವೇಷವನ್ನು ನೋಡಿ ನಾನು ಮುಸಲ್ಮಾನನೆಂದು ನೀವು ತಿಳಿಯಬಹುದು. ನಾನು ಈಗ ಮುಸಲ್ಮಾನನೇ ಹೌದು; ಆದರೆ ನಾನು ಹುಟ್ಟು ಕೊಡಗ. ಟೀಪುಸುಲ್ತಾನನು ನಮ್ಮೆಲ್ಲರನ್ನೂ ದೇವಟುಪರಂಬಿನಿಂದ ಹಿಡಿದುಕೊಂಡು ಬಂದು ಬಲಾತ್ಕಾರದಿಂದ ಜಾತಿ ಕೆಡಿಸಿಬಿಟ್ಟನು.'

ವ್ಯಾಪಾರಸ್ಥರು:—ನೀವು ಕೊಡಗಿನಲ್ಲಿ ಯಾವ ನಾಡಿನವರು?

ಮುಸಲ್ಮಾನ:—ನಾವು ನಾಲ್ಕು ನಾಡಿನವರು.

ವ್ಯಾಪಾರಸ್ಥರು:—ನೀವು ಈಗ ನಮ್ಮಲ್ಲಿಗೆ ಯಾತಕ್ಕಾಗಿ ಬಂದಿದ್ದೀರಿ? ನಿಮ್ಮ ಹೆಸರೇನು?

ಮುಸಲ್ಮಾನ:—ನನ್ನ ಹೆಸರು ಮುಹಮ್ಮದ್ ಸಾಬಿ. ನನಗೆ ಇಲ್ಲಿಂದ ಹೇಗಾದರೂ ತಪ್ಪಿಸಿಕೊಂಡು ಹೋಗಬೇಕೆಂದಿದೆ; ಆದರೆ ಅದಕ್ಕೆ ಮೊದಲು ಇಲ್ಲಿರುವ ನಮ್ಮ ರಾಜಕುಮಾರನ ಸೆರೆಯನ್ನು ತಪ್ಪಿಸಿ, ಅವನನ್ನು ಕೊಡಗಿಗೆ ಕರೆದುಕೊಂಡು ಹೋಗುವ ಉಪಾಯ ಮಾಡಬೇಕಾಗಿದೆ. ಅದಕ್ಕಾಗಿ ನಾನು ಸಹಾಯಕರನ್ನು ನೋಡುತ್ತಲಿದ್ದೆ. ನಿಮ್ಮನ್ನು ನೋಡಿದ ಕೂಡಲೆ ನೀವು ಕೊಡಗರೆಂದೂ ಅದೇ ಪ್ರಯತ್ನದಲ್ಲಿರುವಿರೆಂದೂ ಗೊತ್ತು ಮಾಡಿದೆ ನನಗೆ ಬಹು ಸಂತೋಷವಾಯಿತು ಈಗ ನಿಮ್ಮ ಪರಿಚಯ ಸ್ವಲ್ಪ ಹೇಳಿ.

ವ್ಯಾಪಾರಸ್ಥರು:—ನಿಮ್ಮನ್ನು ನಂಬುವದು ಹೇಗೆ? ನೀವು ನಮ್ಮ ಗುಟ್ಟನ್ನು ತಿಳಿಯುವದಕ್ಕೆ ಬಂದಿರಬಹುದು.

ಮುಹಮ್ಮದ್ ಸಾಬಿ:—ನಾನು ಯಾವ ದೇವರ ಆಣೆಯಾದರೂ ಹೇಳುತ್ತೇನೆ. ನಾನು ನಿಮ್ಮಲ್ಲಿ ಸುಳ್ಳು ಹೇಳುವದಿಲ್ಲ ನನಗೆ ಹೇಗಾದರೂ ಮಾಡಿ ನಮ್ಮ ರಾಜಕುಮಾರನನ್ನು ಬಿಡಿಸಬೇಕು.

ವ್ಯಾಪಾರಸ್ಥರು—ಹಾಗಾದರೆ ಒಳ್ಳೆಯದೇ ಆಯಿತು. ನಮಗೆ ದೇವರೇ ಸಹಾಯ ಮಾಡಿದ ಹಾಗಾಯಿತು. ನಾವು ನಮ್ಮ ರಾಜಕುಮಾರನಾದ ವೀರರಾಜನನ್ನು ಸೆರೆಯಿಂದ ಬಿಡಿಸಿ ಕರೆದುಕೊಂಡು ಹೋಗುವ ಪ್ರಯತ್ನದಲ್ಲಿರುವೆವು ನನ್ನ ಹೆಸರು ಅಯ್ಯಪ್ಪ; ಇವನ ಹೆಸರು ಮಾಚು. ಇನ್ನು ಹೆಚ್ಚಿನ ವಿಷಯವನ್ನು ಮುಂದೆ ಹೇಳುತ್ತೇವೆ. ಈಗ ನೀವು ವೀರರಾಜನನ್ನು ಬಿಡಿಸುವ ಉಪಾಯವನ್ನು ಹೇಳಿ. ನಿಮಗೆ ಕೋಟೆಯ ಭದ್ರತೆಯ ವಿಷಯ ಚೆನ್ನಾಗಿ ಗೊತ್ತಿರಬೇಕು.

ಮುಹಮ್ಮದ್ ಸಾಬಿ:—ನನಗೆ ಈ ಕೋಟೆಯ ಕಾವಲುಗಾರರಲ್ಲಿ ಕೆಲವು ಜನರ ಸ್ನೇಹವಿದೆ. ಕಾವಲುಗಾರರ ಜಮಾದಾರನಾದ ಇಸ್ಮಾಯಿಲ್ ಖಾನನು ನನ್ನ ಆಪ್ತನು. ಅವನ ಸಹಾಯದಿಂದ ನಾವು ನಮ್ಮ ರಾಜಕುಮಾರರನ್ನು ಸೆರೆಯಿಂದ ಬಿಡಿಸಬೇಕು.

ಅಯ್ಯಪ್ಪ:-ನಮಗೂ ರಾಜಪಹರೆಯವರ ಮುಖ್ಯಸ್ಥನಾದ ಹೊಂಬಾಳೆ ನಾಯಕನಿಗೂ ಸ್ವಲ್ಪ ಪರಿಚಯವಾಗಿದೆ. ಇಸ್ಮಾಯಿಲ್ ಖಾನನು ನಮಗೆ ಸಹಾಯ ಮಾಡುವನೋ ಇಲ್ಲವೋ ಎಂಬುದನ್ನು ತಿಳಿಯುವ ಬಗೆ ಹೇಗೆ?'

ಮುಹಮ್ಮದ್ ಸಾಬಿ:—“ನಾಳೆ ರಾತ್ರಿ ೯ ಗಂಟೆಗೆ ನಾನು ಇಸ್ಮಾಯಿಲ್ ಖಾನನನ್ನು ನಿಮಗೆ ಭೇಟಿ ಮಾಡಿಸುತ್ತೇನೆ ಏನೂ ತಿಳಿಯದಿದ್ದವರ ಹಾಗೆ ನೀವು ಕೋಟೆಯ ಪಶ್ಚಿಮ ದಿಕ್ಕಿನ ದ್ವಾರದ ಬಳಿ ಬನ್ನಿ. ನಾನು ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ” ಎಂದು ಹೇಳಿ ಹೊರಟನು

ಇವನು ಹೊರಟು ಹೋಗುತ್ತಿರುವಾಗ ಇವನ ಹಿಂದೆಯೇ ಇನ್ನೊಂದು ವ್ಯಕ್ತಿಯು ಇವನನ್ನು ಹಿಂಬಾಲಿಸುತ್ತಿತ್ತು. ಆ ವ್ಯಕ್ತಿಯು ಒಂದು ಕರೀ ಕಂಬಳಿಯನ್ನು ಹೊದ್ದುಕೊಂಡಿದ್ದಿತು. ಈ ವ್ಯಕ್ತಿಯು ಮುಹಮ್ಮದ ಸಾಬಿಯು ನಮ್ಮ ವ್ಯಾಪಾರಿಗಳ ಕೊಠಡಿಗೆ ಬಂದಿದ್ದಾಗ, ಹಿಂದೆಯೇ ಬಂದಿದ್ದು, ಅವರ ಮಾತನ್ನು ಹೊರಗಿನಿಂದ ಕೇಳುತ್ತಿತ್ತು; ಆದರೆ ಆ ವ್ಯಕ್ತಿಗೆ ಕೊಡಗು ಭಾಷೆಯು ಬರುತ್ತಿರಲಿಲ್ಲ; ಆದರೂ ವೀರರಾಜ, ಕೊಡಗು ಇಸ್ಮಾಯಿಲ್ ಖಾನ್ ಎಂಬ ಹೆಸರುಗಳನ್ನು ಕೇಳಿ ಇವರಿವರೊಳಗೆ ಒಳಸಂಚು ನಡೆಯುತ್ತದೆಂದು ಯೋಚಿಸಿದನು. ತಾನು ಈ ಒಳಸಂಚನ್ನು ಭೇದಿಸಿ, ಕೋಟೆಯ ಕಿಲ್ಲೇದಾರನಾದ ಅಬ್ದುಲ್ ರಹಿಮಾನ್ ಖಾನನ ಮತ್ತು ಟಿಪ್ಪು ಸುಲ್ತಾನನ ಪ್ರೀತಿಯನ್ನು ಸಂಪಾದಿಸುವೆನೆಂದು ಆತನು ಹಿಗ್ಗಿದನು

---

## ದಳ :: ೫

ಮೂರನೇ ದಿವಸ ಸಾಯಂಕಾಲ ೭ ಗಂಟೆಯ ಹೊತ್ತಿನಲ್ಲಿ ಮಾಚು ಮತ್ತು ಅಯ್ಯಪ್ಪನು ಕೋಟೆಯ ಪಶ್ಚಿಮ ಭಾಗದಲ್ಲಿ ಹೋಗುತ್ತಲಿದ್ದರು. ಒಂದು ವ್ಯಕ್ತಿಯು ಅವರನ್ನು ದೂರದಿಂದ ಹಿಂಬಾಲಿಸುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿಯೇ ಕೋಟೆಯೊಳಗಿಂದ ಮುಹಮ್ಮದ ಸಾಬಿಯು ಬೀದಿಗೆ ಬಂದನು. ಅವನಿಗೆ ಆ ಕೊಡಗರು ಮುಂದೆ ಹೋಗುತ್ತಿರುವದೂ ಅವರನ್ನು ಹಿಂದಿನಿಂದ ಒಂದು ವ್ಯಕ್ತಿಯು ಹಿಂಬಾಲಿಸುತ್ತಿರುವದೂ ತಿಳಿಯಿತು. ಆ ವ್ಯಕ್ತಿಯು ಅಬ್ದುಲ್ ರಹಮಾನ್ ಖಾನನ ಅಂಗರಕ್ಷಕ ದಳದ ಯಜಮಾನ ಜಾಫರ್ ಖಾನನ ಸೇವಕನಾದ ಗುಲಾಮುಲ್ಲಿಯೇ ಆಗಿದ್ದನು ಅವನ ಯಜಮಾನನಾದ ಜಾಫರ್ ಖಾನನು ಬಹು ನೀಚನಾಗಿದ್ದನು. ಆತನಿಗೆ ಯುದ್ಧ ವಿದ್ಯೆಯ ಗಂಧವೇ ಇರಲಿಲ್ಲ; ಆದರೆ ತನ್ನ ಮೇಲಿನ ಅಧಿಕಾರಿಗಳಿಗೆ

ಚಾಡಿ ಹೇಳುವುದರಲ್ಲಿ ಆತ ಬಹಳ ನಿಪುಣನಾಗಿದ್ದನು. ಅದೂ ಅಲ್ಲದೆ, ಸ್ತ್ರೀಕಾಮುಕರಾದಂಥ ತನ್ನ ಮೇಲಧಿಕಾರಿಗಳಿಗೆ ಸುಂದರಿಯರಾದ ತರುಣಿಯರನ್ನು ಒದಗಿಸಿ, ತಾನ ಅವರ ಮೆಚ್ಚಿಕೆಯನ್ನು ಸಂಪಾದಿಸುವದಕ್ಕೆ ಪ್ರಯತ್ನಿಸುತ್ತಿದ್ದನು. ಗುಲಾಮಲ್ಲಿಯು ಯಜಮಾನನಿಗೆ ಸರಿಯಾದ ಸೇವಕನಾಗಿದ್ದನು. ಇವನು ತನ್ನ ಯಜಮಾನನ ಕೀಳು ವ್ಯಾಪಾರಕ್ಕೆ ಎಲ್ಲಾ ವಿಧಗಳಲ್ಲಿಯೂ ನೆರವಾಗುತ್ತಿದ್ದನು. ನಿನ್ನೆ ಆತನಿಗೆ ಆ ಕಿತ್ತಳೆಹಣ್ಣಿನ ವ್ಯಾಪಾರಿಗಳನ್ನು ಸಂತೆಮಾಳದಲ್ಲಿ ನೋಡುತ್ತಲೆ, ಇವರು ಯಾರೋ ವೇಷಧಾರಿಗಳಾಗಿರಬೇಕು; ಇವರನ್ನು ಹಿಂಬಾಲಿಸಿ ಇವರ ಗುಟ್ಟನ್ನು ತಿಳಿದು ತನ್ನ ಯಜಮಾನನಿಗೆ ಹೇಳಿದರೆ, ಅವನಿಗೂ ತನಗೂ ಒಳ್ಳೆಯದಾಗಬಹುದೆಂದು ಆಲೋಚಿಸಿ, ಆತನು ಹಿಂದಿನ ರಾತ್ರಿಯಲ್ಲಿ ನಮ್ಮ ವ್ಯಾಪಾರಸ್ಥರು ಇಳಿದಿದ್ದ ಮನೆಗೆ ಬಂದಿದ್ದನು. ಅವನ ಅದೃಷ್ಟಕ್ಕೆ ಸರಿಯಾಗಿ ಅದೇ ಸಮಯದಲ್ಲಿ ಮಹಮ್ಮದ ಸಾಬಿಯು ಅವರೊಡನೆ ಮಾತನಾಡುವದು ಇವನಿಗೆ ಕೇಳಿಸಿತು. ಅವರು ಕೊಡಗು ಮಾತನ್ನು ಆಡುತ್ತಿದ್ದುದು ಇವನಿಗೆ ಪೂರ್ತಿಯಾಗಿ ಅರ್ಥವಾಗದಿದ್ದರೂ, ಈ ಮೊದಲೇ ಹೇಳಿದ ಹಾಗೆ ಅವರಾಡಿದ ವೀರರಾಜ, ಕೊಡಗು ಮೊದಲಾದ ಮಾತುಗಳಿಂದ ಇವರೇನೋ ಒಳಸಂಚು ನಡೆಸುವರೆಂದು ಯೋಚಿಸಿ, ತಾನು ಇವರಿಗೆ ತಿಳಿಯದಂತೆ ಇವರ ಗುಟ್ಟನ್ನು ಭೇದಿಸಬೇಕೆಂದು ಯೋಚಿಸಿದನು. ಅದಕ್ಕೋಸ್ಕರವೇ ನಾವು ಈ ದಳದ ಪ್ರಾರಂಭದಲ್ಲಿ ವರ್ಣಿಸಿದಂತೆ ಅವನು ಇವರ ಬೆನ್ನಹತ್ತಿದ್ದನು.

ಗುಲಾಮಲ್ಲಿಗೆ ಈ ರಹಸ್ಯವನ್ನು ಭೇದಿಸಲು ಇನ್ನೊಂದು ಕಾರಣವೂ ಇದ್ದಿತು. ಮಹಮ್ಮದ್ ಸಾಬಿಯು ಕೋಟೆಯ ಫೌಜಿನ ಮುಖ್ಯಾಧಿಕಾರಿಯಾಗಿದ್ದ ಖಾದರ್ ಖಾನ್ ಖೈಸಗಿಯ ಸೇವಕನಾಗಿದ್ದನು. ಗುಲಾಮಲ್ಲಿಯ ಯಜಮಾನನಾದ ಜಾಫರ್ ಖಾನನಿಗೂ ಖಾದರ್ ಖಾನ್ ಖೈಸಗಿಗೂ ದ್ವೇಷವಿತ್ತು. ಆ ದ್ವೇಷವು ವೃದ್ಧಿಯಾಗುವದಕ್ಕೆ ವೀರರಾಜನಿಗೆ ಸಂಬಂಧಪಟ್ಟ ಒಂದು ಘಟನೆಯು ಹೆಚ್ಚಿಗೆ ಕಾರಣವಾಯಿತು. ಆ ಘಟನೆಯ ವಿಷಯವನ್ನು ಮುಂದಿನ ದಳದಲ್ಲಿ ಪ್ರಸ್ತಾಪಿಸುವೆವು.

# ದಳ :: ೬

ಪೆರಿಯಪಾ ಪಟ್ಟಣದ ಕೋಟೆಯ ಒಳಗೆ ಒಂದು ಪ್ರಶಸ್ತವಾದ ಮಹಡಿಯ ಮನೆ ಅದರ ಹೊರಗೆ ಇಬ್ಬರು ಸಿಪಾಯಿಗಳು ಪಹರೆ ನಿಂತಿದ್ದಾರೆ. ಆ ಮನೆಯು ಸಾಧಾರಣ ದೊಡ್ಡದಾಗಿತ್ತು. ಅದರ ಒಳಭಾಗದ ಒಂದು ದೊಡ್ಡ ಕೋಣೆಯಲ್ಲಿ ನಾಲ್ಕು ಜನ ಹೆಂಗಸರು ಕುಳಿತುಕೊಂಡು ಮಾತನಾಡುತ್ತಿದ್ದರು. ಅವರಲ್ಲಿ ಒಬ್ಬಳು ವೃದ್ಧಳು. ಉಳಿದ ಮೂವರು ಎಳೆ ವಯಸ್ಸಿನ ತರುಣಿಯರು. ಅವರಲ್ಲಿ ಒಬ್ಬಳು ವೀರರಾಜನ ಪತ್ನಿಯಾದ ನಂಜಮ್ಮಾಜಿಯು; ಉಳಿದವರು ವೀರರಾಜನ ಸಹೋದರಿಯರಾದ ನೀಲಮ್ಮಾಜಿ ಮತ್ತು ದೇವಮ್ಮಾಜಿಯರು. ಅವರಲ್ಲಿ ಹೀಗೆ ಮಾತುಕಥೆಯು ನಡೆಯುತ್ತಿತ್ತು:—

ನಂಜಮ್ಮಾಜಿ:—ನೀಲಮ್ಮಾ, ನಾವು ಇನ್ನೆಷ್ಟು ದಿನ ಈ ಸೆರೆಮನೆಯಲ್ಲಿ ಕೊಳೆಯಬೇಕು? ಏನೇ, ಇಲ್ಲಿ ಇಷ್ಟು ಇದ್ದು ಸಾಕಾಗಿ ಹೋಯಿತು.

ನೀಲಮ್ಮಾಜಿ:—ಏನು ಮಾಡುವದು ಅತ್ತಿಗೆಯಮ್ಮಾ! ನಮ್ಮ ಗ್ರಹಚಾರ. ನಮ್ಮ ತಂದೆಯವರು ಯಾವ ಕೆಟ್ಟ ಗಳಿಗೆಯಲ್ಲಿ ಹೈದರ್ ಅಲ್ಲಿಯ ಸಹಾಯವನ್ನು ಕೋರಿದರೋ, ಆಗಲೇ ನಮ್ಮ ಕೆಟ್ಟ ಕಾಲವು ಸುರುವಾಯಿತು.

ನಂಜಮ್ಮಾಜಿ: ನಮಗೆ ಇಲ್ಲಿ ನಮ್ಮ ಇಷ್ಟ ಬಂದ ಸ್ಥಳಕ್ಕೆ ಹೋಗುವ ಹಾಗಿಲ್ಲ. ಬೇಕಾದ ಅನುಕೂಲತೆಗಳಿಲ್ಲ. ಎಲ್ಲಿ ನೋಡಿದರೂ ಟಿಪ್ಪುಸುಲ್ತಾನನ ಪಹರೆಯುವದು ನಮ್ಮನ್ನು ಕಾಯುತ್ತಿದ್ದಾರೆ.

ದೇವಮ್ಮಾಜಿ:—ನಾಳೆ ಮಹಾದೇವರ ಗುಡಿಯಲ್ಲಿ ಉತ್ಸವವು ನಡೆಯುತ್ತದೆ. ನಾವು ಅಲ್ಲಿಗೆ ಹೋಗಿ ದೇವರ ದರ್ಶನಮಾಡಿ 'ಬೇಗನೆ ನಮ್ಮ ಬಿಡುಗಡೆಯಾಗಲಿ' ಎಂದು ದೇವರನ್ನು ಬೇಡಿಕೊಳ್ಳೋಣ.

ನೀಲಮ್ಮಾಜಿ:—ನಾಳೆ ಮಹಾದೇವರ ಉತ್ಸವವೇ! ನಾವು ಆ ಉತ್ಸವಕ್ಕೆ ಹೋಗೋಣ. ಮನೆಯಲ್ಲಿಯೇ ಕುಳಿತು ಕುಳಿತು ಸಾಕಾಗಿಹೋಯಿತು

ನಂಜಮ್ಮಾಜಿ:—ಅತ್ತಿಗೆಯಮ್ಮನವರೇ, ನಾವು ಮನೆಬಿಟ್ಟು ಹೊರಗೆ ಹೋಗುವದು ನನಗೆ ಯೋಗ್ಯವಾಗಿ ಕಾಣುವದಿಲ್ಲ. ಪಟ್ಟಣದಲ್ಲಿ ಮುಸಲ್ಮಾನ ಸಿಪಾಯಿಗಳೂ ಅಧಿಕಾರಿಗಳೂ ತುಂಬಿದ್ದಾರೆ. ಗ್ರಹಚಾರವಶಾತ್ ನಾವು ಅವರ ಕಣ್ಣಿಗೆ ಬಿದ್ದರೆ, ನಮ್ಮ ಪರಿಣಾಮವು ಒಳ್ಳೆಯದಾಗಲಿಕ್ಕಿಲ್ಲ. ಅತ್ತೆಯಮ್ಮನವರೂ ಇದಕ್ಕೆ ಸಮ್ಮತಿಸಲಾರರು.

ನೀಲವಮ್ಮಾಜಿ:—ದೊಡ್ಡವ್ವನು ಸಮ್ಮತಿಸದೆ ಏನು? ನಾವು ಅರಸು ಮನೆತನದವರೆಂದು ಯಾರಿಗೆ ತಿಳಿಯುತ್ತದೆ? ಯಾರೋ ದೊಡ್ಡ ಮನುಷ್ಯರ ಮನೆಯ ಹೆಂಗಸರಿರಬಹುದೆಂದು ಜನರು ತಿಳಿಯುತ್ತಾರೆ.

ದೇವಮ್ಮಾಜಿ:—ದೊಡ್ಡವ್ವಾ, ನಾವು ನಾಳೆ ಮಹಾದೇವರ ಗುಡಿಗೆ ಹೋಗಿ ದೇವರ ದರ್ಶನಮಾಡಿಕೊಂಡು ಬರುತ್ತೇವೆ. ನಾಳೆ ಅಲ್ಲಿ ಉತ್ಸವವಂತೆ!

ದೇವಾಂಬಿಕೆ:—ಏನು? ನೀವು ಅರಸುಮನೆಯ ಹೆಂಗಸರು; ಪಟ್ಟಣದಲ್ಲಿರುವ ಗುಡಿಗೆ ಇತರ ಜನರಂತೆ ಹೋಗುವದು ಉಂಟೇ? ಈಗ ನಾವು ಅದೃಷ್ಟಹೀನರಾಗಿ ಟೀಪುವಿನ ಅಧೀನದಲ್ಲಿದ್ದೇವೆ. ನಿಮಗೆ ಗುಡಿಯ ಸಮೀಪದಲ್ಲಿ ಏನಾದರೂ ಕೆಡಕು ಸಂಭವಿಸಿದರೆ ನಿಮ್ಮ ರಕ್ಷಣೆ ಮಾಡುವವರ್‍ಯಾರು? ಬೇಡ, ಇಲ್ಲಿಂದಲೇ ಮಹಾದೇವರನ್ನು ಪ್ರಾರ್ಥಿಸಿಕೊಳ್ಳಿರಿ.

ನಂಜಮ್ಮಾಜಿ:—ಸುಂದರ ತರುಣಿಯರು ಸೈನ್ಯದ ಅಧಿಕಾರಿಗಳ ಕಣ್ಣಿಗೆ ಬಿದ್ದರೆ, ಆ ಹೆಂಗಸರಿಗೆ ಕಿಲ್ಲೇದಾರನ ಅಥವಾ ಟಿಪ್ಪುಸುಲ್ತಾನನ ಅಂತಃಪುರವೇ ವಾಸಸ್ಥಳವೆಂದು ನಾನು ಕೇಳಿದ್ದೇನೆ.

ದೇವಮ್ಮಾಜಿ:—ನಾವು ರಾಜಮನೆತನದ ಸ್ತ್ರೀಯರೆಂದು ಯಾರಿಗೆ ಗೊತ್ತಾಗುವದು? ನಾವು ಸಾಮಾನ್ಯರಂತೆ ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಹೋಗಿ, ಬೇಗನೆ ದೇವರ ದರ್ಶನ ಮಾಡಿಕೊಂಡು ಬರುವೆವು.

ದೇವಾಂಬಿಕೆ:—ನೀವು ಗುಡಿಗೆ ಹೋಗುವದು ನನಗೆ ಸರಿ ಎಂದು ತೋರುವುದಿಲ್ಲ ಇನ್ನು ಬೇಕಾದರೆ ವೀರರಾಜನನ್ನು ಕೇಳಿ, ಅವನು ಸಮ್ಮತಿಸಿದರೆ ಹೋಗಿ.

ಈ ಮಾತುಗಳನ್ನು ಕೇಳಿ ನೀಲಮ್ಮಾಜಿಗೆ ನಿರಾಶೆಯಾಯಿತು. ಅವಳಿಗೆ ಆಗ ಹದಿನೈದು ವರ್ಷಗಳಾಗಿದ್ದವು. ಲೋಕದ ಅನುಭವವು ಏನೂ ಇರಲಿಲ್ಲ. ದೇವಾಂಬಿಕೆಯೂ, ನಂಜಮ್ಮಾಜಿಯೂ ತನಗೆ ಯಾತಕ್ಕೆ ಅಡ್ಡಿ ಮಾಡುವರೆಂಬದು ಅವಳಿಗೆ ತಿಳಿಯಲಿಲ್ಲ. ಅವಳಿಗೆ ಯೌವನಾವಸ್ಥೆಯು ಆಗಲೆ ಮೂಡಿದ್ದು, ಬಹು ಸುಂದರವಾಗಿ ತೋರುತ್ತಿದ್ದಳು. ಅವಳ ಅಕ್ಕನಾದ ದೇವಮ್ಮಾಜಿಗೆ ಆಗ ಇಪ್ಪತ್ತೆರಡು ವರ್ಷ ವಯಸ್ಸಾಗಿದ್ದಿತು. ಅವಳೂ ಅಪೂರ್ವ ರೂಪವತಿಯಾಗಿದ್ದಳು. ರೂಪಕ್ಕೆ ತಕ್ಕಹಾಗೆ ಆ ಇಬ್ಬರು ಸೋದರಿಯರು ಬಹು ಗುಣವಂತರೂ, ಧೈರ್ಯಸ್ಥರೂ ಆಗಿದ್ದರು.

ನೀಲವ್ಮಾಜಿಯು ಅಣ್ಣನು ಏನು ಹೇಳಿ ಬಿಡುವನೋ, ಎಂದು ಅಂಜುತ್ತಂಜುತ್ತಲೆ, ಮಹಡಿಯ ಮೇಲೆ ಅವನ ಕಿರುಮನೆಗೆ ಹೋಗಿ, 'ಅಣ್ಣಾ' ಎಂದು ಕರೆದಳು.

ವೀರರಾಜನು ಒಳಗಿನಿಂದಲೇ, 'ಯಾರು?' ಎಂದನು

ನೀಲವ್ಮಾಜಿ:—ನಾನು ಅಣ್ಣಾ! ನೀಲವ್ಮಾಜಿ

ವೀರರಾಜ: ನೀಲಾ, ಏನು? ಯಾತಕ್ಕೋಸ್ಕರ ನನ್ನಲ್ಲಿಗೆ ಬಂದೆ?

ನೀಲವ್ಮಾಜಿ:—ಅಣ್ಣಾ, ನಾಳೆ ದೊಡ್ಡಪೇಟೆಯ ಮಹಾದೇವರ ಗುಡಿಯಲ್ಲಿ ದೇವರ ಉತ್ಸವವಂತೆ! ನಾವು ದೇವರ ಉತ್ಸವಕ್ಕೆ ಹೋಗುತ್ತೇವೆ

ವೀರರಾಜ:—ನೀವು ಯಾರ್ಯಾರು ಹೋಗುವುದು?

ನೀಲವ್ಮಾಜಿ:—ನಾನು ಮತ್ತು ಅಕ್ಕ. ಅತ್ತಿಗೆ ಬರುತ್ತಾಳೊ ಏನೋ ತಿಳಿಯದು.

ವೀರರಾಜ:—ನೀವು ಹೆಂಗಸರು; ಹೋಗುವುದು ಉಚಿತವಾಗಿ ತೋರುವುದಿಲ್ಲ. ನಿಮಗೆ ಪೇಟೆಯಲ್ಲಿ ಏನಾದರೂ ಅಪಾಯ ಒದಗಿದರೆ, ತಪ್ಪಿಸುವವರು ಯಾರು? ಪೇಟೆಯಲ್ಲೆಲ್ಲಾ ಸೈನಿಕರ ಹಾವಳಿಯು ಹೆಚ್ಚಾಗಿದೆ.

ನೀಲವ್ಮಾಜಿ:—'ಸೈನಿಕರು ನಮ್ಮನ್ನೇನು ಮಾಡುವರು? ನಾವು ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಹೋಗಿ, ಪಲ್ಲಕ್ಕಿಯಲ್ಲಿಯೇ ಹಿಂದುರಿಗಿ ಬರುವೆವು. ದೇವಸ್ಥಾನದಲ್ಲಿಯೂ ನಾವು ಮುಸುಕು ಹಾಕಿಕೊಂಡೇ ಇರುವೆವು.'

ವೀರರಾಜ:—'ನಾವು ಶತ್ರುಗಳ ಮಧ್ಯೆ ಇರುವೆವು. ಯಾವ ಹೊತ್ತಿಗೆ ನಮಗೆ ಏನು ಅಪಾಯವು ಸಂಭವಿಸುವದೋ ಹೇಳಲಿಕ್ಕೆ ಆಗುವದಿಲ್ಲ. ಒಂದುವೇಳೆ ನಿಮ್ಮ ಮೇಲೆ ಕೆಟ್ಟ ಜನರು ಬಿದ್ದು, ನಿಮ್ಮನ್ನು ಕೆಡಿಸಲಿಕ್ಕೆ ಪ್ರಯತ್ನಿಸಿದರೆ, ನಿಮ್ಮ ರಕ್ಷಣ ಮಾಡುವವರಾರು?'

ನೀಲವ್ಮಾಜಿ:—'ನಮ್ಮ ಸೇವಕರು ನಮ್ಮೊಡನೆ ಬರುವರು. ಅಣ್ಣಾ, ನಮ್ಮೊಡನೆ ನೀನೂ ಬರಲಾರೆಯಾ?'

ವೀರರಾಜನು ಸ್ವಲ್ಪ ಹೊತ್ತು ಯೋಚಿಸಿ:—'ಆಗಲಿ, ನೋಡೋಣ. ಎಷ್ಟು ದಿವಸ ಅಂಜುಬುರಕರ ಹಾಗೆ ಮನೆಯಲ್ಲಿ ಕುಳಿತುಕೊಂಡಿರುವದು? ನಾಳೆ ಮೂರು ಗಂಟೆಗೆ ಹೊರಟು ಹೋಗಿ; ಆದರೆ ಐದು ಗಂಟೆಗೆ ಹಿಂದಿರುಗಿ ಬರಬೇಕು ನಾನೂ ಹಿಂದಿನಿಂದ ಬರುವೆನು.'

ನೀಲವ್ಮಾಜಿ:—'ಅಣ್ಣಾ, ಹಾಗೆಯೇ ಆಗಲಿ.'

ನೀಲಮ್ಮಾಜಿಗೆ ಅಣ್ಣನು ಹೋಗಲು ಅನುಮತಿ ಇತ್ತದು ಬಹಳ ಸಂತೋಷವನ್ನುಂಟು ಮಾಡಿತು ಅವಳು ಆ ಕ್ಷಣವೇ ಮಹಡಿಯಿಂದ ಕೆಳಗಿಳಿದು, ತನ್ನ ಅಕ್ಕ ಅತ್ತಿಗೆಯವರಿಗೆ ಆ ವಿಷಯವನ್ನು ಹೇಳಿದಳು ದೇವಾಂಬಿಕೆಯು ಅಲ್ಲಿಯೇ ಕುಳಿತಿದ್ದಳು. ಅವಳು ಈ ಮಾತುಗಳನ್ನು ಕೇಳಿ, ಆಗಲೇ ವೀರರಾಜನನ್ನು ಕರೆದು:—'ಅಪ್ಪಾ, ವೀರರಾಜ! ನೀನು ಇವರಿಗೆ ಹೋಗಲು ಅಪ್ಪಣೆ ಕೊಟ್ಟಿದ್ದೇನೋ ಸರಿ; ಆದರೆ ನೀನೂ ಇವರೊಡನೆ ಹೋಗಿ, ಇವರನ್ನು ಸುರಕ್ಷಿತವಾಗಿ ಕರೆದುಕೊಂಡು ಬರಬೇಕು' ಎಂದಳು.

ವೀರರಾಜ:—'ಹಾಗೆಯೇ ಆಗಲಿ ಅಮ್ಮಾ!' ಎಂದನು.

---

## ದಳ :: ೭

ಮಾರನೆಯ ದಿವಸ ಮಧ್ಯಾಹ್ನ ಕಳೆದು ಸುಮಾರು ಮೂರು ಗಂಟೆಯ ಸಮಯ. ದೇವಮ್ಮಾಜಿಯೂ ನೀಲಮ್ಮಾಜಿಯೂ ಅಮೂಲ್ಯವಾದ ಸೀರೆಗಳನ್ನುಟ್ಟುಕೊಂಡು ಮಹಾದೇವರ ಗುಡಿಗೆ ಹೋಗಲು ಸಿದ್ಧರಾಗಿದ್ದಾರೆ. ಹೊರಗೆ ಒಂದು ಪಲ್ಲಕ್ಕಿಯು ಜಗುಲಿಯ ಮೇಲೆ ಇಡಲ್ಪಟ್ಟಿತ್ತು. ಅಲ್ಲಿಯೇ ಬೋಯಿಗಳು ನಿಂತುಕೊಂಡಿದ್ದಾರೆ. ಅಷ್ಟರಲ್ಲಿ ಒಬ್ಬ ಮುಸಲ್ಮಾನನು ಒಂದು ಬೋಯಿಗಳ ಮುಖ್ಯಸ್ಥನನ್ನು ಕರೆದು ಅವನೊಡನೆ ಪಿಸಪಿಸನೆ ಮಾತನಾಡುವದಕ್ಕೆ ತೊಡಗಿದನು. ಕೊನೆಗೆ ತನ್ನ ಜೇಬಿನಿಂದ ಕೆಲವು ವರಹಗಳು ತುಂಬಿದ್ದ ಒಂದು ಚೀಲವನ್ನು ಅವರ ಕೈಯಲ್ಲಿ ಇಟ್ಟು ಹೊರಟು ಹೋದನು.

ಸ್ವಲ್ಪಹೊತ್ತಿನಲ್ಲಿ ಆ ಸಹೋದರಿಯರಿಬ್ಬರೂ ಪಲ್ಲಕ್ಕಿಯಲ್ಲಿ ಕುಳಿತರು. ವೀರರಾಜನು "ನೀವು ಹೋಗಿ; ನಾನು ಹಿಂದಿನಿಂದ ಬರುವೆನು" ಎಂದು ಹೇಳಿದನು.

ದೇವಸ್ಥಾನವು ಇವರ ಮನೆಯಿಂದ ಸುಮಾರು ಮುಕ್ಕಾಲು ಮೈಲು ದೂರದಲ್ಲಿ ಇದ್ದಿತು. ಬೋಯಿಗಳು ಬೇಗನೆ ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋಗಿ ದೇವಸ್ಥಾನದ ಬಾಗಿಲಲ್ಲಿ ಇಳಿಸಿದರು. ದೇವಮ್ಮಾಜಿಯೂ ನೀಲಮ್ಮಾಜಿಯೂ ಮುಖಕ್ಕೆ ಮುಸುಕನ್ನು ಹಾಕಿಕೊಂಡು ದೇವರ ಗುಡಿಯು ಒಳಹೊಕ್ಕರು. ಅಷ್ಟರಲ್ಲಿ ವೀರರಾಜನು ಅಲ್ಲಿಗೆ ಬಂದು ತಾನೂ ಗುಡಿಯ ಒಳಗೆ ಹೋದನು ಅಲ್ಲಿ ದೇವರ ದರ್ಶನಮಾಡಿಕೊಂಡು, ಅವರು ಅರ್ಧ

ಗಂಟೆಯಲ್ಲಿ ಹೊರಗೆ ಬಂದರು; ಆದರೆ ಹೊರಗೆ ಬಂದು ನೋಡುವಷ್ಟರಲ್ಲಿ ಬೋಯಿಗಳು ಇರಲಿಲ್ಲ. ವೀರರಾಜನು ದೇವಸ್ಥಾನದ ಸುತ್ತುಮುತ್ತ ಹೋಗಿ ಬೋಯಿಗಳನ್ನು ಹುಡುಕಿದನು. ಅಲ್ಲಿಯೂ ಅವರು ಇರಲಿಲ್ಲ. ವೀರರಾಜ ನಿಗೆ ಆಶ್ಚರ್ಯವುಂಟಾಯಿತು. ಅವನು ಕೆಲವು ಸಮಯ ಅವರನ್ನು ಕಾದನು. ಆದರೂ ಬೋಯಿಗಳನ್ನು ಕಾಣಲಿಲ್ಲ. ಕೊನೆಗೆ ಇನ್ನೇನು ಮಾಡುವದೆಂದು ವೀರರಾಜನು ಚಿಂತಾಕ್ರಾಂತನಾಗಿ ತನ್ನ ಸೇವಕನಾದ ಮಲ್ಲಪ್ಪನನ್ನು ಅಲ್ಲಿಯೇ ಬಿಟ್ಟು, ತಾನು ಬೇರೆ ಯಾರಾದರೂ ಬೋಯಿಗಳು ಸಿಗುತ್ತಾರೋ, ಎಂದು ಬೀದಿಗಳಲ್ಲಿ ಹುಡುಕಿಕೊಂಡು ಹೋದನು. ಅವನ ಸಂಗಡವೇ ಅವನ ಸಹವಾಸಿಯಾದ ಹೊಂಬಾಳೆ ನಾಯಕನೂ ಇದ್ದನು

ವೀರರಾಜನೂ ಹೊಂಬಾಳೆನಾಯಕನೂ ದೇವಸ್ಥಾನದಿಂದ ಹೊರಟು ಇನ್ನೂ ಐದು ನಿಮಿಷಗಳಾಗಿರಲಿಲ್ಲ. ಆಗ ದೇವಸ್ಥಾನದಿಂದ ನೂರು ಮಾರುಗಳ ದೂರದಲ್ಲಿದ್ದ ಒಂದು ಮನೆಯ ಹಿಂಭಾಗದಿಂದ ಹೊರಟು ಬೋಯಿಗಳ ಮುಖ್ಯಸ್ಥನೂ, ಅವನ ಅನುಚರರಾದ ಕೆಲವು ಬೋಯಿಗಳೂ, ವೀರರಾಜನ ಸೆರೆಮನೆಯ ಮುಂದುಗಡೆ ಬೋಯಿಗಳ ಮುಖ್ಯಸ್ಥನೊಡನೆ ಮಾತಾಡಿದ್ದ ಆ ಮಹಮ್ಮದೀಯ ಸಿಪಾಯಿಯೂ ದೇವಸ್ಥಾನಕ್ಕೆ ಬಂದರು. ಅಲ್ಲಿ ವೀರರಾಜನ ಸೇವಕನಾದ ಮಲ್ಲಪ್ಪನು ಪಲ್ಲಕ್ಕಿಯ ಹತ್ತಿರ ಕುಳಿತಿದ್ದನ್ನು ನೋಡಿ: "ಮಲ್ಲಪ್ಪಾ, ಯಜಮಾನರು ಎಲ್ಲಿ ಹೋದರು? ಬಹಳ ಹೊತ್ತಾಯಿತು. ಸಾಯಂಕಾಲವಾಗುತ್ತ ಬಂತು. ಇನ್ನು ಹೋಗೋಣ" ಎಂದರು.

ಮಲ್ಲಪ್ಪ:—"ಏನು ಬೋರಯ್ಯ! ನೀನು ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ದೆ? ಯಜಮಾನರು ನಿನ್ನನ್ನು ಇಷ್ಟು ಹೊತ್ತು ಕಾದು ಕಾದು, ಸಾಕಾಗಿ ಪಲ್ಲಕ್ಕಿಯನ್ನು ಹೊರುವದಕ್ಕೆ ಬೇರೆ ಯಾರಾದರೂ ಸಿಕ್ಕುವರೋ ಎಂದು ಹುಡುಕುತ್ತಾ ಹೋಗಿರುವರು."

ಬೋರಯ್ಯ:—"ಸ್ವಲ್ಪ ಹೆಂಡ್‌ದಂಗಡಿಗೆ ಹೋಗಿದ್ದೆನಪ್ಪಾ. ಇನ್ನು ಹೊತ್ತಾಗಿ ಬಿಟ್ಟಿತು. ಬೇಗ ಅಮ್ಮಾವರಿಗೆ ಹೇಳು, ಹೊರಡೋಣ"

ಮಲ್ಲಪ್ಪನು ದೇವಸ್ಥಾನದ ಒಳಗೆ ಕುಳಿತುಕೊಂಡಿದ್ದ ರಾಜಕುಮಾರಿಯರಿಗೆ ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳಲು ಹೇಳಿದನು ಕೂಡಲೆ ಅವರು ಬಂದು ಪಲ್ಲಕ್ಕಿಯಲ್ಲಿ ಕುಳಿತುಕೊಂಡರು ಅವರು ಪಲ್ಲಕ್ಕಿಯ ಹತ್ತಿರ ಬರುವುದನ್ನೂ, ಪಲ್ಲಕ್ಕಿಯಲ್ಲಿ ಕೂರುವುದನ್ನೂ ಆ ಮಹಮ್ಮದೀಯ ಸಿಪಾಯಿಯು ಎವೆ

ಇಕ್ಕಡೆ ನೋಡುತ್ತಿದ್ದನು. ಇವನನ್ನು ನೋಡಿ ಮಲ್ಲಪ್ಪನಿಗೆ ಭಯವೂ, ಕುತೂಹಲವೂ ಉಂಟಾದುವು. ಅವನು ಬೋರಯ್ಯನ ಹತ್ತಿರ ಹೋಗಿ, ಮೆಲ್ಲನೆ "ಬೋರಯ್ಯ, ಆ ಸಿಪಾಯಿ ಸಾಬರು ಯಾರ?" ಎಂದು ಕೇಳಿದನು. ಬೋರಯ್ಯನು "ಅವನು ನಮ್ಮ ಕಿಲ್ಲೇದಾರರ ಅಂಗರಕ್ಷಕ ಸೈನ್ಯದ ಜಮಾದಾರ್ ಜಾಫರ್‌ಖಾನನ ಪ್ರೀತಿಯ ಸೇವಕ. ಅವನನ್ನು ಕೆಣಕಬೇಡ ಅವನ ಇಷ್ಟದಂತೆ ನಡೆದರೆ, ನಿನಗೆ ತುಂಬಾ ಹಣವು ದೊರಕುವುದು" ಎಂದು ಹೇಳಿ, ಗುಲಾಮಲ್ಲಿಯ ಕಡೆಗೆ ನೋಡಿ, ಕಣ್ಣು ಮಿಟುಕಿಸಿದನು ಮಲ್ಲಪ್ಪನಿಗೆ ಇವರ ವರ್ತನೆಯು ಸಂಶಯಾಸ್ಪದವಾಗಿ ತೋರಿತು "ಇಲ್ಲಿ ಏನೋ ಅಪಾಯವಿದೆ. ವೀರರಾಜನೂ ಹೊಂಬಾಳೆನಾಯಕನೂ ಇಲ್ಲಿಲ್ಲ. ಸಮಯವು ಕತ್ತಲಾಗುತಾ ಬಂತು." ಎಂದು ಮಲ್ಲಪ್ಪನು ಮನಸ್ಸಿನಲ್ಲೇ ಚಿಂತಿಸತೊಡಗಿದನು. ಬೋಯಿಗಳು ಪಲ್ಲಕ್ಕಿಯನ್ನು ಹೊತ್ತುಕೊಂಡು ಬೇಗ ಬೇಗನೆ ನಡೆಯತೊಡಗಿದರು. ಮಲ್ಲಪ್ಪನು ಅವರ ಹಿಂದೆಯೇ ನಡೆದನು. ಸ್ವಲ್ಪ ದೂರದಲ್ಲಿ ಆ ಗುಲಾಮಲ್ಲಿಯು ಹಿಂದಿನಿಂದ ಬರುತ್ತಿದ್ದನು. ಸ್ವಲ್ಪ ದೂರ ಹೋಗುತ್ತಲೆ ಬೋಯಿಗಳು ವೀರರಾಜನನ್ನು ಸೆರೆಯುಲ್ಲಿಟ್ಟಿದ್ದ ಮನೆಯ ರಸ್ತೆಯನ್ನು ಬಿಟ್ಟು ಇನ್ನೊಂದು ರಸ್ತೆಯಲ್ಲಿ ಪಲ್ಲಕ್ಕಿಯನು ಹೊತ್ತುಕೊಂಡು ಹೋದರು. ಆಗ ಮಲ್ಲಪ್ಪನು ಆ ಬೋಯಿಗಳನ್ನು ಕುರಿತು, "ಅದು ನಮ್ಮ ರಸ್ತೆಯಲ್ಲ, ನೀವು ದಾರಿ ತಪ್ಪಿ ಬಿಟ್ಟಿದ್ದೀರಿ." ಎಂದು ಗಟ್ಟಿಯಾಗಿ ಕೂಗಿ ಹೇಳಿದನು; ಆದರೆ ಆ ಬೋಯಿಗಳು ಕೇಳಿದರೂ ಕೇಳದಿದ್ದವರಂತೆ ನಡೆದರು. ಮಲ್ಲಪ್ಪನು ಮತ್ತೆ ಬೊಬ್ಬೆ ಹೊಡೆದನು. ಆಗ ಹಿಂದಿದ್ದ ಗುಲಾಮಲ್ಲಿಯು ಓಡಿ ಬಂದು ಮಲ್ಲಪ್ಪನ ತಲೆಗೆ ಬಲವಾಗಿ ಒಂದು ಪೆಟ್ಟನ್ನು ಹೊಡೆದನು ಮಲ್ಲಪ್ಪನು, "ಅಯ್ಯೋ ಸತ್ತೆ!" ಎಂದು ಕಿರಿಚಿಕೊಂಡು ಕೆಳಗೆ ಬಿದ್ದನು. ಮಲ್ಲಪ್ಪನ ಕೂಗನ್ನು ಕೇಳಿ ಒಳಗಿದ್ದ ರಾಜಕುಮಾರಿಯರಿಗೆ ಭಯವಾಯಿತು. ಅವರು ಒಬ್ಬ ಬೋಯಿಯನ್ನು ಸಂಬೋಧಿಸಿ, 'ವೀರರಾಜರು ಎಲ್ಲಿ ಹೋದರು?' ಎಂದು ಕೇಳಿದರು.

ಬೋಯಿ:--ನಮಗೆ ಗೊತ್ತಿಲ್ಲ ಅವ್ವಾ! ಎಂದು ಉತ್ತರವಿತ್ತನು.

ಇಷ್ಟರಲ್ಲಿ ಮಲ್ಲಪ್ಪನು ಚೇತರಿಸಿಕೊಂಡು ಎದ್ದು, ಬೋಯಿಗಳನ್ನು ಕುರಿತು, ನೀವು ನಮ್ಮ ರಾಜಕುಮಾರಿಯರನ್ನು ಅಪಾಯಕ್ಕೆ ಗುರಿ ಮಾಡಿದ್ದೀರಿ ನೀವು ಈಗಲೆ ರಾಜರ ಮನೆಯ ಕಡೆಗೆ ಪಲ್ಲಕ್ಕಿಯನ್ನು ಹೊತ್ತು

ಕೊಂಡು ನಡೆಯಿರಿ. ಇಲ್ಲವಾದರೆ ನಿಮ್ಮ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲ.'' ಎಂದನು. ಅವನ ಮಾತುಗಳನ್ನು ಕೇಳಿ ಎಲ್ಲರೂ ಘೊಳ್ಳೆಂದು ನಕ್ಕುಬಿಟ್ಟರು ಆದರೂ ಮಲ್ಲಪ್ಪನು ಹೆದರದೆ, ಪಲ್ಲಕ್ಕಿಯ ಮುಂದೆ ನಿಂತುಕೊಂಡು, ಅವರ ದಾರಿಯನ್ನು ಅಡ್ಡಗಟ್ಟಿದನು. ಆಗ ಗುಲಾಮಲ್ಲಿಯು ಅಲ್ಲಿಗೆ ಬಂದು "ದಾರಿ ಬಿಡು'' ಎಂದ, ಹಿಂದುಸ್ಥಾನಿಯಲ್ಲಿ ಗದ್ದರಿಸಿದನು.

ಆಗ ಮಲ್ಲಪ್ಪನು "ಈ ಸಾಬಿಗೆ ಏನು ಕೆಲಸ? ನೀನು ನಿನ್ನ ಕೆಲಸ ವನ್ನು ಮಾಡು ನಿನ್ನನ್ನು ಕರೆದವರಾರು?'' ಎಂದನು. ಆಗ ಗುಲಾಮಲ್ಲಿಯು ಮಲ್ಲಪ್ಪನನ್ನು ಹೊಡೆಯುವದಕ್ಕೆ ಬಂದನು ಮಲ್ಲಪ್ಪನ ಕೈಯಲ್ಲಿ ಒಂದು ದೊಣ್ಣೆ ಇತ್ತು. ಮಲ್ಲಪ್ಪನು, 'ಈ ಮಲ್ಲಪ್ಪನ ಪ್ರಾಣಹೋದರೂ ಚಿಂತೆಯಿಲ್ಲ; ನಾನು ರಾಜಕುಮಾರಿಯರನ್ನು ಪರಕೀಯರ ಸ್ವಾಧೀನಕ್ಕೆ ಬಿಡುವದಿಲ್ಲ.'' ಎಂದು ಹೇಳುತ್ತ ತನ್ನ ದೊಣ್ಣೆಯನ್ನು ಎತ್ತಿದನು. ಇವನ ದೊಣ್ಣೆಯನ್ನು ನೋಡಿ ಗುಲಾಮಲ್ಲಿಗೆ ಭಯವಾಯಿತು. ಅವನು ಸ್ವಭಾವತಃ ಅಂಜುಬುರು ಕನು. ಅವನಿಗೆ ಯುದ್ಧವಿದ್ಯೆಯು ಗೊತ್ತಿರಲಿಲ್ಲ.

ಅವನು ರೂಪವತಿಯರಾದ ಹೆಂಗಸರು ಎಲ್ಲಿದ್ದಾರೆಂದು ಗೊತ್ತುಹಚ್ಚಿ, ಅವರನ್ನು ಹೇಗಾದರೂ ಮಾಡಿ ತನ್ನ ಅಧಿಕಾರಿಗಳ ಅಂತಃಪುರಕ್ಕೆ ಸೇರಿಸಿ, ಅವರ ಮೆಚ್ಚಿಗೆಯನ್ನು ಪಡೆಯುತ್ತಿದ್ದನು ಈಗ ಮಲ್ಲಪ್ಪನು ದೊಣ್ಣೆ ಯನ್ನೆತ್ತಿದ್ದನ್ನು ನೋಡಿ ಅವನು 'ಬೋರಯ್ಯ, ಇವನನ್ನು ಹೊಡೆದೋಡಿಸು; ಪಲ್ಲಕ್ಕಿಯನ್ನು ಬೇಗನೆ ನಮ್ಮ ಕಿಲ್ಲೆದಾರನ ಮಹಲಿಗೆ ತೆಗೆದುಕೊಂಡು ಬಾ' ಎಂದನು. ಬೋರಯ್ಯನು ಇವನಿಂದ ಇನ್ನೂ ಸ್ವಲ್ಪ ಹಣವನ್ನು ಎಳೆಯಬೇಕೆಂದು "ಸಾಹೇಬರೇ, ನಾವು ಇವನೊಡನೆ ಜಗಳವಾಡಿ ತಲೆ ಯೊಡಿಸಿಕೊಂಡರೆ, ನಮ್ಮ ಹೆಂಡಿರು-ಮಕ್ಕಳಿಗೇನು ಗತಿ? ಅವರನ್ನು ಸಾಕು ವವರಾರು?'' ಎಂದನು.

ಗುಲಾಮಲ್ಲಿ:—ಮುಠ್ಠಾಳ, ನನ್ನನ್ನು ಹೊಡೆದು ಹಾಕುವದು ನಿನಗೆ ಕಾಣುವದಿಲ್ಲವೇ?

ಬೋರಯ್ಯಾ: —ಅದು ನಮಗೆ ತಿಳಿಯದು. ನಮ್ಮಲ್ಲಿ ಯಾರಾದರೂ ಸತ್ತರೆ, ನೀವು ಅವರ ಹೆಂಡಿರು-ಮಕ್ಕಳನ್ನು ಸಾಕುವದಕ್ಕೆ ಬೇಕಾದ ಹಣ ವನ್ನು ಕೊಡುತ್ತೀರೋ?

ಗುಲಾಮಲ್ಲಿ: –(ತನ್ನೊಳಗೆ ತಾನು) ಇವನು ನನ್ನಿಂದ ಹಣ ಸೆಳೆಯು ಲು ನೋಡುತ್ತಾನೆ. ನನ್ನ ಕೆಲಸವನ್ನು ಉಪಾಯದಿಂದ ಮಾಡಿಸುತ್ತೇನೆ ಆನಂತರ ಇವರಿಗೆ ನಾನು ಬುದ್ಧಿ ಕಲಿಸುತ್ತೇನೆ (ಪ್ರಕಾಶವಾಗಿ) ಬೋರಯ್ಯಾ, ಆಗಲಿ. ನಾನು ಇನ್ನೂ ಹತ್ತುವರಹಗಳನ್ನು ಕೊಡುತ್ತೇನೆ. ನೀನು ಬೇಗನೆ ಈ ಹೆಂಗಸರನ್ನು ಆ ನನ್ನ ಅಂತಃಪುರಕ್ಕೆ ಸೇರಿಸು

ಬೋರಯ್ಯ:—ಎಲ್ಲಿ? ಸಾಹೇಬರೇ, ಈಗಲೇ ಹಣವನ್ನು ಬಿಚ್ಚಿ ಇಲ್ಲ ದಿದ್ದರೆ ನಾವು ಇಲ್ಲಿಯೇ ಪಲ್ಲಕ್ಕಿಯನ್ನು ಬಿಟ್ಟು ಹೊರಟು ಹೋಗುತ್ತೇವೆ.

ಗುಲಾಮಲ್ಲಿ:—ಇಲ್ಲಿ ಎಲ್ಲಿಂದ ಹಣವನ್ನು ತರಲಿ? ಇವರನ್ನು ಖಾಸನ ವ ಹಲಿಗೆ ಸೇರಿಸು ನಂತರ ಪಿರಿಯಾಪಟ್ಟಣದ ಕೋಟೆಯ ಖಜಾನೆಯು ಬೀಗದ ಕೈಯು ನಿನಗೆ ಸಿಕ್ಕಿದಂತೆಯೇ ಸರಿ.

ಬೋರಯ್ಯ:—ಅದು ಹೇಗೆಯೋ ಇರಲಿ ಈಗ ನನಗಾ ಹತ್ತು ವರಹಗಳನ್ನು ಕೊಟ್ಟರೆ ನಾವು ಈ ಪಲ್ಲಕ್ಕಿಯನ್ನು ಬೇಕಾದಲ್ಲಿಗೆ ಹೊತ್ತು ಕೊಂಡು ಬರುತ್ತೇವೆ ಇಲ್ಲದಿದ್ದರೆ ನಾವು ಈ ರಾಜಕುಮರಿಯನ್ನು ಅರ ಮನೆಗೆ ತಲುಪಿಸಿಬಿಡುತ್ತೇವೆ.

ಗುಲಾಮಲ್ಲಿ:– ಈಗ ಒಳ್ಳೇ ಕಷ್ಟಕ್ಕಿಟ್ಟಿತ. ಕೈಗೆ ಸಿಕ್ಕಿದ ಬೇಟೆಯು ತಪ್ಪಿ ಹೋಗುವದೆಂಬ ಭೀತಿಯಿಂದ ತನ್ನ ಜೇಬಿನಿಂದ ಅವನು ಐದು ವರಹ ಗಳನ್ನು ತೆಗೆದು ಬೋರಯ್ಯನ ಕೈಯಲ್ಲಿಟ್ಟು, "ಬೋರಯ್ಯ, ಈಗ ಇಷ್ಟರಿಂದ ಸಮಾಧಾನ ಮಾಡಿಕೋ ನನ್ನ ಕೈಯಲ್ಲಿ ಇನ್ನು ಏನೂ ಇಲ್ಲ" ಎಂದನು. ಬೋರಯ್ಯನು ಸಿಕ್ಕಿದ್ದು ಬಿಟ್ಟರೆ ಕಲಿತವನ್ನು ಬುದ್ಧಿಯಿಲ್ಲವೆಂಬಂತೆ ಆ ಹಣ ವನ್ನು ತನ್ನ ಕಿಸೆಯಲ್ಲಿ ಹಾಕಿಕೊಂಡು ಪಲ್ಲಕ್ಕಿಯ ಹತ್ತಿರ ಬಂದನು. ಬೋಯಿಗಳು ಪಲ್ಲಕ್ಕಿಯನ್ನು ಕೆಳಗಿಳಿಸಿ ಕುಳಿತುಕೊಂಡಿದ್ದರು ಮಲ್ಲಪ್ಪನು ಪಲ್ಲಕ್ಕಿಯ ಎದುರಿನಲ್ಲಿ ನಿಂತುಕೊಂಡಿದ್ದನು. ಒಳಗೆ ದೇವಮ್ಮಾಜಿ ನೀಲ ಮ್ಮಾಜಿಯರು ತಾವು ಏಕೆ ದೇವರ ದರ್ಶನಕ್ಕೆ ಹೊರಟೆವೆಂದು ಚಿಂತಿಸುತ್ತಾ. 'ದೇವರೇ, ನಮ್ಮ ಮಾನವನ್ನುಳಿಸಬೇಕೆ'ಂದು ಪ್ರಾರ್ಥಿಸುತ್ತಿದ್ದರು.

ಬೋರಯ್ಯನು ಬಂದವನೇ: "ಮಲ್ಲಪ್ಪಾ, ದಾರಿಯಿಂದ ಏಳು; ಇಲ್ಲದಿದ್ದರೆ ನಿನ್ನ ಸೊಂಟ ಮುರಿದು ಬಿಡುತ್ತೇನೆ" ಎಂದನು. ಮಲ್ಲಪ್ಪನು ಕದಲಲಿಲ್ಲ. ಬೋರಯ್ಯನು ಜೋರಾಗಿದ್ದುದನ್ನು ನೋಡಿ. ಗುಲಾಮಲ್ಲಿ ಯು ಧೈರ್ಯದಿಂದ ಹಿಂದಿನಿಂದ ಬಂದು ಮಲ್ಲಪ್ಪನ ಬೆನ್ನಿಗೆ ಒಂದು

ಗುದ್ದು ಹೊಡೆದನು. ಮಲ್ಲಪ್ಪನು ಆ ಕ್ಷಣವೇ ಸಿಟ್ಟಿನಿಂದ ಕೆರಳಿದ ಸಿಂಹ ದಂತೆ ತಿರುಗಿ ಗುಲಾಮಲ್ಲಿಯನ್ನು ಹೊಡೆಯುವುದಕ್ಕೆ ದೊಣ್ಣೆ ಎತ್ತಿದನು; ಆದರೆ ಗುಲಾಮಲ್ಲಿಯು ಅಷ್ಟರಲ್ಲಿ ಎಷ್ಟೋ ಮಾರು ದೂರ ಓಡಿ ಹೋಗಿದ್ದನು.

ಮಲ್ಲಪ್ಪನ ಸಾಬಿಗೆ ಬೀಸಿದ ಪೆಟ್ಟು ತಪ್ಪಿ ಬೋರಯ್ಯನಿಗೆ ತಗಲಿತು; ಆದರೆ ಬೋರಯ್ಯನು ತನ್ನ ಕೈಯಲ್ಲಿದ್ದ ಕೋಲಿನಿಂದ ಆ ಪೆಟ್ಟನ್ನು ತಡೆದು, ಮಲ್ಲಪ್ಪನಿಗೆ ಒಮ್ಮೆ ಬಲವಾಗಿ ಹೊಡೆದನು ಆಗ ಮಲ್ಲಪ್ಪನಿಗೂ ಬೋರಯ್ಯ ನಿಗೂ ಅವನ ಕಡೆಯ ಬೋಯಿಗಳಿಗೂ ಹೊಡೆದಾಟವಾಯಿತು ಪಾಪ! ಮಲ್ಲಪ್ಪನು ಎಷ್ಟು ಹೊತ್ತು ಅವರೊಡನೆ ಕಾದಾಡಿಯಾನು? ಬೋಯಿ ಗಳೇ ಸಾಲದು ಎಂಬಂತೆ ಸಾಬಿಯೂ ಹಿಂದಿನಿಂದ ಮಲ್ಲಪ್ಪನಿಗೆ ಪೆಟ್ಟುಕೊಡ ಲಾರಂಭಿಸಿದನು ಮಲ್ಲಪ್ಪನು ಸ್ವಲ್ಪಹೊತ್ತಿನಲ್ಲಿಯೇ ಜ್ಞಾನಶೂನ್ಯನಾಗಿ ನೆಲಕ್ಕೆ ಬಿದ್ದನು. ಆಗ ದೇವಮ್ಮಾಜಿ-ನೀಲಮ್ಮಾಜಿಯರು. "ತಮ್ಮಪಾಡು ಹೀಗಾಯಿತೆ?" ಎಂದು ಕಣ್ಣೀರು ಸುರಿಸುತ್ತಾ, ದೇವರನ್ನು ನೆನೆಸುತ್ತಾ ಇದ್ದರು. ದೇವರು ಅವರ ಪ್ರಾರ್ಥನೆಯನ್ನು ಕೇಳಿದನೋ ಎಂಬ ಹಾಗೆ, ಅಷ್ಟು ಹೊತ್ತಿನಲ್ಲಿ ಕಿಲ್ಲೆದಾರನ ಮನೆಯ ಕಡೆಯಿಂದ ಒಬ್ಬ ಕುದುರೆ ಸವಾರನು ಪಲ್ಲಕ್ಕಿಯನ್ನಿಟ್ಟಿದ್ದ ಸ್ಥಳಕ್ಕೆ ಬಂದನು. ಅವನು ನೋಡುವುದಕ್ಕೆ ಸುಂದರನಾಗಿದ್ದು, ದಷ್ಟಪುಷ್ಟನಾಗಿದ್ದನು. ಮುಖದಲ್ಲಿ ಶೌರ್ಯದ ತೇಜಸ್ಸು ವ್ಯಕ್ತವಾಗುತ್ತಿತ್ತು. ಅವನು ಬಂದೊಡನೆಯೇ ಒಬ್ಬನು ಬಿದ್ದಿರುವದನ್ನೂ, ಇತರರು ಆ ಮನುಷ್ಯನ ಕೈ ಕಾಲು ಕಟ್ಟುವುದಕ್ಕೆ ಪ್ರಯತ್ನಿಸುತ್ತಿರುವದನ್ನೂ ಕಂಡನು. ಹತ್ತಿರದಲ್ಲಿಯೇ ಒಂದು ಪಲ್ಲಕ್ಕಿ ಇತ್ತು. ಒಡನೆಯೇ ಅವನು ಕುದುರೆಯಿಂದಿಳಿದು ತನ್ನ ಕತ್ತಿಯನ್ನು ಒರೆಯಿಂದ ಹಿರಿದು, "ನೀವು ಅವನ ಕೈಕಾಲುಗಳನ್ನು ಕಟ್ಟುವುದನ್ನು ಬಿಡಿ ನೀವು ಯಾರು? ಯಾತಕ್ಕೆ ಕಟ್ಟು ತ್ತೀರಿ?" ಎಂದು ಅಧಿಕಾರಯುಕ್ತವಾಣಿಯಿಂದ ಕೇಳಿದನು. ಅವನ ಸ್ವರ ವನ್ನು ಕೇಳಿ ಗುಲಾಮಲ್ಲಿಗೆ ಅವನು ಕೋಟೆಯ ಸೈನ್ಯದ ಮುಖ್ಯಾಧಿಕಾರಿ ಯಾದ ಖಾದರ್‌ಖಾನ್ ಕೈಸಣ ಎಂದು ತಿಳಿಯಿತು. ತಾನು ಇಲ್ಲಿರುವುದು ಆತನಿಗೆ ತಿಳಿದರೆ, ಕಿಲ್ಲೆದಾರನಿಗೆ ಹೇಳಿ ತನ್ನನ್ನು ಶಿಕ್ಷಿಸಿಯಾನು, ಎಂಬ ಭೀತಿಯಿಂದ ಅವನು ಆ ಮುಸುಕು ಮುಸುಕಾದ ಬೆಳಕಿನಲ್ಲಿ ಒಂದು ಗಲ್ಲಿಗೆ ನುಗ್ಗಿ ಮಾಯವಾದನು ಬೋಯಿಗಳ ಯಜಮಾನನಾದ ಬೋರಯ್ಯನು ಮಾತ್ರ ಅವನನ್ನು ಯಾರೆಂದು ತಿಳಿಯದೆ, "ನಾವು ಯಾರಾದರೆ ನಿನಗೇನು?

ನಿನ್ನ ಕೆಲಸ ಮಾಡಿಕೊಂಡು ಹೋಗು." ಎಂದನು ಆಗ ಖಾದರ್ ಖಾನನು ಒಂದು ಶಿಳ್ಳು ಹಾಕಿ ತನ್ನ ಯುದ್ಧ ಕತ್ತಿಯನ್ನು ತಿರುಗಿಸುತ್ತಾ, "ನಾವು ಯಾರೆಂದು ತಿಳಿದಿರುವೆ? ಬೇಗನೆ ಈ ಪಲ್ಲಕ್ಕಿಯ ಒಳಗೆ ಇರುವವರು ಯಾರು? ಎಲ್ಲಿಗೆ ತೆಗೆದುಕೊಂಡು ಹೋಗುತ್ತೀರಿ? ಎಂದು ಸ್ಪಷ್ಟವಾಗಿ ಹೇಳು. ಇಲ್ಲದಿದ್ದರೆ ಈಗಲೇ ನಿನ್ನನ್ನು ತುಂಡರಿಸಿ ಬಿಡುತ್ತೇನೆ" ಎಂದನು.

ಬೋರಯ್ಯನು ಇವನನ್ನು ನೋಡಿ ಸ್ವಲ್ಪ ಅಂಜಿ, ನಿಜವನ್ನು ಹೇಳದೆ "ಇವರು ಖಾನಸಾಹೇಬರ ಕುಟುಂಬ ಪೇಟೆಯಲ್ಲಿ ಇವರ ತಂದೆಯ ಮನೆಗೆ ಹೋಗಿದ್ದರು, ಆ ದಾರಿಯಲ್ಲಿ ಕಳ್ಳರು ನಮ್ಮ ಮೇಲೆ ಬಿದ್ದರು. ಅವರಲ್ಲಿ ಒಬ್ಬ ನನ್ನು ಕಟ್ಟಿಹಾಕಿದ್ದೇವೆ."

ಖಾದರ್ ಖಾನ್:—ಛೀ ಸುವ್ವರ್! ಬದಮಾಷ್! ನನ್ನಲ್ಲಿ ಸುಳ್ಳು ಹೇಳತೀಯಾ?" ಎಂದು ಹೇಳಿ. ಬೋರಯ್ಯನ ಕೆನ್ನೆಗೆ ಒಮ್ಮೆ ಬಲವಾಗಿ ಹೊಡೆದನು

ಆಗ ಬೋರಯ್ಯನು ಖಾದರಖಾನನ ಕಾಲಿಗೆ ಬಿದ್ದು, "ಬುದ್ಧೀ! ಮಾಫ್ ಮಾಡಬೇಕು. ಇದೆಲ್ಲ ಗುಲಾಮಲ್ಲಿಯು ಮಾಡಿದ್ದು. ನನ ಗೊಂದೂ ಗೊತ್ತಿಲ್ಲ." ಎಂದನು.

ಖಾದರಖಾನ್:—"ಯಾವ ಗುಲಾಮಲ್ಲಿ? ಅವನೇನು ಮಾಡಿದನು? ಎಲ್ಲಾ ವೃತ್ತಾಂತವನ್ನು ಹೇಳು" ಎಂದನು.

ಆಗ ಬೋರಯ್ಯನು: —"ಕಿಲ್ಲೆದಾರರು ಈ ಹೆಂಗಸರನ್ನು ಕರೆದು ಕೊಂಡು ಬರಹೇಳಿದರೆಂದು ಗುಲಾಮಲ್ಲಿಯು ನನಗೆ ಹೇಳಿದ್ದರಿಂದ, ನಾನು ನಂಬಿ ಹಾಗೆಯೇ ಪಲ್ಲಕ್ಕಿಯನ್ನು ಈ ದಾರಿಯಿಂದ ಹೊರಿಸಿಕೊಂಡು ಬಂದೆನು. ನನಗೆ ಈ ಸ್ತ್ರೀಯರಾರೆಂಬದು ಗೊತ್ತಿಲ್ಲ" ಎಂದು ಸುಳ್ಳು ಹೇಳಿದನು.

ಖಾದರ್ ಖಾನನಿಗೆ ಇವನು ಸುಳ್ಳು ಹೇಳುತ್ತಾನೆಂಬದು ಸ್ಪಷ್ಟವಾಯಿತು. ಅವನಿಗೆ ತಿರುಗಿ ಒಂದೆರಡು ಏಟುಕೊಟ್ಟು, ತನ್ನ ಕಡೆಯವರಿಗೆ ಅವನನ್ನು ಹಿಡಿದುಕೊಂಡು ಹೋಗಿ ಸೆರೆಮನೆಯಲ್ಲಿ ಹಾಕುವಂತೆ ಹೇಳಿ, ತಾನು ಆ ಪಲ್ಲಕ್ಕಿ ಇರಿಸಿದ್ದಲ್ಲಿಗೆ ಹೋಗಿ:—"ಅಕ್ಕಾ! ನಾನು ಪರಕೀಯನು. ಮಾತ ನಾಡುತ್ತೇನೆಂದು ಸಂಕೋಚಪಡಬೇಡಿರಿ ಈಗ ನೀವು ಸಂಕಟದಲ್ಲಿರುವಿರಿ. ನೀವು ಯಾರು? ಎಲ್ಲಿಗೆ ಹೊರಟಿರುವಿರಿ? ನಾನು ನಿಮ್ಮನ್ನು ನಿಮ್ಮ ಮನೆಗೆ ಕಳುಹಿಸಿಕೊಡುತ್ತೇನೆ" ಎಂದನು.

ಪಲ್ಲಕ್ಕಿಯಲ್ಲಿದ್ದ ದೇವಮ್ಮಾಜಿಯು ಧೈರ್ಯಗೊಂಡು "ಅಣ್ಣಾ, ನಿಮ್ಮ ಮಾತು ಕೇಳಿದರೆ ದೇವರೇ ನಮ್ಮ ಸಹಾಯಕ್ಕಾಗಿ ನಿಮ್ಮನ್ನು ಕಳುಹಿಸಿದಂತೆ ಕಾಣುವುದು ನಾವು ಚೌಕದ ಹತ್ತಿರವಿರುವ ಮಹಡಿಯ ಮನೆಯಲ್ಲಿ ವಾಸಮಾಡುತ್ತೇನೆ. ದಯವಿಟ್ಟು ನೀವು ನಮ್ಮನ್ನು ಅಲಿಯವರೆಗೆ ತಲುಪಿಸಬೇಕು." ಎಂದನು

ಖಾದರ್ ಖಾನ್: —ಓಹೋ! ನೀವು ಕೊಡಗಿನ ರಾಜಕುಮಾರ ಮನೆಯವರೋ! ನೀವು ಯಾತಕ್ಕೆ ಯಾರೂ ಸಹಾಯಕರಿಲ್ಲದೆ ಹೊರಟಿರಿ?

ದೇವಮ್ಮಾಜಿ:—ನಮ್ಮ ಅಣ್ಣನು ನಮ್ಮ ಸಂಗಡ ಗುಡಿಗೆ ಬಂದಿದ್ದನು. ದೇವರ ದರ್ಶನ ಮಾಡಿ ಹೊರಗೆ ಬರುವಾಗ ಬೋಯಿಗಳು ಇರಲಿಲ್ಲ. ಅವರನ್ನು ಕಾದೂ ಕಾದೂ ಸಾಕಾಗಿ, ನಮ್ಮ ಅಣ್ಣನು ಬೇರೆ ಬೋಯಿಗಳನ್ನು ಹುಡುಕಿಕೊಂಡು ಬರುತ್ತೇನೆಂದು ಹೊರಟನು. ಆ ಸಮಯದಲ್ಲಿ ಇವರು ಎಲ್ಲಿಂದಲೋ ಬಂದು ನಮ್ಮನ್ನು ಪಲ್ಲಕ್ಕಿಯಲ್ಲಿ ಕೂರಲು ಹೇಳಿ, ಇಲ್ಲಿಗೆ ತೆಗೆದುಕೊಂಡು ಬಂದರು, ಎಂದಳು.

ಖಾದರ್ ಖಾನ್:—ಆಗಲಿ. ಇವರಿಗೆ ತಕ್ಕ ಶಿಕ್ಷೆಯನ್ನು ಮಾಡುತ್ತೇನೆ. ಈಗ ನಿಮ್ಮನ್ನು ನಿಮ್ಮ ಮನೆಗೆ ತಲುಪಿಸುವೆನು ಬೋಯಿಗಳೇ! ಬೇಗನೆ ಪಲ್ಲಕ್ಕಿಯನ್ನು ಹೆಗಲ ಮೇಲೆ ಏರಿಸಿ, ಎಂದು ಖಾದರ್ ಖಾನನು ಬೋಯಿಗಳಿಗೆ ಆಜ್ಞೆ ಮಾಡುವ ಸಮಯಕ್ಕೆ ಸರಿಯಾಗಿ ವೀರರಾಜನು ಹೊಂಬಾಳೆ ನಾಯಕನೊಡನೆ ಅಲ್ಲಿಗೆ ಬಂದನು. ಆಗ ರಾತ್ರಿ ಸುಮಾರು ಏಳೂವರೆ ಘಂಟೆಯಾಗಿದ್ದಿತು; ಆದರೆ ದಶಮೀ ತಿಥಿಯಾದ್ದರಿಂದ ಬೆಳದಿಂಗಳು ಸಾಧಾರಣ ಪ್ರಕಾಶಮಯವಾಗಿದ್ದಿತು. ವೀರರಾಜನು ಬೆಳದಿಂಗಳಲ್ಲಿ ಖಾದರ್ ಖಾನನು ತನ್ನ ಸಹೋದರಿಯರ ಪಲ್ಲಕ್ಕಿಯ ಹತ್ತಿರ ನಿಂತುಕೊಂಡಿರುವದನ್ನು ಕಂಡನು. ಈತನೇ ತನ್ನ ತಂಗಿಯರನ್ನು ಅಪಹರಿಸುವ ಪ್ರಯತ್ನದಲ್ಲಿದ್ದಾನೆಂದು ಯೋಚಿಸಿ, ಸಿಟ್ಟಿನಿಂದ ಕುದಿಯಹತ್ತಿದನು. ಆ ಕ್ಷಣವೇ "ಸೂಳೆಯಮಗನೆ, ಯಾರ ಮನೆಯ ಹೆಂಗಸರೆಂದು ಯೋಚನೆ ಮಾಡಿದೆಯಾ, ಹೀಗೆ ರಾತ್ರಿಯಲ್ಲಿ ಕದ್ದುಕೊಂಡು ಹೋಗುವದಕ್ಕೆ?" ಎಂದು ಹೇಳಿ ತನ್ನ ಒರೆಯಲ್ಲಿದ್ದ ಕತ್ತಿಯನ್ನು ಹಿರಿದು ಖಾದರಖಾನನ ಮೇಲೆ ಬೀಳುವದಕ್ಕೆ ಬಂದನು. ಆಗ ಖಾದರ್ ಖಾನನು ಮುಗುಳು ನಗೆ ನಗುತ್ತ ನಿಂತುಕೊಂಡನು; ಆದರೆ ಅವನ ಕೈಕೆಳಗಿನ ಒಬ್ಬಿಬ್ಬ ಸೈನಿಕರು ತಮ್ಮ ತಮ್ಮ ಕತ್ತಿಗಳನ್ನು ಹಿರಿದು ನಿಂತರು.

ವೀರರಾಜನಿಗೆ ಖಾದರ್‌ಖಾನನು ಮುಗುಳು ನಗೆ ನಗುವದನ್ನು ನೋಡಿ' ಕೋಪದೊಡನೆ ಆಶ್ಚರ್ಯವೂ ಉಂಟಾಯಿತು. ಆಗ ಪಲ್ಲಕ್ಕಿಯೊಳಗಿಂದ ನೀಲಮ್ಮಾಜಿಯು "ಅಣ್ಣಾ! ಇವರ ಮೇಲೆ ಸಿಟ್ಟಾಗಬೇಡ. ಇವರೇ ನಮ್ಮನ್ನು ದುಷ್ಟರ ಕೈಯಿಂದ ಬಿಡಿಸಿದವರು" ಎಂದು ಹೇಳಿದಳು. ವೀರರಾಜನು ಸಂಶಯಾತ್ಮಕ ದೃಷ್ಟಿಯಿಂದ ಖಾದರ್‌ಖಾನನ ಕಡೆಗೂ ತನ್ನ ತಂಗಿಯು ರಿದ್ದ ಪಲ್ಲಕ್ಕಿಯ ಕಡೆಗೂ ನೋಡಿದನು ಆಗ ದೇವಮ್ಮಾಜಿಯು 'ಅಣ್ಣಾ, ಇವರ ಮೇಲೆ ಕುಪಿತನಾಗಬೇಡ ನಮ್ಮನ್ನು ಯಾರೋ ದುಷ್ಟರು ಹೊತ್ತು ಕೊಂಡು ಎಲ್ಲಿಗೋ ಹೋಗುತ್ತಿದ್ದರು. ನಮ್ಮ ಸೇವಕ ಮಲ್ಲಪ್ಪನು ಅವ ರೊಡನೆ ಕಾದಾಡಿ ಗಾಯಹೊಂದಿದನು ಅಷ್ಟರಲ್ಲಿ ದೇವರೇ ಕಳುಹಿಸಿದಂತೆ ಇವರು ಬಂದು ಆ ಬೋಯಿಗಳ ಯಜಮಾನನನ್ನು ದಂಡಿಸಿ, ನಮ್ಮನ್ನು ರಕ್ಷಿ ಸಿದನು ಇವರು ಈಗ ನಮ್ಮನ್ನು ನಮ್ಮ ಮನೆಗೆ ಕಳುಹಿಸುವ ಪ್ರಯತ್ನದಲ್ಲಿ ದ್ದರು; ಅಷ್ಟರಲ್ಲಿ ನೀನೇ ಬಂದೆ."

ವೀರರಾಜನು ಖಾದರ್‌ಖಾನನನ್ನು ನೋಡುವಾಗ ಅವನ ಮುಖದಲ್ಲಿ ಕಪಟ ಸ್ವಭಾವವಿದ್ದಂತೆ ಕಾಣಲಿಲ್ಲ. ಆಗ ವೀರರಾಜನಿಗೆ ದೇವಮ್ಮಾಜಿಯು ಮಾತಿನ ಸತ್ಯತೆಯು ತಿಳಿದು ತಾನು ಅವನನ್ನು ನಿಂದಿಸಿದುದಕ್ಕೆ ಅವನ ಕ್ಷಮಾಪಣೆಯನ್ನು ಬೇಡಿ ಅವನನ್ನು ಆಲಿಂಗಿಸಿಕೊಂಡನು.

ಅನಂತರ ಖಾದರ್‌ಖಾನನು ವೀರರಾಜನೊಡನೆ, "ಏನು ವೀರರಾಜರೇ, ನೀವು ನಿಮ್ಮ ಹೆಂಗಸರನ್ನು ಹೀಗೆ ಸಹಾಯಕರಿಲ್ಲದೆ ಕಳುಹಿಸಬಹುದೇ? ಈಗ ನಾನು ಬರದಿದ್ದರೆ ಎಂಥ ಮೋಸವಾಗುತ್ತಿತ್ತು! ಇಷ್ಟರಲ್ಲಿ ಇವರು ಕಿಲ್ಲೆದಾರನ ಅಂತಃಪುರದೊಳಗೆ ಇರುತ್ತಿದ್ದರು.

ವೀರರಾಜ:—ಏನು! ಕಿಲ್ಲೇದಾರನ ಅಂತಃಪುರದಲ್ಲಿಯೇ? ಅವನು ಅಂತಹ ನೀಚನೇ?

ಖಾದರ್‌ಖಾನ್:—"ಅವನು ಸ್ವಭಾವತಃ ನೀಚನಲ್ಲದಿದ್ದರೂ, ಅವನ ಕೈಕೆಳಗಿನ ನೌಕರ ಜಾಫರ್‌ಖಾನನ ಮತ್ತು ಅವನ ಸೇವಕ ಗುಲಾಮಲ್ಲಿ ಯಷ್ಟು ಲೋಕಕಂಟಕರು ಈ ಲೋಕದಲ್ಲಿ ಇರಲಾರರು. ಅವರಿಂದಲೇ ಕಿಲ್ಲೆ ದಾರನು ಕೆಡುತ್ತಾ ಬಂದಿದ್ದಾನೆ.

ವೀರ:-ಹಾಗಾದರೆ ಇದೆಲ್ಲಾ ಜಾಫರನ ಕುತಂತ್ರವೇ. ಮೊದಲಿನಿಂದಲೇ ನನಗೆ ಆತನನ್ನು ಕಂಡರೆ ಆಗುತ್ತಿರಲಿಲ್ಲ. ಅವನ ಸೇಡು ತೀರಿಸದೆ ಬಿಡೆನು.

ಖಾದರ್ ಖಾನ:—ನೀವು ಈ ಕೋಟೆಯಲ್ಲಿರುವಷ್ಟು ದಿನ ಹಾಗೆಲ್ಲ ಓಡುಕಬೇಡಿ. ಹುಡುಕಿದರೆ ನಿಮ್ಮ ಪ್ರಾಣಕ್ಕೆ ಸಂಚಕಾರವು ಬರಬಹುದು. ನೀವು ಈ ವಿಷಯ ತಿಳಿದೂ ತಿಳಿಯದಿದ್ದ ಹಾಗೆ ಇದ್ದು ಬಿಡಿ ನಾನೇ ಅವನ್ನ ಕ್ರಮೇಣ ಸುಲ್ತಾನರಿಗೆ ತಿಳಿಸುತ್ತೇನೆ. ಈಗ ನಾನು ಹೊರಡುತ್ತೇನೆ, ಸಲಾಂ.

ವೀರರಾಜ:—ಸಲಾಂ. ಆಗಾಗ ನೀವು ನಮ್ಮಲ್ಲಿಗೆ ಬಂದು ಹೋಗುತ್ತಿರಿ. ನನಗೆ ನೀವೊಬ್ಬರು ಆಪ್ತಸ್ನೇಹಿತರು ದೊರೆತಂತಾಯಿತು.

ಖಾದರ್ ಖಾನ್:—ಹಾಗೆಯೇ ಆಗಲಿ (ಹೋಗುವನು)

ಖಾದರ್ ಖಾನನು ಹೋದನಂತರ ವೀರರಾಜನು ಆ ಬೋಯಿಗಳನ್ನು ಗದ್ದರಿಸಿ ಅವರಿಂದ ಪಲ್ಲಕ್ಕಿಯನ್ನು ಹೊರಿಸಿಕೊಂಡು ತನ್ನ ಮನೆಗೆ ಹೊರಟನು. ಅಷ್ಟು ಹೊತ್ತಿಗೆ ಮಲ್ಲಪ್ಪನು ಚೇತರಿಸಿಕೊಂಡು ಎದ್ದಿದ್ದನು. ಅವನನ್ನು ಹೊಂಬಾಳೆ ನಾಯಕನು ಹಿಂದಿನಿಂದ ಮೆಲ್ಲನೆ ನಡೆಸಿಕೊಂಡು ಬಂದನು. ವೀರರಾಜನು ತನ್ನ ಮನೆಯ ಕಡೆ ತಿರುಗಿದಾಗ ಸ್ವಲ್ಪ ದೂರದಲ್ಲಿ ಮರೆಯಲ್ಲಿ ನಿಂತಿದ್ದ ವ್ಯಕ್ತಿಯು ಅದೃಶ್ಯವಾಯಿತು. ಆ ವ್ಯಕ್ತಿಯು ಗುಲಾಮಲ್ಲಿಯೆ ಎಂದು ವಾಚಕರಿಗೆ ಬೇರೆ ಹೇಳಬೇಕಾಗಿಲ್ಲ. ಅವನು ಖಾದರ್ ಖಾನನು ಬಂದೊಡನೆಯೇ ಒಂದು ಮನೆಯ ಮರೆಯಲ್ಲಿ ಅಡಗಿಕೊಂಡು, ಇವರ ಸಂಭಾಷಣೆಯನ್ನು ಕೇಳುತ್ತಿದ್ದನು.

——

## ದಳ :: ೮

ದೇವರ ಸಂಕಲ್ಪವನ್ನು ಮೀರಲಿಕ್ಕೆ ಯಾರಿಗೆ ಸಾಧ್ಯ? ಭಗವಂತನ ನಿಯಮದಲ್ಲಿ ಏನು ಆಗಬೇಕೋ, ಅದು ಆಗಿಯೇ ಆಗುತ್ತದೆ. ದೇವಮ್ಮಾಜಿ-ನೀಲಮ್ಮಾಜಿಯರು ದುಷ್ಟರ ಕೈಯಿಂದ ಪಾರಾದರೂ ಕೊನೆಗೆ ಅವರಿಗೆ ಮುಸಲ್ಮಾನರ ಅಂತಃಪುರದ ಜೀವನವು ತಪ್ಪಲಿಲ್ಲ; ಆದರೆ ಅವರ ಅಂತಃಪುರವಾಸವು ಅಬ್ದುಲ್ ರಹಮಾನ್ ಖಾನನ ಅಂತಃಪುರದಲ್ಲಲ್ಲ; ಸುಲ್ತಾನನಾದ ಟಿಪ್ಪುವಿನ ಅಂತಃಪುರದಲ್ಲಿಯೇ ಆಯಿತು. ಗುಲಾಮಲ್ಲಿಯು ಆ ಘಟನೆಯು ನಡೆದ ಸ್ಥಳದಿಂದ ಹೊರಟವನು, ನೆಟ್ಟಗೆ ಜಾಫರ್ ಅಲ್ಲಿಯ ಮನೆಗೆ ಹೋಗಿ, ಎಲ್ಲಾ ಸಂಗತಿಯನ್ನು ಉಪ್ಪುಕಾರ ಹಚ್ಚಿ ಹೇಳಿದನು ಜಾಫರ ಅಲ್ಲಿಗೆ ತನ್ನ

ದುರುದ್ದೇಶವು ನೆರವೇರಲಿಲ್ಲವೆಂಬ ವ್ಯಸನವೂ ಸಿಟ್ಟೂ ಉಂಟಾದವು. ತನ್ನ ಬೇಟೆಯು ತಪ್ಪಿ ಹೋದುದಕ್ಕಾಗಿ ಆತನು ಖಾದರ್‌ಖಾನನ ಮೇಲೆ ಸಿಟ್ಟಾದನು; ಆದರೆ ಖಾದರಖಾನನನ್ನು ಇವಕ್ಕಾಗಿ ಎದುರಿಸುವ ಹಾಗಿರಲಿಲ್ಲ; ಮತ್ತು ಅವನಿಗೆ ಆ ಧೈರ್ಯವೂ ಇರಲಿಲ್ಲ. ಆದದರಿಂದ ಆತನು ತಿರುಗಿ ಕುತಂತ್ರಕ್ಕೆ ಹೊರಟನು. ಖಾದರ್‌ಖಾನನು ಸುಲ್ತಾನನಿಗೆ ವೀರರಾಜನ ತಂಗಿಯರ ಸುದ್ದಿಯನ್ನು ಹೇಳುವ ಮೊದಲೇ, ತಾನು ಸುಲ್ತಾನನನ್ನು ಕಂಡು ಅವನಿಗೆ ಸುಳ್ಳು ಹೇಳಿ ಅವನ ಪ್ರೀತಿಯನ್ನು ಸಂಪಾದಿಸಿ, ದೇವಮ್ಮಾಜಿ-ನೀಲಮ್ಮಾಜಿಯರನ್ನು ಸುಲ್ತಾನನೇ ತನ್ನ ಅಂತಃಪುರಕ್ಕೆ ಸೇರಿಸಿ ಬಿಡುವಹಾಗೆ ಮಾಡುತ್ತೇನೆಂದೂ, ಅಂದರೆ ಈಗ ತನ್ನನ್ನು ತಿರಸ್ಕಾರದಿಂದ ಕಾಣುತ್ತಿದ್ದ ಖಾದರ್‌ಖಾನ ಮತ್ತು ವೀರರಾಜನಿಗೆ ತಾನು ಪ್ರಾಯಶ್ಚಿತ್ತವನ್ನುಂಟು ಮಾಡಿದ ಹಾಗಾಗುವದೆಂದೂ ಆತನು ಆಲೋಚಿಸಿದನು.

ಆ ಸಮಯದಲ್ಲಿ ಟಿಪ್ಪುಸುಲ್ತಾನನು ಶ್ರೀರಂಗಪಟ್ಟಣದಲ್ಲಿ ಇರಲಿಲ್ಲ. ಆತನು ದಕ್ಷಿಣ ಕನ್ನಡ ಜಿಲ್ಲೆಗೆ ಸೈನ್ಯ ತೆಗೆದುಕೊಂಡು ಹೋಗಿದ್ದನು; ಆದರೆ ಒಂದು ತಿಂಗಳಲ್ಲಿ ಆತನು ದಕ್ಷಿಣ ಕನ್ನಡ ಜಿಲ್ಲೆಯಿಂದ ಹಿಂದಿರುಗಿ, ಕೊಡಗಿಗಾಗಿ ಪೆರಿಯಾಪಟ್ಟಣಕ್ಕೆ ಬಂದನು. ಪೆರಿಯಾಪಟ್ಟಣದಲ್ಲಿ ಟಿಪ್ಪುವು ಎರಡು ದಿನಗಳವರೆಗೆ ಇದ್ದನು. ಈಗ ಆತನು ಪೆರಿಯಾಪಟ್ಟದಲ್ಲಿ ಒಂದು ದರ್ಬಾರ ಮಾಡಿದನು. ಆ ದರಬಾರು ಕೋಟೆಯೊಳಗೆ ಇದ್ದ ಅರಮನೆಯ ಎದುರು ಭಾಗದ ನಡುಮನೆಯಲ್ಲಿ ನಡೆಯಿತು. ನಡುಮನೆಯು ಬಹು ಮನೋಹರವಾಗಿ ಅಲಂಕರಿಸಲ್ಪಟ್ಟಿತ್ತು. ಗೋಡೆಗಳು ನಾನಾತರದ ಚಿತ್ರಗಳಿಂದ ಕೂಡಿ ಮನೋರಂಜಕವಾಗಿದ್ದುವು. ಬಾಗಿಲುಗಳಲ್ಲಿಯೂ, ಕಿಟಿಕಿಗಳಲ್ಲಿಯೂ ತುಂಬಾ ಚಿತ್ರಕೆಲಸವು ಮಾಡಲ್ಪಟ್ಟಿತ್ತು. ಕಂಬಗಳಿಗೆ ಬಣ್ಣವು ಬಳಿದು, ಚಿನ್ನದ ಮಿರುಗು ಕೊಡಲ್ಪಟ್ಟಿತ್ತು. ನೆಲದ ಮೇಲೆ ಬಹು ಬೆಲೆಯುಳ್ಳ ಪರ್ಶಿಯಾ ದೇಶದ ರತ್ನಗಂಬಳಿಯು ಹಾಸಲ್ಪಟ್ಟಿತ್ತು. ಸುಲ್ತಾನನ ಸಿಂಹಾಸನವು ಆ ನಡುಮನೆಯ ಒಂದು ಕೊನೆಯಲ್ಲಿ ಎತ್ತರವಾದ ವೇದಿಕೆಯ ಮೇಲೆ ರಚಿಸಲ್ಪಟ್ಟಿತ್ತು. ಸಿಂಹಾಸನದ ಮೇಲ್ಗಡೆಯಲ್ಲಿ ಒಂದು ಮಂಟಪವು ಶೋಭಿಸುತ್ತಿತು. ಸಿಂಹಾಸನಕ್ಕೆ ಹೋಗುವುದಕ್ಕೆ ನಡುವೆ ದಾರಿಯನ್ನು ಬಿಟ್ಟಿದ್ದು, ಆ ದಾರಿಯ ಎರಡೂ ಬದಿಗಳಲ್ಲಿ ಸೊಗಸಾದ ಪರ್ಶಿಯಾದ ರತ್ನಗಂಬಳಿಗಳು ಹಾಸಲ್ಪಟ್ಟಿದ್ದುವು.

ಸುಲ್ತಾನನ ದರ್ಬಾರು ಮಧ್ಯಾಹ್ನದ ನಂತರ ಮೂರು ಘಂಟೆಗೆ ಪ್ರಾರಂಭವಾಯಿತು. ದರ್ಬಾರು ನಡೆಯುವದಕ್ಕೆ ಅರ್ಧಘಂಟೆಯ ಮುಂಚೆಯೇ ಪಟ್ಟಣದಲ್ಲಿನ ಮುಖ್ಯ ಮುಖ್ಯ ಅಧಿಕಾರಿಗಳೂ ಪ್ರತಿಷ್ಠಿತ ಗೃಹಸ್ಥರೂ ಬಂದು ಸಭೆಯಲ್ಲಿ ಕುಳಿತುಕೊಂಡಿದ್ದರು. ಟಿಪ್ಪುಸುಲ್ತಾನನು ಸರಿಯಾಗಿ ಮೂರು ಘಂಟೆಗೆ ದರ್ಬಾರು ಸ್ಥಳಕ್ಕೆ ಬಂದನು. ಅವನು ದರ್ಬಾರು ಮಹಲನ್ನು ಪ್ರವೇಶಿಸಿದ ಕೂಡಲೆ ಅಲ್ಲಿದ್ದವರೆಲ್ಲರೂ ಎದ್ದು ನಿಂತರು. ಟಿಪ್ಪುಸುಲ್ತಾನನು ತನ್ನ ಆಸನವನ್ನು ಅಲಂಕರಿಸಿದ ಮೇಲೆ ಎಲ್ಲರೂ ಕುಳಿತುಕೊಂಡರು. ನಂತರ ಒಬ್ಬೊಬ್ಬರಾಗಿ ಸಿಂಹಾಸನದ ಮುಂದೆ ಬಂದು ಟಿಪ್ಪುಸುಲ್ತಾನನಿಗೆ ಬಗ್ಗಿ ನಮಸ್ಕಾರ ಮಾಡಿ ನಜರು ಕೊಟ್ಟು ತಮ್ಮ ತಮ್ಮ ಸ್ಥಳದಲ್ಲಿ ಕುಳಿತುಕೊಂಡರು.

ಈ ಸಭೆಯಲ್ಲಿ ವೀರರಾಜನು ಇರಲಿಲ್ಲ. ಟಿಪ್ಪುಸುಲ್ತಾನನು ಅಬ್ದುಲ್ ರಹಿಮಾನ್‌ಖಾನನನ್ನು ಕುರಿತು "ವೀರರಾಜನು ಎಲ್ಲಿ?" ಎಂದು ಕೇಳಿದನು. ಆಗ ಖಾನನು "ವೀರರಾಜನು ಅಸ್ವಸ್ಥನಾಗಿದ್ದಾನೆಂದೂ ದರ್ಬಾರಿಗೆ ಬರಲು ಸಾಧ್ಯವಿಲ್ಲವೆಂದೂ ಹೇಳಿ ಕಳುಹಿಸಿರುವನು" ಎಂದು ಹೇಳಿದನು. ದರ್ಬಾರು ಐದು ಘಂಟೆಗೆ ಮುಗಿಯಿತು. ಆರು ಘಂಟೆಗೆ ಸುಲ್ತಾನನ ಮೆರವಣಿಗೆಯು ಶ್ರೀರಂಗಪಟ್ಟಣದ ರಾಜಬೀದಿಗಳಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಮೆರವಣಿಗೆಯನ್ನು ನೋಡಲು ಜನರು ಬೀದಿ ಬೀದಿಗಳಲ್ಲಿ ಕಿಕ್ಕಿರಿದು ನೆರೆದಿದ್ದರು. ಸುಲ್ತಾನನ ಮುಂದುಗಡೆ ಮೊದಲು ಕಾಲಾಳುಗಳೂ ಅವರ ಹಿಂದೆ ಕುದುರೆ ಸೈನಿಕರೂ ಅನಂತರ ಸುಲ್ತಾನನ ಮುಖ್ಯ ಅಧಿಕಾರಿಗಳೂ ರಸ್ತೆಯ ಎರಡು ಬದಿಗಳಲ್ಲಿ ಸಾಲುಗಟ್ಟಿಕೊಂಡು ಹೋಗುತ್ತಿದ್ದರು. ಸುಲ್ತಾನನು ಆನೆಯ ಅಂಬಾರಿಯಲ್ಲಿ ಕುಳಿತಿದ್ದನು. ಅಂಬಾರಿಯು ಬಹಳ ಅಂದವಾಗಿ ಅಲಂಕರಿಸಲ್ಪಟ್ಟಿತ್ತು. ಆ ಆನೆಯ ಮೈಮೇಲೂ ಹಣೆಯ ಮೇಲೂ ಸೊಗಸಾಗಿ ಚಿನ್ನ ಮತ್ತು ಬೆಳ್ಳಿಯ ಜರಿಗಳಿಂದ ನೇಯಲ್ಪಟ್ಟ ರೇಶ್ಮೆ ಬಟ್ಟೆಯನ್ನು ಇಳಿಬಿಟ್ಟಿದ್ದರು. ಸುಲ್ತಾನನ ಹಿಂದುಗಡೆ ಅವನ ಅಂಗರಕ್ಷಕ ಸೈನ್ಯವು ಬರುತ್ತಿತ್ತು. ಮೆರವಣಿಗೆಯು ಪಟ್ಟಣದ ಎಲ್ಲ ಬೀದಿಗಳಲ್ಲಿಯೂ ನಡೆಯಿತು. ರಸ್ತೆಯ ಎರಡು ಕಡೆಗಳಲ್ಲಿ ನೆರೆದಿದ್ದ ಜನರು ಸುಲ್ತಾನನನ್ನು ನೋಡಿ ಬಗ್ಗಿ ನಮಸ್ಕಾರ ಮಾಡುತ್ತಿದ್ದರು. ಮಹಡಿಗಳಲ್ಲಿ ನಿಂತಿದ್ದ ಹೆಂಗಸರು ತಮ್ಮ ಮುಖಪರದೆಯನ್ನು ಓರೆಮಾಡಿ ಸುಲ್ತಾನನನ್ನೂ ಆ ಜನ ಸಂದಣಿಯನ್ನೂ

ನೋಡುತ್ತಿದ್ದರು. ಮೆರವಣಿಗೆಯು ದೊಡ್ಡ ಬೀದಿಯಲ್ಲಿ ಹೋಗಿ ವೀರರಾಜನ ಮನೆ ಇದ್ದ ಬೀದಿಗೆ ಬಂದಿತು. ಆಗ ವೀರರಾಜನ ಮನೆಯ ಮಹಡಿಯಲ್ಲಿ ವೀರರಾಜನ ಹೆಂಡತಿಯೂ ನೀಲಮ್ಮಾಜಿಯೂ ದೇವಮ್ಮಾಜಿಯೂ ಮೆರವಣಿಗೆಯನ್ನು ನೋಡುತ್ತಿದ್ದರು ವೀರರಾಜನ ಹೆಂಡತಿಯೂ ದೇವಮ್ಮಾಜಿಯೂ ಮುಖಕ್ಕೆ ಪರದೆಯನ್ನು ಇಳಿಬಿಟ್ಟಿದ್ದರು. ನೀಲಮ್ಮಾಜಿಯು ಮಾತ್ರ ಏನೂ ಹಾಕಿಕೊಂಡಿರಲಿಲ್ಲ.

ಮೆರವಣಿಗೆಯು ಆ ಮನೆಯ ಎದುರಿಗೆ ಬಂದಾಗ ಟಿಪ್ಪುಸುಲ್ತಾನನ ಅಂಬಾರಿಯ ಹಿಂದುಗಡೆ ನಿಂತುಕೊಂಡಿದ್ದ ಜಾಫರಖಾನನು ಸುಲ್ತಾನನ ಕಿವಿಯಲ್ಲಿ ಏನೋ ಹೇಳಿದನು. ಆಗ ಸುಲ್ತಾನನು ವೀರರಾಜನ ಮಹಡಿಯ ಕಡೆಗೆ ನೋಡಿದನು ಆ ಕ್ಷಣವೇ ವೀರರಾಜನ ಹೆಂಡತಿಯೂ ದೇವಮ್ಮಾಜಿಯೂ ಪರದೆಯನ್ನು ಮತ್ತಷ್ಟು ಮುಖಕ್ಕೆ ಎಳೆದುಕೊಂಡರು ನೀಲಮ್ಮಾಜಿಯು ಮುಖಕ್ಕೆ ಪರದೆಯನ್ನು ಹಾಕಿಕೊಂಡಿರಲಿಲ್ಲ ಅವಳು ಆಗ ತಾನೆ ಯೌವನಕ್ಕೆ ಕಾಲಿಟ್ಟು, ಅತ್ಯಂತ ಮನಮೋಹಕಳಾಗಿ ತೋರುತ್ತಿದ್ದಳು. ಟಿಪ್ಪುಸುಲ್ತಾನನು ಅವಳನ್ನೇ ದೃಷ್ಟಿಸಿ ನೋಡುತ್ತ, ಆನೆಯು ಮೇಲೆ ಮುಂದೆ ಸಾಗಿದನು ಸ್ವಲ್ಪ ದೂರದ ಮೇಲೆ ತಿರುಗಿ ತಿರುಗಿ ಅದೇ ಮನೆಯ ಕಡೆಗೆ ನೋಡಿದನು. ಆಗ ದೇವಮ್ಮಾಜಿಯು ತನ್ನ ಮುಖಪರದೆಯನ್ನು ತೆರೆದು ಹಾಕಿದ್ದಳು. ಅವಳು ನೀಲಮ್ಮಾಜಿಗಿಂತ ಎಂಟು ವರುಷಕ್ಕೆ ದೊಡ್ಡವಳಾಗಿದ್ದಳು. ಸೌಂದರ್ಯದಲ್ಲಿ ನೀಲಮ್ಮಾಜಿಯನ್ನು ಮೀರಿಸುತ್ತಿದ್ದಳು. ಇವಳೂ ಟಿಪ್ಪುಸುಲ್ತಾನನ ಕಣ್ಣಿಗೆ ಬಿದ್ದಳು

ಟಿಪ್ಪು ಸುಲ್ತಾನನ ಮೆರವಣಿಗೆಯು ಪಟ್ಟಣದ ಮುಖ್ಯ ಬೀದಿಗಳನ್ನೆಲ್ಲ ಸುತ್ತಿ ತಿರುಗಿ ಅವನು ಇಳುಕೊಂಡಿದ್ದ ಮಹಲಿಗೆ ರಾತ್ರಿ ಎಂಟು ಘಂಟೆಗೆ ತಲುಪಿತು. ಅನಂತರ ಸುಲ್ತಾನನು ರಾತ್ರಿ ಸ್ನಾನ ಭೋಜನಗಳನ್ನು ತೀರಿಸಿ ಜಾಫರ್ ಖಾನನನ್ನು ಹತ್ತಿರ ಕರೆಯಿಸಿಕೊಂಡನು. ಜಾಫರ್ ಖಾನನು ಬಂದ ಕೂಡಲೆ ಸುಲ್ತಾನನು:—ಜಾಫರ್ ಖಾನ್, ವೀರರಾಜನು ಹೋಗಿದ್ದಾನೆಂದು ವಿಚಾರಿಸಿದೆಯಾ?

ಜಾಫರ್ ಖಾನನು:-ವೀರರಾಜನ ಮೇಲೆ ಚಾಡಿಹೇಳಲಿಕ್ಕೆ ಒಳ್ಳೇ ಸಮಯ ಸಿಕ್ಕಿತೆಂದು ಮನಸ್ಸಿನಲ್ಲಿಯೇ ಹಿಗ್ಗಿ:-ಖಾವಂದ, ವೀರರಾಜನಿಗೆ ನಿಜವಾಗಿಯೂ ಖಾಯಿಲೆ ಆಗಿಲ್ಲ. ತಾವು ಪ್ರಭುಗಳು ಇಲ್ಲಿಗೆ ಬಂದಾಗ ಆತನು ತಮ್ಮ ದರ್ಬಾ

ರಿಗೆ ಬರದೆ ತಪ್ಪಿಸಿಕೊಳ್ಳಬೇಕೆಂದು ಹೀಗೆ ಸುಳ್ಳು ಕಾರಣವನ್ನೊಡ್ಡಿರುವನು.

ಸುಲ್ತಾನನು:—ಹೀಗೆಯೋ! ಹಾಗಾದರೆ ಈಗಲೇ ಅವನನ್ನು ಹಿಡಿದು ಎಳೆದುಕೊಂಡು ಬಾ.

ಜಾಫರ್‌ಖಾನ್:--ಪ್ರಭು, ಆತನು ಇಲ್ಲಿ ಇಲ್ಲ ಬೇಟೆಯಾಡುವದಕ್ಕೆ ಹೋಗಿರುವನು.

ಸುಲ್ತಾನನು:--ನನ್ನ ದರ್ಬಾರಿಗೆ ಬರಬೇಕೆಂದು ಆ ಕಾಫರನಿಗೆ ತಿಳಿಯದೆ? ಆ ಕಾಫರನಿಗೆಷ್ಟು ಅಹಂಕಾರ? ಅವನಿಗೆ ತಕ್ಕ ಶಿಕ್ಷೆಯನ್ನು ಮಾಡುತ್ತೇನೆ.

ಜಾಫರ್‌ಖಾನ್:---ಖಾವಂದ, ಅವನಿಗೆ ತಕ್ಕ ಶಿಕ್ಷೆಯನ್ನು ನಾನು ಆಲೋಚಿಸಿರುವೆನು ಅದೇನೆಂದರೆ. ಅವನ ಮನೆಯ ಹೆಂಗಸರನ್ನು ತಮ್ಮ ಝನಾನಕ್ಕೆ ಸೇರಿಸುವುದು.

ಸುಲ್ತಾನನು:--ನಿಜ; ಅದು ಒಳ್ಳೆಯ ಅಭಿಪ್ರಾಯ. ಆಗ ಆ ಕಾಫರನಿಗೆ ಸಾಯುವವರೆಗೂ ನಮ್ಮ ಅಧಿಕಾರದ ದರ್ಪವು ಮರೆಯುವುದಿಲ್ಲ ನಮ್ಮ ಬಲದ ರುಚಿಯು ಅವನಿಗೆ ತಿಳಿಯಲಿ ನಾಳೆಯೇ ಆ ಹುಡುಗಿಯರನ್ನು ಕರೆದುಕೊಂಡು ಬಂದು. ನಮ್ಮ ಝನಾನಾಕ್ಕೆ ಸೇರಿಸಿಬಿಡು.

ಜಾಫರ್‌ಖಾನ್:—ಖಾವಂದ್, ನಾಳೆ ವೀರರಾಜನು ಬೇಟೆಯಿಂದ ಹಿಂದಿರುಗಿ ಬರುವ ಮೊದಲೇ ಈ ಕೆಲಸವನ್ನು ಮಾಡಿಬಿಡುತ್ತೇನೆ

ಸುಲ್ತಾನನು:—ಶಹಬಾಸ್! ಹಾಗೇ ಮಾಡು. ಬೇಕಾದರೆ ಸ್ವಲ್ಪ ಸೈನಿಕರನ್ನೂ ತೆಗೆದುಕೊಂಡು ಹೋಗು. ಆ ಕಾಫರನಿದ್ದರೆ ಏನು ಹೆದರಿಕೆ? ಅವನನ್ನ ಹಿಂಗಟ್ಟು ಮುರಿಗಟ್ಟು ಕಟ್ಟಿ ಹಿಡಿದುಕೊಂಡು ಬನ್ನಿ.

ಜಾಫರ್‌ಖಾನ್: – (ಸ್ವಭಾವತಃ ಹೇಡಿಯಾದುದರಿಂದ) ಹುಜೂರ್, ಉಪಾಯದಿಂದ ಆಗುವ ಕೆಲಸಕ್ಕೆ ಬಲಾತ್ಕಾರವೇಕೆ? ಒಂದು ವೇಳೆ ನಾವು ಸೈನಿಕರನ್ನು ಕರೆದುಕೊಂಡು ಹೋಗಿ, ವೀರರಾಜನ ಮನೆಗೆ ಮುತ್ತಿಗೆ ಹಾಕಿ ಆ ಹೆಂಗಸರನ್ನು ಹಿಡಿದು ತರಬಹುದು; ಆದರೆ ಆಗ ಪಟ್ಟಣದ ಜನರಿಗೆಲ್ಲಾ ಗೊತ್ತಾಗಿ ಸುಲ್ತಾನನು ಮನೆಗಳಿಗೆಲ್ಲಾ ಮುತ್ತಿಗೆ ಹಾಕಿ ಸುಂದರಿಯರಾದ ಸ್ತ್ರೀಯರನ್ನು ಝನಾನಕ್ಕೆ ಸೇರಿಸುತ್ತಾನೆ ಎಂಬ ಸುದ್ದಿ ಎಲ್ಲಾ ಕಡೆಯಲ್ಲಿ ಹಬ್ಬಿ, ತಮ್ಮ ಹೆಸರು ಕೆಡಬಹುದು. ಆದ್ದರಿಂದ ನಾನು ಉಪಾಯದಿಂದ ಆ ಹೆಂಗಸರನ್ನು ತಮ್ಮ ಅಂತಃಪುರಕ್ಕೆ ಸೇರಿಸುತ್ತೇನೆ. ಜಗಳಕ್ಕೆ ಹೋದರೆ ಬಹು

ವೀರರಾಜನಾಗಲಿ. ನನ್ನ ಕಡೆಯವರಾಗಲಿ ಯಾರಾದರೂ ಓಡಿಸಬೇಕಾಗು ವದು. ವೀರರಾಜನು ಕಾಫರನಾದರೂ ಒಳ್ಳೆಯ ಧೈರ್ಯಶಾಲಿ.

ಸುಲ್ತಾನ:—ಜಾಫರ್, ನೀನು ಬಹಳ ಬುದ್ಧಿವಂತನಾಗಿದ್ದೀ. ನೀನೇ ನನ್ನ ಮಂತ್ರಿಯಾಗಿರಬೇಕಾಗಿತ್ತು! ನಿನಗೆ ಹ್ಯಾಗೆ ತೋರುವದೋ ಹಾಗೆ ಮಾಡು; ಆದರೆ ನನಗೆ ವೀರರಾಜನ ಹೆದರಿಕೆಯೂ ಇಲ್ಲ; ಜನರ ಕೆಟ್ಟ ಹೆಸರಿನ ಭಯವೂ ಇಲ್ಲ

ಜಾಫರ್‌ಖಾನ್:—ಹುಜೂರ್, ಇನ್ನು ನಾನು ಮನೆಗೆ ಹೋಗುತ್ತೇನೆ, ಎಂದು ಹೇಳಿ, ಬಗ್ಗಿ ನಮಸ್ಕಾರ ಮಾಡಿ, ಮನಸ್ಸಿನಲ್ಲಿಯೇ ಹಿಗ್ಗಿಕೊಂಡು ಮನೆಗೆ ಹೋದನು.

---

## ದಳ :: ೯

ಮಾರನೆಯ ದಿವಸ ಪ್ರಾತಃಕಾಲ ಜಾಫರ್‌ಖಾನನು ತನ್ನ ಸಂಗಡ ಕೆಲವು ನಗರರಕ್ಷಣೆಯ ಸಹರೆಯವರನ್ನು ಕರೆದುಕೊಂಡು ಪಟ್ಟಣ ತಿರುಗುತ್ತ ವೀರರಾಜನ ಮನೆಗೆ ಹೋದನು. ಅಲ್ಲಿ ವೀರರಾಜನು ಇರಲಿಲ್ಲ ವೀರರಾಜನಿಗೆ ಟಿಪ್ಪುಸುಲ್ತಾನನ ದರ್ಬಾರಿಗೆ ಹೋಗುವದಕ್ಕೆ ಇಷ್ಟವಿರಲಿಲ್ಲ ಅವನು ಟಿಪ್ಪುಸುಲ್ತಾನನೆಂದರೆ, ಉರಿದು ಬೀಳುತ್ತಿದ್ದನು; ಆದರೆ ಹೊಟ್ಟೆಯಲ್ಲಿದ್ದ ಸಿಟ್ಟು ರಟ್ಟೆಯಲ್ಲಿಲ್ಲವೆಂಬ ಸ್ಥಿತಿಯು ಅವನದಾಗಿದ್ದಿತು ಟಿಪ್ಪುಸುಲ್ತಾನನು ಅವನನ್ನೂ ಅವನ ಕುಟುಂಬದವರನ್ನೂ ಯಾವಜ್ಜೀವವೂ ಸೆರೆಯಲ್ಲಿಡಬೇಕೆಂದಿದ್ದನು ಕೊಡಗನ್ನು ಅವನಿಗೆ ಬಿಟ್ಟುಕೊಡುವ ಬದಲು ಕೊಡಗಿನಲ್ಲಿ ತನ್ನ ಆಳಿಕೆಯನ್ನು ಬಲಸಡಿಸುತ್ತಿದ್ದನು. ಆದುದರಿಂದ ವೀರರಾಜನಿಗೆ ಟಿಪ್ಪುಸುಲ್ತಾನನನ್ನು ಕಂಡರೆ ಆಗುತ್ತಿರಲಿಲ್ಲ. ಟಿಪ್ಪುವು ಪಿರಿಯಾಪಟ್ಟಣದಲ್ಲಿ ದರ್ಬಾರು ಮಾಡುವಾಗ ಪಟ್ಟಣದಲ್ಲಿದ್ದರೆ ದರ್ಬಾರಿಗೆ ಹೋಗದೆ ಇರುವುದಕ್ಕಾಗುವದಿಲ್ಲವೆಂದು, ವೀರರಾಜನು ಬೇಟೆಯ ನೆವದಿಂದ ಪಿರಿಯಾಪಟ್ಟಣವನ್ನು ಬಿಟ್ಟು ಹತ್ತಿರದ ಕಾಡಿಗೆ ಹೋದನು. ಅವನಿಗೆ ಪಿರಿಯಾಪಟ್ಟಣದ ಸುತ್ತುಮುತ್ತಲಿನ ಕಾಡುಗಳಲ್ಲಿ ಬೇಟೆಯಾಡಲು ಅಡ್ಡಿಯಿರಲಿಲ್ಲ; ಆದರೆ ಹೊರಗಿನವರಿಗೆ ಮಾತ್ರ ತಾನು ಸ್ವಸ್ಥನಾಗಿರಲಿಲ್ಲನೆಂದು ತಿಳಿಸುವದಕ್ಕೆ ಹೇಳಿ, ವೀರರಾಜನು ತನ್ನ ಪರಿವಾರದವರೊಡನೆ ಕಾಡಿಗೆ ಹೋಗಿದ್ದನು. ಅವನ ಸಂಗಡ ಹೊಂಬಾಳೆ ನಾಯಕನೂ ಹೋಗಿದ್ದನು.

ಜಾಫರ್ ಖಾನನಿಗೆ ವೀರರಾಜನು ಮನೆಯಲ್ಲಿಲ್ಲದಿರುವ ವಿಷಯವು ತನ್ನ ಗೂಢಚಾರರ ಮೂಲಕ ತಿಳಿದಿತ್ತು. ಇದೇ ಸಂದರ್ಭವನ್ನು ಸಾಧಿಸಿ, ಅವನ ಮನೆಯ ಹೆಂಗಸರನ್ನು ಬಲಾತ್ಕಾರದಿಂದ ಹಿಡಿದು ತರಿಸಿ ಸುಲ್ತಾನನ ಝನಾನಕ್ಕೆ ಸೇರಿಸಿ, ತಾನು ಸುಲ್ತಾನನಿಂದ ಬಹುಮಾನವನ್ನು ಪಡೆಯಬೇಕೆಂದಿದ್ದನು. ಅವನ ಅದೃಷ್ಟಕ್ಕೆ ಸರಿಯಾಗಿ ವೀರರಾಜನ ಮನೆಯಲ್ಲಿ ಅಂದು ಪಹರೆ ಗಲಾಟೆ ಲವಾಗಿರಲಿಲ್ಲ. ಪಹರೆಯವರ ನಾಯಕನಾದ ಹೊಂಬಾಳೆ ನಾಯಕನು ವೀರರಾಜರ ಸಂಗಡವೇ ಬೇಟೆಗೆ ಹೋಗಿದ್ದನು. ಇದಲ್ಲದೆ ಪಹರೆಯವರು ಟಿಪ್ಪುಸುಲ್ತಾನನ ಅಪ್ಪಣೆಯಿಂದ ವೀರರಾಜನು ಮತ್ತು ಆತನ ಕುಟುಂಬದವರು ಕಿರಿಯಾಪಟ್ಟಣದಿಂದ ತಪ್ಪಿಸಿಕೊಂಡು ಹೋಗದ ಹಾಗೆ ನೋಡಿಕೊಳ್ಳುವುದಕ್ಕೆ ನೇಮಿಸಲ್ಪಟ್ಟಿದ್ದುದರಿಂದ, ಈಗ ಟಿಪ್ಪುಸುಲ್ತಾನನ ಕೈಕೆಳಗಿನ ನೌಕರರಿಂದಲೇ ವೀರರಾಜನಿಗಾಗಲಿ ಆತನ ಕುಟುಂಬದವರಿಗಾಗಲಿ ಕೇಡು ಸಂಭವಿಸಬಹುದೆಂದು ಅವರು ಎಣಿಸಲಿಲ್ಲ. ಒಂದು ವೇಳೆ ಜಾಫರಖಾನನ ದುರುದ್ದೇಶವು ಅವರಿಗೆ ತಿಳಿದಿದ್ದರೆ, ಅವರು ಜಾಗರೂಕರಾಗಿರುತ್ತಿದ್ದರು. ಬಹಳ ಅಂತಹ ಸಂದರ್ಭದಲ್ಲಿ ವೀರರಾಜನೂ ಹೊಂಬಾಳೆ ನಾಯಕನೂ ಪಟ್ಟಣವನ್ನು ಬಿಟ್ಟು ಹೊರಡುತ್ತಿರಲಿಲ್ಲ. ಪಹರೆಯವರು ಎಲ್ಲರೂ ಹಿಂದುಗಳೇ ಆಗಿದ್ದು, ಅವರಲ್ಲಿ ಲಿಂಗಾಯತರೂ ಒಕ್ಕಲಿಗರೂ ಇದ್ದರು. ಹೊಂಬಾಳೆ ನಾಯಕನು ಒಕ್ಕಲಿಗ ಜಾತಿಯವನಾಗಿದ್ದನು ಟಿಪ್ಪುಸುಲ್ತಾನನು ಕಟ್ಟಾ ಮುಹಮ್ಮದೀಯನಾಗಿದ್ದರೂ, ವೀರರಾಜನ ಪಹರೆಗೆ ಟಿಪ್ಪುವಿನ ತಂದೆ ಹೈದರ್ ಅಲ್ಲಿಯು ನೇಮಿಸಿದ ಹಿಂದೂ ಪಹರೆಯವರನ್ನು ಅವನು ತೆಗೆದು ಹಾಕಿರಲಿಲ್ಲ. ಹೇಗಿದ್ದರೂ ವೀರರಾಜನು ಸೆರೆಯಲ್ಲಿದ್ದ ಹಾಗೆಯೇ ಇದ್ದಾನೆ. ತಪ್ಪಿಸಿಕೊಂಡು ಹೋಗುವದಕ್ಕೆ ಕೋಟೆಯ ಬಾಗಿಲಿನಲ್ಲಿ ಮತ್ತು ಪಟ್ಟಣದ ಹೊರಗಿನ ಉಕ್ಕಡದಲ್ಲಿ ಬಲವಾದ ಪಹರೆಯು ಇರುವಾಗ ಅಸಾಧ್ಯವೆಂದು ಸುಲ್ತಾನನು ನಂಬಿದ್ದನು. ಇದಲ್ಲದೆ ಸುಲ್ತಾನನು ವೀರರಾಜನನ್ನು ಒಬ್ಬ ಸಣ್ಣ ಪಾಳೆಯಗಾರನೆಂದು ಭಾವಿಸಿ, ಅವನ ವಿಷಯದಲ್ಲಿ ಅಷ್ಟೊಂದು ಎಚ್ಚರಿಕೆಯನ್ನು ತೆಗೆದುಕೊಂಡಿರಲಿಲ್ಲ. ಈ ಸಮಯದಲ್ಲಿ ಸುಲ್ತಾನನ ರಾಜ್ಯವು ಮೈಸೂರಿನ ಉತ್ತರಭಾಗದಿಂದ ದಕ್ಷಿಣದಲ್ಲಿ ಮಧುರೆಯ ವರೆಗೂ ಪಶ್ಚಿಮದಲ್ಲಿ ಅರಬೀಸಮುದ್ರದಿಂದ ಪೂರ್ವಕ್ಕೆ ಅರ್ಕಾಟಿನ ಹತ್ತಿರದ ವರೆಗೂ ವ್ಯಾಪಿಸಿದ್ದಿತು. ಆದುದರಿಂದ ತನ್ನ ರಾಜಧಾನಿಯ

ಹತ್ತಿರವಿರುವ ಬೆಟ್ಟಸೀಮೆಯ ಒಡೆಯನಾದ ವೀರರಾಜನು ಅವನಿಗೆ ಯಾವ ಲೆಕ್ಕ! ಈ ಕಾರಣದಿಂದಲೇ ವೀರರಾಜನಿಗೆ ಪಿರಿಯಾಪಟ್ಟಣದೊಳಗೆ ತಿರುಗಾಡಲು ಮತ್ತು ಹತ್ತಿರದ ಕಾಡುಗಳಲ್ಲಿ ಬೇಟೆಯಾಡಲು ವಿಶೇಷವಾದ ಅಡಚಣೆಯಿರಲಿಲ್ಲ; ಆದರೆ ಅವನ ಮೇಲಿನ ಪಹರೆಯವರ ಮುಖಂಡನಾದ ಹೊಂಬಾಳೆ ನಾಯಕನು ಮಾತ್ರ ವೀರರಾಜನ ಜೊತೆಯಲ್ಲಿರಬೇಕಾಗಿದ್ದಿತು. ಯಾಕಂದರೆ, ವೀರರಾಜನು ತಪ್ಪಿಸಿಕೊಂಡು ಹೋದರೆ, ಹೊಂಬಾಳೆ ನಾಯಕನ ಜೀವವು ಎರವಾಗಬೇಕಾಗಿದ್ದಿತು. ವೀರರಾಜನು ಪಿರಿಯಾಪಟ್ಟಣದ ಹೊರಗೆ ಬೇಟೆಗೆ ಹೋದರೂ, ಹೊಂಬಾಳೆನಾಯಕನು ತನ್ನ ಪಹರೆಯವರೊಡನೆ ಆತನ ಜೊತೆಯಲ್ಲೇ ಹೋಗುತ್ತಿದ್ದನು.

ಇಂಥಾ ಸಂದರ್ಭವನ್ನು ಸಾಧಿಸಿ ಜಾಫರ್‌ಖಾನನು ಟಿಪ್ಪುಸುಲ್ತಾನನ ದರ್ಬಾರದ ಮೂರನೇ ದಿವಸ ತನ್ನ ಜನರೊಡನೆ ವೀರರಾಜನ ಮನೆಗೆ ಬಂದನು. ಬೋಯಿಗಳಿಗೆ ಒಂದು ಪಲ್ಲಕ್ಕಿಯನ್ನು ಹಿಂದಿನಿಂದ ತರುವಂತೆ ಹೇಳಿದ್ದನು. ವೀರರಾಜನ ಮನೆಗೆ ಬಂದು ಜಾಫರ್‌ಖಾನನು ಅಲ್ಲಿದ್ದ ಮೂರು ನಾಲ್ಕು ಪಹರೆಯವರೊಡನೆ "ವೀರರಾಜರು ಮನೆಯಲ್ಲಿದ್ದಾರೋ?" ಎಂದು ಕೇಳಿದನು. ಪಹರೆಯವರು ಜಾಫರಖಾನನು ಕಿಲ್ಲೇದಾರ ಅಬ್ದುಲ್ ರಹಮಾನ್‌ಖಾನನ ಅಂಗರಕ್ಷ ದಳದ ಯಜಮಾನನೆಂದು ತಿಳಿದು ನಮಸ್ಕಾರ ಮಾಡಿ, "ಹುಜೂರ್, ಅವರು ಅಸ್ವಸ್ಥರಾಗಿರುವರು" ಎಂದು ಹೇಳಿದರು. ಯಾಕಂದರೆ, ಅವರಿಗೆ ಹಾಗೆ ಹೇಳುವುದಕ್ಕೆ ವೀರರಾಜನೇ ಹೇಳಿದ್ದನು. ಜಾಫರ್‌ಖಾನನು ಕರುಣೆಯನ್ನು ನಟಿಸುತ್ತಾ, "ಅಯ್ಯೋ! ವೀರರಾಜನಿಗೆ ಜ್ವರವು ಬಂದಿತೇ? ಎಲ್ಲಿ, ನಾನು ಅವರನ್ನು ನೋಡಬೇಕು. ಸುಲ್ತಾನರು ಅವರಲ್ಲಿ ಒಂದು ಮುಖ್ಯ ವಿಷಯವನ್ನು ಹೇಳುವುದಕ್ಕೆ ನನ್ನಲ್ಲಿ ಹೇಳಿದ್ದಾರೆ." ಎಂದು ಹೇಳುತ್ತಾ ಮನೆಯೊಳಗೆ ಕಾಲಿಟ್ಟನು. ಸುಲ್ತಾನನ ಹೆಸರನ್ನು ಕೇಳಿ ಪಹರೆಯವರು, "ಏನು ಮಾಡುವುದು? ಜಾಫರ್‌ಖಾನನನ್ನು ತಡೆದರೆ ನಮಗೆ ಏನು ಶಿಕ್ಷೆಯಾಗುವದೋ!" ಎಂದು ಗಾಬರಿಯಾದರು. ಆದರೂ ಒಬ್ಬನು ಮುಂದೆ ಬಂದು, "ನಮ್ಮ ನಾಯಕನ ಅಪ್ಪಣೆಯಿಲ್ಲದೆ ಒಬ್ಬನೂ ಒಳಕ್ಕೆ ನುಗ್ಗಕೂಡದು" ಎಂದು ಹೇಳುತ್ತಾ ಜಾಫರಖಾನನನ್ನು ತಡೆದನು; ಆದರೆ ಅಷ್ಟರಲ್ಲಿ ಜಾಫರಖಾನನ ಜೊತೆಯಲ್ಲಿದ್ದ ಇಬ್ಬರು ಅಂಗರಕ್ಷಕ ದಳದವರು ಆ ಪಹರೆಯವನ ತಲೆಗೆ ತಮ್ಮ ದೊಣ್ಣೆಯಿಂದ ಹೊಡೆದು ನೆಲಕ್ಕುರುಳಿಸಿದರು;

ಇದನ್ನು ನೋಡಿ ಸರಿ ಸಹಚರಿಯುವರು ನಾವು ಜಗಳ ಮಾಡಿದರೆ ನಮಗಿಂತ ಹೆಚ್ಚಿನ ಸಂಖ್ಯೆಯ ಅಂಗರಕ್ಷಕದಳದೊಡನೆ ನಮಗೆ ಪೂರೈಸದು, ಎಂದು ಕೇಳಿ ಸುಮ್ಮನಾದರು ಈ ಸಮಯದಲ್ಲಿ ನಮ್ಮ ಪರಿಚಿತನಾದ ಅಬ್ದುಲ್ ಸಾಬಿಯು ಇದೇ ಸಮಯವೆಂದು ಅವರಿಗೆ “ಎಚ್ಚರಿಕೆ! ನಮ್ಮ ಮೇಲೆ ಜಗಳಕ್ಕೆ ಬಂದರೆ, ನಾವು ನಿಮ್ಮ ತಲೆ ಹಾರಿಸಿಬಿಟ್ಟೇವು” ಎಂದು ಬಡಾಯಿ ಕೊಚ್ಚಿಕೊಂಡನ .

ಜಾಫರ್‌ಖಾನನು ಫಕ್ಕನೆ ಒಳಕ್ಕೆ ನುಗ್ಗಿದ್ದನ್ನು ನೋಡಿ, ಮನೆಯ ಹೆಂಗಸರು ಗಾಬರಿಯಾದರು. ವೀರರಾಜನ ಹೆಂಡತಿ ನಂಜಮ್ಮಾಜಿಯು ಏನೋ ವಿಪತ್ಕಾಲವು ಸಂಭವಿಸಿತೆಂದು ಭಾವಿಸಿ ಭಯವನ್ನು ಹೊಂದಿದಳು. ಹಾಗೆಯೇ ದೇವರನ್ನು ಚಿಂತಿಸತೊಡಗಿದಳು ನೀಲಮ್ಮಾಜಿ. ದೇವಮ್ಮಾಜಿ ಮತ್ತು ದೇವಾಂಬಿಕೆಯರು ಮಹಡಿಯ ಮೇಲೆ ಇದ್ದರು. ದೇವಾಂಬಿಕೆಯು ಒಂದು ಬಟ್ಟೆಯ ಮೇಲೆ ಕಸೂತಿಯಲ್ಲಿ ಚಿತ್ರವನ್ನು ಹಾಕುತ್ತಿದ್ದಳು. ನೀಲಮ್ಮಾಜಿ-ದೇವಮ್ಮಾಜಿಯರು ಒಂದು ಚಿತ್ರವನ್ನು ಬಿಡಿಸಿ ಅದಕ್ಕೆ ಬಣ್ಣವನ್ನು ಹಾಕುತ್ತಿದ್ದರು

ಜಾಫರ್‌ಖಾನನು ನಡುಮನೆಗೆ ನುಗ್ಗಿದವನೇ ನೆಟ್ಟಗೆ ಮಹಡಿಗೆ ಹತ್ತಿದನು ಜಾಫರ್‌ಖಾನನನ್ನು ನೋಡಿ ವೀರರಾಜನ ತಯಿಯಾದ ದೇವಾಂಬಿಕೆಗೆ ಸಿಡಿಲು ಹೊಡೆದಂತಾಯಿತು. ಅವಳಿಗೆ ಹಿಂದುಸ್ತಾನಿ ಭಾಷೆಯು ಬರುತ್ತಿತ್ತು. ಹಿಂದುಸ್ತಾನಿ ಭಾಷೆಯಲ್ಲಿಯೇ ಅವಳು:— ‘ಏನಪ್ಪಾ ಇಲ್ಲಿಗೆ ಏತಕ್ಕೆ ಬಂದೆ? ವೀರರಾಜರು ಬಹಳ ಅಸ್ವಸ್ಥರಾಗಿ ಯಾರೋ ದೊಡ್ಡ ಹಕೀಮರಲ್ಲಿಗೆ ಔಷಧಿ ಮಾಡಿಸುವುದಕ್ಕೆಂದು ಹೋಗಿರುವರು. ನೀನು ಏಕಾ ಏಕಿ ಹೆಂಗಸರಿರುವಲ್ಲಿಗೆ ಬರಬಹುದೇನಪ್ಪಾ? ನಿನಗೂ ಹೆಂಗಸರು-ಮಕ್ಕಳು ಇಲ್ಲವೇ?’

ಜಾಫರ್‌ಖಾನ್:– ನನಗೆ ವೀರರಾಜರಲ್ಲಿ ಅತ್ಯಗತ್ಯವಾದ ಕೆಲಸವಿತ್ತು. ಅವರು ದರ್ಬಾರಿಗೆ ಬರಲಿಲ್ಲವೆಂದು ಟಿಪ್ಪು ಸುಲ್ತಾನರು ಬಹಳ ಸಿಟ್ಟಾಗಿದ್ದಾರೆ. ವೀರರಾಜರನ್ನು ಒಂಟಿಯಾಗಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ಹಾಕಬೇಕೆಂದಿದ್ದಾರೆ. ನಾನು ವೀರರಾಜರ ಮೇಲಿನ ಸಹಕಾರದಿಂದ ಸುಲ್ತಾನರಿಗೆ ಬಹಳ ಸಮಾಧಾನ ಹೇಳಿ ಅವರ ಸಿಟ್ಟನ್ನು ತಕ್ಕಮಟ್ಟಿಗೆ ಶಾಂತ ಮಾಡಿದ್ದೇನೆ ಈಗ ವೀರರಾಜರು ತಾವೇ ಬಂದು ಸುಲ್ತಾನರಲ್ಲಿ ಮಾಫಿ ಕೇಳಿಕೊಂಡರೆ, ಒಂದುವೇಳೆ ವೀರರಾಜರಿಗೆ ಏನೂ ಕೆಡುಕಾಗಲಾರದು.

ದೇವಾಂಬಿಕೆಯು ತನ್ನ ಮಗನಿಗೆ ಬಂದ ಆಪತ್ತಿನ ಯೋಚನೆಯಲ್ಲಿ ಜಾಫರ್ ಖಾನನು ಪರಕೀಯನು ಎಂಬುದನ್ನು ಮರೆತು ಹೀಗೆಂದಳು. ' ಅಪ್ಪಾ, ಈ ಊರಿನಲ್ಲಿ ನೀನೇ ನಮಗೆ ಬಂಧು! ನೀನೇ ನನ್ನ ಮಗನಿಗೆ ಕೆಡಕಾಗದ ಹಾಗೆ ಸುಲ್ತಾನರಿಗೆ ಇನ್ನೂ ಸ್ವಲ್ಪ ಸಮಾಧಾನ ಹೇಳಬೇಕು. ಏನೋ ಬುದ್ಧಿ ಇಲ್ಲದ ಹುಡುಗ, ನಾನು ಹೇಳಿದ ಹಾಗೆ ಕೇಳುವದಿಲ್ಲ."

ಜಾಫರಖಾನ: --ತಾಯಿ, ನಾನಿರುವವರೆಗೆ ನೀವು ಬೇಸರಪಡಬೇಡಿ. ನಾನು ಇಷ್ಟುರವರೆಗೆ ಸುಲ್ತಾನರಿಗೆ ಹೇಳಿ, ಅವರ ಸಿಟ್ಟು ಶಾಂತ ಮಾಡಿದ್ದರಿಂದಲೇ ಸುಲ್ತಾನರು ವೀರರಾಜರನ್ನು ಈಗಲೇ ಹಿಡಿದು ತರುವುದಕ್ಕೆ ಸೈನಿಕರನ್ನು ಕಳುಹಿಸಲಿಲ್ಲ.

ದೇವಾಂಬಿಕೆ:—ಆ ಮಹಾದೇವನು ನಿನಗೆ ಒಳ್ಳೆಯದು ಮಾಡಲಿ ಅಪ್ಪಾ!

ಜಾಫರ್ ಖಾನ್:—ತಾಯಿ, ವೀರರಾಜರು ಬರುವದಕ್ಕೆ ಎಷ್ಟು ಹೊತ್ತಾಗಬಹುದು? ನನಗೆ ಅವರನ್ನು ಕಾಣುವ ಅವಸ್ಯವು ಬಹಳವಾಗಿರುವದು.

ದೇವಾಂಬಿಕೆ:-(ಜಾಫರ್ ಖಾನನು ಹಿತಚಿಂತಕನೆಂದು ಭಾವಿಸಿ) ಅಪ್ಪಾ, ನೀನು ನಮಗೆ ಬೇಕಾದವನೆಂದು ನಿನ್ನಲ್ಲಿ ಹೇಳುವೆನು ವೀರರಾಜನಿಗೆ ನಿಜವಾಗಿಯೂ ಖಾಯಿಲೆಯಿಲ್ಲ. ನಾನೆಷ್ಟು ಹೇಳಿದರೂ ಕೇಳದೆ, ಅವನು ಸುಲ್ತಾನರ ದರ್ಬಾರಿಗೆ ಹೋಗದೆ, ತನ್ನ ತಮ್ಮನಾದ ಅಪ್ಪಾಜಿ ಮತ್ತು ಹೊಂಬಾಳೆ ನಾಯಕರೊಡನೆ ನಂಜರಾಜಪಟ್ಟಣದ ಕಾಡಿಗೆ ಬೇಟೆಗೆ ಹೋಗಿರುವನು ಈ ವಿಷಯವು ಸುಲ್ತಾನರಿಗೆ ತಿಳಿಯಬಾರದೆಂದು ಅವನಿಗೆ ಖಾಯಿಲೆ ಎಂಬ ಸುದ್ದಿಯನ್ನು ಹೊರಡಿಸಿದೆವು.

ಜಾಫರ್ ಖಾನ್: --ತಾಯಿ, ವೀರರಾಜನು ಬೇಟೆಗೆ ಹೋದ ಸಂಗತಿಯು ನನಗೂ ಗೊತ್ತಿತ್ತು. ಸುಲ್ತಾನರಿಗೂ ಈ ವಿಷಯವನ್ನು ಯಾರೋ ಹೇಳಿರುವರು. ಯಾವ ಕೆಲಸವನ್ನಾದರೂ ಸುಲ್ತಾನರ ಗೂಢಾಚಾರರಿಗೆ ತಿಳಿಯದೆ ಮಾಡಲು ಸುಲ್ತಾನರ ರಾಜ್ಯದಲ್ಲಿ ಸಾಧ್ಯವಿಲ್ಲ. ಈಗ ನಾನು ಬಂದ ಕೆಲಸವು ಇನ್ನೊಂದ . ವೀರರಾಜರಿಗೆ ಕ್ಷೇಮವಾಗಬೇಕಾಗಿದ್ದರೆ ನೀವು ಇದನ್ನು ಮಾಡಬೇಕು!

ದೇವಾಂಬಿಕೆ:—ಏನಪ್ಪಾ ಅದು? ಬೇಗನೆ ಹೇಳು. ನಾನು ನನ್ನ ಮಗನಿಗೋಸ್ಕರ ಪ್ರಾಣವನ್ನಾದರೂ ಅರ್ಪಿಸುತ್ತೇನೆ.

ಜಾಫರ್ ಖಾನನು ದೇವಾಂಬಿಕೆಯ ಪುತ್ರಪ್ರೇಮವನ್ನು ಮನಸ್ಸಿನಲ್ಲಿಯೇ

ಕೊಂಡಾಡುತ್ತ "ಅದೇನೂ ಬೇಡ ತಾಯಿ; ಆದರೆ ಈಗ ನಿಮ್ಮ ಮನೆಯ ಹೆಂಗಸರು ಸುಲ್ತಾನರ ಜನಾನಕ್ಕೆ ಹೋಗಿ ರಾಣೀಸಾಹೇಬರಲ್ಲಿ ಬೇಡಿಕೊಂಡರೆ ವೀರರಾಜರಿಗೆ ಯಾವ ಶಿಕ್ಷೆಯೂ ಆಗಲಾರದು. ಇಷ್ಟೇ ಅಲ್ಲ, ರಾಣೀ ಸಾಹೇಬರಿಗೆ ದಯೆ ಬಂದರೆ, ಅವರು ಸುಲ್ತಾನರಿಗೆ ಹೇಳಿ ವೀರರಾಜನಿಗೆ ಅವನ ರಾಜ್ಯವನ್ನು ತಿರುಗಿ ಕೊಡಿಸಿಕೊಟ್ಟಾರು. ರಾಣೀಸಾಹೇಬರಿಗೂ ನಿಮ್ಮ ಮನೆಯ ಹೆಂಗಸರನ್ನು ನೋಡಬೇಕೆಂದು ಆಶೆಯಾಗಿದೆ" ಹೀಗೆ ಹೇಳಿ, ಜಾಫರ್‌ಖಾನನು ತಾನು ಮಾತನಾಡುತ್ತಿದ್ದ ಕೋಣೆಯ ಹಿಂದಿನ ಕೋಣೆಯ ಕಡೆಗೆ ನೋಡಿದನು.

ಜಾಫರ್‌ಖಾನನು ಪಡಸಾಲೆಗೆ ಕಾಲಿಟ್ಟ ಕೂಡಲೆ ನೀಲಮ್ಮಾಜಿ-ದೇವಮ್ಮಾಜಿಯರು ತಮ್ಮ ಮುಖಕ್ಕೆ ಮುಸುಕನ್ನು ಹಾಕಿಕೊಂಡು ಹಿಂದಿನ ಕೋಣೆಗೆ ಹೋಗಿದ್ದರು; ಆದರೂ ಅವರಿಗೆ ಜಾಫರ್‌ಖಾನನಾಡುವ ಮಾತುಗಳು ಕೇಳುತ್ತಿದ್ದುವು. ಅವರು ತಾವು ಇದ್ದ ಕೋಣೆಯ ಬಾಗಿಲನ್ನು ಪೂರ್ತಿಯಾಗಿ ಮುಚ್ಚಿರಲಿಲ್ಲ. ನೀಲಮ್ಮಾಜಿಯು ಇನ್ನೂ ಚಿಕ್ಕಪ್ರಾಯದವಳಾದುದರಿಂದ, ಬಾಗಿಲನ್ನು ಆಗಾಗ ಸ್ವಲ್ಪ ತೆಗೆದು ಇಣಿಕಿಣಿಕಿ ನೋಡುತ್ತಿದ್ದಳು. ಈ ಸಮಯದಲ್ಲಿ ಜಾಫರ್‌ಖಾನನು ತಿರುಗಿ ನೋಡುವದಕ್ಕೆ ಸರಿಯಾಗಿ ಅವಳು ಇಣಿಕಿ ನೋಡುವದು ಸರಿಯಾಯಿತು. ಕೂಡಲೆ ನೀಲಮ್ಮಾಜಿಯು ನಾಚಿಕೊಂಡು ಬಾಗಿಲನ್ನು ತಟ್ಟನೆ ಹಾಕಿಬಿಟ್ಟಳು.

ಇತ್ತಲಾಗಿ ದೇವಾಂಬಿಕೆಯು ಜಾಫರ್‌ಖಾನನ ಮಾತನ್ನು ಕೇಳಿ ಭಯಭರಿತಳಾದಳು "ನಮ್ಮ ಮನೆಯ ಹೆಂಗಸರನ್ನು ಸುಲ್ತಾನರ ರಾಣೀ ಸಾಹೇಬರಲ್ಲಿಗೆ ಕಳುಹಿಸುವುದೆಂದರೇನು? ಹಾಗೆ ಕಳುಹಿಸಿದರೆ ನಮ್ಮ ಮನೆಯ ಹೆಣ್ಣುಮಕ್ಕಳು ಸುರಕ್ಷಿತರಾಗಿ ಬರುವರೆಂಬ ಭರವಸೆ ಏನು? ಮುಸಲ್ಮಾನರ ವಿಷಯಲಾಲಸೆಯಲ್ಲಿ ನಮ್ಮ ಹೆಣ್ಣುಮಕ್ಕಳ ಸತೀತ್ವವು ಉಳಿಯುವ ಬಗೆ ಹೇಗೆ? ವೀರರಾಜನು ಈ ವಿಷಯವನ್ನು ತಿಳಿದರೆ ಏನು ಮಾಡಬಹುದು?" ಎಂಬಿವೇ ಮೊದಲಾದ ಚಿಂತೆಗಳು ಅವಳನ್ನು ಬಾಧಿಸತೊಡಗಿದವು. ಜಾಫರ್‌ಖಾನನು ದೇವಾಂಬಿಕೆಯ ಮನಸ್ಸಿನಲ್ಲಾಗುತ್ತಿದ್ದ ಯೋಚನಾ ತರಂಗಗಳನ್ನು ಊಹಿಸಿ 'ತಾಯಿ, ನೀವು ನಿಮ್ಮ ಹೆಣ್ಣುಮಕ್ಕಳನ್ನು ರಾಣೀಸಾಹೇಬರಲ್ಲಿ ಕಳುಹಿಸಲು ಹೆದರಬೇಡಿ. ರಾಣೀಸಾಹೇಬರು ಬಹಳ ಒಳ್ಳೆಯವರು. ಮತ್ತೆ ನಾನಿಲ್ಲವೆ! ನನಗೆ ಹೆಂಡತಿಯರಿಲ್ಲವೆ? ಅಕ್ಕ-ತಂಗಿಯರಿಲ್ಲವೆ? ನಾನು

ನಿಮ್ಮ ಮನೆಯ ಹೆಂಗಸರನ್ನು ದುಷ್ಟರಪಾಲು ಮಾಡಿ ಬಿಟ್ಟರೆ, ಮುಂದೆ ವೀರರಾಜರಿಗೆ ನಾನು ಹೇಗೆ ಮುಖವನ್ನು ತೋರಿಸಲಿ?'' ಎಂದು ಹೇಳುತ್ತ ಒಳಗಿಂದೊಳಗೆ ಕಪಟ ನಗುವನ್ನು ನಗುತ್ತಿದ್ದನು

ದೇವಾಂಬಿಕೆಗೆ ಜಾಫರ್‌ಖಾನನ ಮಾತುಗಳನ್ನು ಕೇಳಿ ಸ್ವಲ್ಪ ಧೈರ್ಯವು ಬಂದರೂ ಮಹಾದೇವರ ಗುಡಿಗೆ ಹೋದಾಗ ದೇವಮ್ಮಾಜಿ-ನೀಲಮ್ಮಾಜಿಯರಿಗೆ ಸಂಭವಿಸಿದ ಆಪತ್ತು ಮನದಲ್ಲಿ ಬಂದು ತಿರುಗಿ ಭಯವುಂಟಾಯಿತು. ಆಗ ಅವಳ ಜಾಫರ್‌ಖಾನನನ್ನು ಕುರಿತು ''ಅಪ್ಪಾ, ನನಗೆ ನಮ್ಮ ಮನೆಯ ಹೆಂಗಸರನ್ನು ಕಳುಹಿಸಲಿಕ್ಕೆ ಬಹಳ ಭಯವಾಗುತ್ತದೆ. ಆ ದಿವಸ ಮಹಾದೇವರ ಗುಡಿಗೆ ಹೋದಾಗ ಯಾರೋ ದುಷ್ಟರು ಅವರನ್ನು ಅಪಹರಿಸಲು ಪ್ರಯತ್ನಪಟ್ಟಿದ್ದರು. ಆದರೆ ಆ ಪುಣ್ಯಾತ್ಮ ಖಾದರ್‌ಖಾನನಿದ್ದದ್ದರಿಂದ ಈ ಹೆಣ್ಣುಮಕ್ಕಳ ಮರ್ಯಾದೆಯು ರಕ್ಷಣೆ ಯಾಯಿತು. ಆ ಪುಣ್ಯಾತ್ಮನಿಗೆ ದೇವರು ಒಳ್ಳೆಯದನ್ನು ಮಾಡಲಿ! ಈಗ ನನ್ನ ಮನೆಯ ಹೆಣ್ಣುಮಕ್ಕಳನ್ನು ವೀರರಾಜನು ಬರದೆ ಕಳುಹಿಸುವದಕ್ಕಾಗುವದಿಲ್ಲಪ್ಪಾ. ದಯವಿಟ್ಟು ರಾಣೀಸಾಹೇಬರಿಗೆ ಹಾಗೆಂದು ತಿಳಿಸು'' ಎಂದಳು.

ಜಾಫರ್‌ಖಾನನು ಸ್ವಲ್ಪ ಸಿಟ್ಟನ್ನು ನಟಿಸುತ್ತ: ''ತಾಯೀ, ಈಗ ನೀವು ನಿಮ್ಮ ಮನೆಯ ಹೆಂಗಸರನ್ನು ಕಳುಹಿಸದಿದ್ದರೆ ರಾಣೀಸಾಹೇಬರು ಏನು ತಿಳಿದುಕೊಂಡಾರು? ಅವರು ಸಿಟ್ಟಿಗೆ ಈ ವಿಷಯವನ್ನು ಸುಲ್ತಾನರಿಗೆ ಹೇಳಿದರೆ, ಸುಲ್ತಾನನು ಕಿಡಿಕಿಡಿಯಾಗಿ ವೀರರಾಜನನ್ನೂ ಮತ್ತು ನಿಮ್ಮೆಲ್ಲರನ್ನೂ ಸೆರೆಮನೆಯಲ್ಲಿ ಹಾಕಿ ಅನ್ನ-ನೀರಿಲ್ಲದೆ ಕೊಳೆಯಿಸಿಬಿಟ್ಟಾರು! ಸ್ವಲ್ಪ ಆಲೋಚನೆ ಮಾಡಿ. ಸುಲ್ತಾನರು ನಾಳೆಯೇ ರಾಣೀಸಾಹೇಬರನ್ನು ಕರೆದುಕೊಂಡು ತಮ್ಮ ಪರಿವಾರದವರೊಡನೆ ರಾಜಧಾನಿಗೆ ಪ್ರಯಾಣ ಬೆಳೆಸುತ್ತಾರೆ ಅದಕ್ಕೋಸ್ಕರವೇ ರಾಣೀಸಾಹೇಬರು ಇವತ್ತೇ ನಿಮ್ಮ ಮನೆಯ ಹೆಂಗಸರನ್ನು ಕರೆದುಕೊಂಡು ಬರಲು ಪಲ್ಲಕ್ಕಿಯನ್ನು ಕಳುಹಿಸಿದ್ದಾರೆ. ರಾಣೀಸಾಹೇಬರು ನಿಮ್ಮ ಮನೆಯ ಹೆಣ್ಣುಮಕ್ಕಳನ್ನು ಕರೆದದ್ದು ನಿಮ್ಮ ಪುಣ್ಯವೆಂದು ತಿಳಿಯಿರಿ. ದಕ್ಷಿಣ ಹಿಂದುಸ್ತಾನಕ್ಕೆಲ್ಲ ಯಜಮಾನರಾಗಿರುವ ನಮ್ಮ ಸುಲ್ತಾನರ ಪತ್ನಿ ರಾಣೀಸಾಹೇಬರೆಲ್ಲಿ, ನೀವೆಲ್ಲಿ? ಎನೋ ರಾಣೀಸಾಹೇಬರಿಗೆ ಒಂದು ಹುಚ್ಚು, ನಿಮ್ಮ ಮನೆಯ ಹೆಂಗಸರನ್ನು ಕರೆಸಿ ಮಾತನಾಡಬೇಕೆಂದು! ಈಗ ರಾಣೀಸಾಹೇಬರು ಮನಸ್ಸು ಮಾಡಿದರೆ ಸುಲ್ತಾನರಿಗೆ

...ಳಿ, ವೀರರ ಜನಿಗೆ ತಿರುಗಿ ಕೊಡಗಿನ ರಾಜ್ಯವನ್ನು ಕೊಡಿಸಿಕೊಟ್ಟಾರು."

ದೇವಾಂಬಿಕೆಯು ಜಾಫರಖಾನನ ಈ ಪ್ರತ್ಯುಭಾಷಣವನ್ನು ಕೇಳಿ ಏನೂ ತೋಚದೆ ಸುಮ್ಮನೆ ಕುಳಿತಿದ್ದಳು. ಆಗ ಜಾಫರಖಾನನು ಕೋಣೆಯ ಒಳಗಿದ್ದ ದೇವಮ್ಮಾಜಿ-ನೀಲಮ್ಮಾಜಿಯರನ್ನು:—"ತಂಗಿಯರೇ, ನೀವು ಬೇಗನೆ ಹೊರಡಿರಿ ವೀರರಾಜರ ಪತ್ನಿಯುವರೆಲ್ಲಿ? ಅವರೂ ಹೊರಡಲಿ" ಎಂದನು. ವೀರರಾಜನ ಪತ್ನಿಯನ್ನು ಸುಲ್ತಾನನ ಜನಾನಕ್ಕೆ ಅಥವಾ ಯಾರಾದರೂ ದೊಡ್ಡ ದರ್ಬಾರಿಯ ಜನಾನಕ್ಕೆ ಸೇರಿಸಿದರೆ ತಾನು ದೊಡ್ಡ ಪದವಿಗೇರಬಹುದು. ಎಂಬ ದುಷ್ಟ ಕಾಂಕ್ಷೆಯು ಅವನನ್ನು ಆ ನೀಚ ಕೆಲಸಗಳಲ್ಲಿ ಕೈಹಚ್ಚುವದಕ್ಕೆ ಪ್ರೋತ್ಸಾಹಿಸುತ್ತಿತ್ತು.

ಜಾಫರಖಾನನು ಮಹಡಿಗೇರಿ ದೇವಾಂಬಿಕೆಯೊಡನೆ ತಾನು ಬಂದ ಉದ್ದೇಶವನ್ನು ಹೇಳುತ್ತಿರುವದನ್ನು ಕೆಳಗಿದ್ದ ವೀರರಾಜನ ಪತ್ನಿ ಸಂಜವ್ವಾಜಿಯು ಕೇಳಿ ಬಹಳ ಭಯದಿಂದ ತುಂಬಿದವಳಾದಳು. ಅವಳು ಜಾಫರಖಾನನನ್ನು ತನ್ನ ಹಿತಚಿಂತಕನೆಂದು ನಂಬಲಿಲ್ಲ. ಇದರಲ್ಲಿ ಏನೋ ದುರುದ್ದೇಶವೇ ಇರುವುದೆಂದು ತಿಳಿದು, ತಮ್ಮ ರಕ್ಷಣೆಯನ್ನು ಹೇಗೆ ಮಾಡಿಕೊಳ್ಳುವದೆಂದು ಅವಳು ಚಿಂತೆಗೊಳಗಾದಳು ಆವಳಿಗೆ ಮಹಡಿಗೆ ಹೋಗುವದಕ್ಕೆ ಈಗ ಸಾಧ್ಯವಿರಲಿಲ್ಲ ಜಾಫರಖಾನನು ವೀರರಾಜನ ಮನೆಯ ಹೆಂಗಸರೆಲ್ಲರೂ ಮಹಡಿಯಿಂದ ಹೇಗಾದರೂ ತಪ್ಪಿಸಿಕೊಂಡು ಹೋಗಬಹುದೆಂದು ನೆಟ್ಟಗೆ ಮಹಡಿಯನ್ನೇರಿದ್ದನು ಮನೆಯ ಸಮೀಪಕ್ಕೆ ಬರುವಾಗಲೆ ತನ್ನ ಅನುಚರರಿಗೆ, ಮುಖ್ಯವಾಗಿ ಅಬ್ದುಲ್ಲಾಸಾಬಿಗೆ ಮನೆಯಿಂದ ಯಾರಾದರೂ ತಪ್ಪಿಸಿಕೊಂಡು ಹೋಗದಂತೆ ನೋಡಿಕೊಳ್ಳುವದಕ್ಕೆ ಕಟ್ಟಾಜ್ಞೆ ಮಾಡಿದ್ದನು ಆದುದರಿಂದ ವೀರರಾಜನ ಮನೆಯ ಹಿಂಭಾಗ ಮತ್ತು ಮುಂಭಾಗಗಳಲ್ಲಿ ಜಾಫರಖಾನನ ಅನುಚರರು ಆಯುಧಸಮೇತರಾಗಿ ನಿಂತಿದ್ದರು. ಹೊಂಬಾಳೆ ನಾಯಕನ ಕೈಕೆಳಗಿನ ಪಹರೆಯವರು ತಮ್ಮ ಕೈಯಲ್ಲಿದ್ದ ಆಯುಧಗಳನ್ನು ಕಸಿದುಕೊಳ್ಳಲ್ಪಟ್ಟವರಾಗಿ ಉಪಾಯಗಾಣದೆ ಸುಮ್ಮನೆ ಕುಳಿತಿದ್ದರು. ತಾವೇನಾದರೂ ಗಲಾಟೆ ಮಾಡಿದರೆ, ತಾವು ಸುಲ್ತಾನನ ಕೋಪಕ್ಕೆ ಗುರಿಯಾದೇವೆಂಬ ಭಯವೂ ಅವರಿಗಿದ್ದಿತು ಬೀದಿಯಲ್ಲಿ ಇನ್ನೂ ಹೆಚ್ಚು ಜನರು ತಿರುಗಾಡುತ್ತಿರಲಿಲ್ಲ. ವೀರರಾಜನು ವಾಸವಿದ್ದ ಮನೆಯು ದೊಡ್ಡ ಬೀದಿಯಲ್ಲಿರಲಿಲ್ಲ. ಆದುದರಿಂದ ಅಲ್ಲಿ ಜನ...

ತಿರುಗಾಟವೂ ಹೆಚ್ಚಾಗಿರಲಿಲ್ಲ. ಒಬ್ಬಿಬ್ಬರು ಅಲ್ಲಿಗೆ ಬಂದರೂ ಅಂಗರಕ್ಷ ದವರು ಅಲ್ಲಿರುವುದನ್ನು ನೋಡಿ ತಾವು ಅಲ್ಲಿದ್ದರೆ ತಮಗೇನು ಅಪಾಯ ಉಂಟಾಗುವದೋ ಎಂದು ಹೆದರಿ, ಅಲ್ಲಿಂದ ಆದಷ್ಟು ಬೇಗನೆ ಹೋಗಬಿಟ್ಟಿದ್ದರು. ವೀರರಾಜನು ದರ್ಬಾರಿಗೆ ಹೋಗಲಿಲ್ಲವೆಂದು ಅನೇಕರಿಗೆ ತಿಳಿದಿತ್ತು. ಆ ಕಾರಣದಿಂದ ಸುಲ್ತಾನನು ಕುಪಿತನಾಗಿ, ವೀರರಾಜನನ್ನು ತನ್ನ ಬಳಿಗೆ ಕರೆದುಕೊಂಡು ಬರುವದಕ್ಕೆ ತನ್ನ ಸೈನಿಕರನ್ನು ಕಳುಹಿಸಿರಬಹುದೆಂದೂ ಕೆಲವು ಜನರು ಭಾವಿಸಿದ್ದರು.

ಪರಿಸ್ಥಿತಿಯು ಹೀಗಿದ್ದುದರಿಂದ ವೀರರಾಜನ ಪತ್ನಿ ನಂಜಮ್ಮಾಜಿಗೆ ಮನೆ ಬಿಟ್ಟು ಹೊರಗೆ ಹೋಗುವುದಕ್ಕೆ ಸಾಧ್ಯವಿರಲಿಲ್ಲ. ಆದರೂ ಆಕೆಯು ಬಹಳ ಕುಶಾಗ್ರಬುದ್ಧಿಯುಳ್ಳವಳಾಗಿದ್ದಳು. ಅವಳು ಕೆಳಗಿದ್ದುದು ಒಳ್ಳೆಯದೆ ಆಗಿತ್ತು. ಜಾಫರ್‌ಖಾನನು ತನ್ನ ಅತ್ತೆಯೊಡನೆ ಮಾತನಾಡುತ್ತಿದ್ದ ಸಮಯದಲ್ಲಿ ಅವಳು ತನ್ನ ಬೆಲೆಯುಳ್ಳ ಉಡಿಗೆ-ತೊಡಿಗೆಗಳನ್ನು ಬಿಚ್ಚಿ ಹಾಕಿ ಕೆಲಸದ ಹೆಂಗಸಿನ ಹಾಗೆ ಮಾಸಿದ ಹಾಗು ಹರುಕು ಬಟ್ಟೆಗಳನ್ನು ಉಟ್ಟುಕೊಂಡಳು. ಅನಂತರ ತನ್ನ ಮಗುವನ್ನು ನಿಜವಾದ ದಾಸಿಯ ಕೈಯಲ್ಲಿ ಕೊಟ್ಟು ಜಾಫರ್‌ಖಾನನು ಒಂದುವೇಳೆ ಕೇಳಿದರೆ ಇವಳ ಮನೆಯು ಹಿಂಬದಿಯಲ್ಲಿರುವ ಮುನ್ಶಿಮಾಧವರಾಯನ ಮನೆಗೆ ಹೋಗಿರುವೆನೆಂದು ಹೇಳಲಿಕ್ಕೆ ಅವಳಿಗೆ ತಿಳಿಸಿ, ತಾನು ಕೈಯಲ್ಲಿ ಒಂದು ಕಠಾರಿಯನ್ನು ಹಿಡಿದುಕೊಂಡ ಜಾಫರ್‌ಖಾನನು ಬರುವುದನ್ನು ಬಾಗಿಲ ಸಂದಿನಲ್ಲಿ ನಿರೀಕ್ಷಿಸುತ್ತಿದ್ದಳು.

ಜಾಫರ್‌ಖಾನನು ದೇವಮ್ಮಾಜಿ-ನೀಲಮಾಜಿಯರನ್ನು "ಹೊರಡಿ" ಎಂದ ಕೂಡಲೆ ದೇವಮ್ಮಾಜಿಗೂ, ದೇವಾಂಬಿಕೆಗೂ ಪ್ರಾಣವೇ ಹೋದಂತಾಯಿತು. ನೀಲಮ್ಮಾಜಿಯು ಇನ್ನೂ ಹುಡುಗಿಯಾದುದರಿಂದಲೂ, ಪ್ರಪಂಚದ ಅನುಭವವು ಇನ್ನೂ ಇರದೆ ಇದ್ದದ್ದರಿಂದಲೂ ರಾಣೀ ಸಾಹೇಬರಲ್ಲಿ ಹೋಗುವುದಕ್ಕೆ ಇಷ್ಟವುಳ್ಳವಳಾಗಿದ್ದಳು. ದೇವಮ್ಮಾಜಿಯು ಕೋಣೆಯಿಂದ ಹೊರಡದೇ ಇರುವದನ್ನು ನೋಡಿ, ಜಾಫರಖಾನನು ಇನ್ನು ಒಳ್ಳೆಯ ಮಾತು ಹತ್ತುವುದಿಲ್ಲವೆಂದು, "ಬೇಗನೆ ಹೊರಡಿ; ಇಲ್ಲವಾದರೆ ನಮ್ಮ ಶಿಪಾಯಿಗಳಿಂದ ನಿಮ್ಮನ್ನು ಎಳೆತರಿಸಿ ಕೈಕಾಲು ಕಟ್ಟಿಸಿ, ಪಲ್ಲಕ್ಕಿಯೊಳಗೆ ಹಾಕಿಸುತ್ತೇನೆ" ಎಂದು ಗದ್ದರಿಸಿ, ತನ್ನ ಅನುಚರಲ್ಲಿ ಒಬ್ಬಿಬ್ಬರನ್ನು ಕರೆದನು. ಈ ಮಾತುಗಳನ್ನು ಕೇಳಿ ದೇವಾಂಬಿಕೆಗೆ ಮೂರ್ಛೆ ಬಂದಂತಾಗಿ ನೆಲದ ಮೇಲೆ

ಕುಳಿತಿದ್ದವಳು ಹಾಗೆಯೇ ಬಿದ್ದುಬಿಟ್ಟಳು!

ಈ ವರ್ತಮಾನವು ಇವೆಲ್ಲಿಂದ ಬಂತೆಂದು ದೇವಮ್ಮಾಜಿಯು ತನ್ನ ಅಸ್ವಸ್ಥತೆಯನ್ನು ಹಿಂದಿಸುತ್ತಾ, ತನ್ನ ಮುಸುಕನ್ನು ಮುಖದ ಮೇಲೆ ಬಲವಾಗಿ ಎಳೆದುಕೊಂಡು ಕೋಣೆಯಿಂದ ಫಕ್ಕನೆ ಹೊರಗೆ ಬಂದು ಮಹಡಿಯಿಂದ ಬಡಬಡನೆ ಅವಸರದಿಂದ ಏಣಿಯನ್ನು ಇಳಿಯುತ್ತೊಡಗಿದಳು. ಅವಳ ಹಿಂದೆಯೇ ನೀಲಮ್ಮಾಜಿಯೂ ಇದ್ದಳು. ದೇವಮ್ಮಾಜಿಯು ಕೆಳಕ್ಕಿಳಿದೊಡನೆ ಜಾಫರ್‌ಖಾನನು ತನ್ನ ಸಂಗಡ ಬಂದಿದ್ದ ಒಬ್ಬ ಬಲಿಷ್ಠನಾದ ನಪುಂಸಕನಿಗೆ ದೇವಮ್ಮಾಜಿಯನ್ನು ಎತ್ತಿ ಪಲ್ಲಕ್ಕಿಯಲ್ಲಿ ಕುಳ್ಳಿರಿಸಲು ಹೇಳಿದಳು ಅವನು ಹಾಗೆಯೇ ಮಾಡಿದನು. ಈ ಮಧ್ಯೆ ನೀಲಮ್ಮಾಜಿಯು ಓಡಿಹೋಗದ ಹಾಗೆ ಇನ್ನೊಬ್ಬ ಸಿಪಾಯಿಯು ಬಾಗಿಲನ್ನು ತಡೆಗಟ್ಟಿದನು. ದೇವಮ್ಮಾಜಿಯನ್ನು ಕುಳ್ಳಿರಿಸಿದ ಕೂಡಲೆ ಆ ನಪುಂಸಕನು ಬಂದು ನೀಲಮ್ಮಾಜಿಯನ್ನೂ ಎತ್ತಿಕೊಂಡು ಪಲ್ಲಕ್ಕಿಯೊಳಗೆ ಬಿಟ್ಟನು. ಆ ಕ್ಷಣ ಪಲ್ಲಕ್ಕಿಯು ಪರದೆಯನ್ನು ಇಳಿಯಬಿಟ್ಟು, ಸಿಪಾಯಿಗಳು ಸುತ್ತಲೂ ಪಹರೆ ನಿಂತರು. ಇತ್ತಲಾಗಿ ಹಿಂದಿನ ಕೋಣೆಯ ಬಾಗಿಲಿನ ಅಗಣಿಯನ್ನು ಒಳಗಿನಿಂದ ಹಾಕಿಕೊಂಡು ಕೈಯಲ್ಲಿ ಕಠಾರಿಯನ್ನು ಹಿಡಿದುಕೊಂಡು ನಂಜಮ್ಮಾಜಿಯು ನಿಂತಿದ್ದಳು ಅವಳ ದಾಸಿಯು ನಂಜಮ್ಮಾಜಿಯ ಮಗುವನ್ನು ವೀರರಾಜನ ಚಿಕ್ಕ ತಮ್ಮನಾದ ಲಿಂಗರಾಜನೊಡನೆ ಹಿಂದಿನ ಅಂಗಣದಲ್ಲಿ ಬಿಟ್ಟು, ತಾನೂ ನಂಜಮ್ಮಾಜಿಯ ಜೊತೆಯಲ್ಲಿ ಹೆದರಿಕೆಯಿಂದ ನಡುಗುತ್ತಾ ನಿಂತಿದ್ದಳು. ಜಾಫರ್‌ಖಾನನು ಆ ಕದವನ್ನು ಮುಂಭಾಗದಿಂದ ತಟ್ಟುತ್ತಾ, "ಒಳಗೆ ಯಾರು? ವೀರರಾಜನ ಪತ್ನಿಯನ್ನು ರಾಣೀ ಸಾಹೇಬರು ಬರಹೇಳಿದ್ದಾರೆ.'' ಎಂದನು. ಆಗ ನಂಜಮ್ಮಾಜಿಯು ತಾನೇ, "ಅವರು ಇಲ್ಲಿ ಇಲ್ಲ. ಬೆಳಿಗ್ಗೆ ಮುನ್ಷಿ ಮಾಧವರಾಯರ ಮನೆಯವರು ಅವರನ್ನು ಬರಬೇಕೆಂದು ಹೇಳಿದ್ದರು. ಅವರು ಆಗಲೇ ಅಲ್ಲಿಗೆ ಹೋಗಿರುವರು. ಇನ್ನೂ ಬರಲಿಲ್ಲ.'' ಎಂದು ಹೇಳಿದಳು.

ಜಾಫರ್‌ಖಾನ್:—ನೀನು ಯಾರು?

ದಾಸಿ:—ನಾನು ಅವರ ಕೆಲಸದ ಹೆಂಗಸು

ಜಾಫರ್‌ಖಾನ್:—ನಿನ್ನ ಮಾತನ್ನು ನಂಬಲಾಗುವುದಿಲ್ಲ. ನೀನು ಅವರನ್ನು ಒಳಗೆ ಅಡಗಿಸಿಕೊಂಡು, ಈಗ ಸುಳ್ಳುಹೇಳುತ್ತೀ! ಬೇಗ ಬಾಗಿಲು ತೆರೆ.

ನಂಜಮ್ಮಾಜಿ:—ಅವರು ಬರದೆ ನನಗೆ ಬಾಗಿಲು ತೆರೆಯಲಿಕ್ಕೆ ಆಗುವುದಿಲ್ಲ. ಇಲ್ಲಿ ನಮ್ಮಗಳ ಸೇವಕನಿದ್ದಾನೆ. ನೀವು ಇಲ್ಲಿಗೆ ಬಂದರೆ ಅವನಿಗೆ ಅಪಂದ್ರವಾದೀತು.

ಜಾಫರ್‌ಖಾನ್:—ನಿನ್ನ ಸೇವಕರೋ-ಗೀವಕರೋ! ರಾಣಿ, ಸುಳ್ಳು ಹೇಳುತ್ತೀಯಾ? ಈಗ ಬಾಗಿಲನ್ನು ಒದ್ದು ಬೀಳಿಸುವೆನು ನೋಡು

ನಂಜಮ್ಮಾಜಿಯು ಅವನ ಮಾತುಗಳಿಂದ ಒಂದು ಕಡೆ ಸಿಟ್ಟನ್ನು, ಇನ್ನೊಂದು ಕಡೆ ಭಯವನ್ನೂ ತಾಳಿ, "ನೀವು ಬಾಗಿಲು ಬೀಳಿಸಿದರೆ ನಿಮಗೆ ಒಳ್ಳೆಯದಾಗಲಿಕ್ಕಿಲ್ಲ. ನೀವು ಬಾಗಿಲು ಬೀಳಿಸಿ ಒಳಗೆ ನುಗ್ಗಿದರೆ ನಿಮ್ಮ ಪ್ರಾಣವು ಉಳಿಯುಲಾರದು. ಒಂದು ವೇಳೆ ನೀವು ಸಾಯಬೇಕು, ತಪ್ಪಿದರೆ ನಾನು ಸಾಯಬೇಕು" ಎಂದು ಹೇಳಿದಳು.

ಜಾಫರ್‌ಖಾನನಿಗೆ ಈ ಮಾತುಗಳನ್ನು ಕೇಳಿ ಸ್ವಲ್ಪ ದಿಗಿಲಾಯಿತು. ಇವನು ಒಳಗೆ ಎಷ್ಟು ಜನರಿರುವರೋ? ತನಗೇನಾದರೂ ಅಪಾಯ ಸಂಭವಿಸಬಹುದೋ? ಎಂದು ಸ್ವಲ್ಪ ಅಂಜಿದನು. ಇಷ್ಟರಲ್ಲಿ ಪಲ್ಲಕ್ಕಿಯಲ್ಲಿದ್ದ ದೇವಮ್ಮಾಜಿ-ನೀಲಮ್ಮಾಜಿಯರ ಕೂಗಾಟವೂ ಬೊಬ್ಬೆಯೂ ಜೋರಾಯಿತು. ಶಿಪಾಯಿಗಳು ನಾವು ಇನ್ನು ಆದಷ್ಟು ಬೇಗನೆ ಅರಮನೆಗೆ ಹೊರಡೋಣ, ಎಂದು ಜಾಫರ್‌ಖಾನನಿಗೆ ಹೇಳಿದರು. ಸುಲ್ತಾನನಿಗೆ ಬೇಕಾಗಿರುವದು ಈ ಇಬ್ಬರು ಹುಡುಗಿಯರು ಮಾತ್ರವೆಂದು ಯೋಚಿಸಿ, ಇನ್ನು ಸುಮ್ಮನೆ ಗಲಾಟೆ ಮಾಡಿದರೆ ತುಂಬಾ ಜನರು ಸೇರಿ ತೊಂದರೆಯಾಗಬಹುದೆಂದು, ಜಾಫರ್‌ಖಾನನು ಅಲ್ಲಿಂದ ಹೊರಗೆ ಹೋಗಿ ಬೊಬ್ಬೆಯಿಡುತ್ತಿದ್ದ ದೇವಮ್ಮಾಜಿ-ನೀಲಮ್ಮಾಜಿಯರನ್ನು ನೋಡಿ "ನೀವು ಎಷ್ಟು ಕೂಗಾಡಿದರೂ ನಿಮ್ಮನ್ನು ಇನ್ನು ಬಿಡುವಹಾಗಿಲ್ಲ. ಏನೂ ಗಲಾಟೆ ಮಾಡದೆ ಸುಮ್ಮನೆ ಇದ್ದರೆ ನಿಮಗೆ ಒಳ್ಳೆಯದು. ಬಹುಶಃ ರಾಣೀಸಾಹೇಬರು ನಿಮಗೆ ಬಹುಮಾನವನ್ನು ಕೊಟ್ಟು ಕಳುಹಿಸಬಹುದು. ನೀವು ಗಲಭೆ ಮಾಡಿದ ವರ್ತಮಾನವು ರಾಣೀಸಾಹೇಬರಿಗೆ ತಿಳಿದರೆ, ಅವರು ನಿಮ್ಮ ಮೇಲೆ ಸಿಟ್ಟಾಗಿ, ನಿಮ್ಮನ್ನು ಹಿಂದಕ್ಕೆ ಬರುವದಕ್ಕೆ ಬಿಡದೆ, ಅಲ್ಲಿಯೇ ಸೆರೆಯಲ್ಲಿಟ್ಟುಬಿಟ್ಟಾರು! ಅನಂತರ ವೀರರಾಜನಿಗೂ ನಿಮ್ಮ ಮನೆಯವರಿಗೆಲ್ಲರಿಗೂ ಸೆರೆಮನೆಯೇ ಗತಿಯಾದೀತು" ಎಂದು ಗದ್ದರಿಸಿದನು. ಅದನ್ನು ಕೇಳಿ ಹೆದರಿ, ದೇವಮ್ಮಾಜಿ-ನೀಲಮ್ಮಾಜಿಯರು ದೊಡ್ಡದಾಗಿ ಅಳುವದರ ಬದಲು ಚಿಕ್ಕಸ್ವರದಿಂದ

ಪಲ್ಲಕ್ಕಿಯನ್ನು ತೋರಿಸಿದರು. ಜಾಫರ್‌ಖಾನನು ಶಿಪಾಯಿಗಳೊಡನೆ, "ಇವರು ಭಳಪಂತೆ ನೋಡಿಕೊಳ್ಳಿ. ಅದಷ್ಟು ಬೇಗನೆ ಬೋಯಿಗಳಿಂದ ಪಲ್ಲಕ್ಕಿಯನ್ನು ಅಂತಃಪುರಕ್ಕೆ ಹೊರಿಸಿಕೊಂಡು ಹೋಗಿ." ಎಂದು ಹೇಳಿ, ಅವರು ಹೊರಟೊಡನೆ ತಾನೂ ಹಿಂದಿನಿಂದ ಹೋದನು. ಸ್ವಲ್ಪ ಹೊತ್ತಿನಲ್ಲಿ ಅವರು ಅರಮನೆಗೆ ತಲುಪಿದರು ಜಾಫರಖಾನನು ಅರಮನೆಗೆ ತಲುಪಿದ ಕೂಡಲೇ ಸುಲ್ತಾನನ ಖಾಸಾ ಮಂತ್ರಿಯೊಡನೆ ತಾನು ಬಂದ ವಿಷಯವನ್ನು ಸುಲ್ತಾನನಿಗೆ ತಿಳಿಸುವಂತೆ ಹೇಳಿದನು. ಸುಲ್ತಾನನು ಜಾಫರ್‌ಖಾನನನ್ನು ಮಾರನೆ ದಿನ ಬೆಳಿಗ್ಗೆ ಬರುವಂತೆ ಹೇಳಿ, ವೀರರಾಜನ ತಂಗಿಯರನ್ನು ಜನಾನಾದ ಮುಖ್ಯ ದಾಸಿಯಲ್ಲಿ ಬಿಟ್ಟು ಅವರನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಹೇಳಿದನು. ಮಾರನೆಯ ದಿವಸ ಬೆಳಿಗ್ಗೆ ಟಿಪ್ಪುಸುಲ್ತಾನನು ಜಾಫರ್‌ಖಾನನನ್ನು ಜೊತೆಯಲ್ಲಿ ಕರೆದುಕೊಂಡು ಶ್ರೀರಂಗಪಟ್ಟಣಕ್ಕೆ ಸವಾರಿ ಹೊರಟನು.

ಇತ್ತಲಾಗಿ ದೇವಮ್ಮಾಜಿ-ನೀಲಮ್ಮಾಜಿಯರು ರಾತ್ರಿ ರಾಣೀಸಾಹೇಬರನ್ನು ಕಂಡು. ಅವಳ ಪಾದದ ಮೇಲೆ ಬಿದ್ದು, ತಮ್ಮ ದುಃಖವನ್ನು ಹೇಳಿಕೊಳ್ಳಬೇಕೆಂದು ನೆನೆಸಿದ್ದರು; ಆದರೆ ಅವರಿಗೆ ರಾಣೀಸಾಹೇಬರೆಲ್ಲಿರುವರೆಂಬುದು ಸಹ ತಿಳಿಯಲಿಲ್ಲ. ಅವರ ವಿಚಾರವನ್ನು ನೋಡುವುದಕ್ಕೆ ಹೇಳಿದ್ದ ಮುಖ್ಯ ದಾಸಿಯು ಅವರಿಗೆ ರಾತ್ರಿ ಹಾಲು-ಹಣ್ಣುಗಳನ್ನು ಕೊಟ್ಟು: "ಹೆದರಬೇಡಿ: ನಿಮ್ಮಮೇಲೆ ಸುಲ್ತಾನರ ದಯೆಬಿದ್ದಿದೆ ಇನ್ನು ನಿಮಗೆ ಯಾವುದಕ್ಕೆ ಕೊರತೆಯಿದೆ? ಸುಲ್ತಾನರ ದಯೆ ಇಲ್ಲದಿದ್ದರೆ ನೀವು ಯಾವಜ್ಜೀವವೂ ಇಲ್ಲಿ ಸೆರೆಮನೆಯಲ್ಲಿ ಮದುವೆಯಿಲ್ಲದೆ ಕೊಳೆಯಬೇಕಾಗಿದ್ದಿತು" ಎಂದು ಹೇಳಿ ಸಮಾಧಾನಪಡಿಸುತ್ತಿದ್ದಳು. ಆಗ ದೇವಮ್ಮಾಜಿಗೆ ತಮ್ಮನ್ನು ಇಲ್ಲಿಗೆ ತಂದದ್ದರ ನಿಜವಾದ ಉದ್ದೇಶವು ಮನಸ್ಸಿಗೆ ಹೊಳೆದು, ಬಹಳ ವ್ಯಥೆಯುಂಟಾಯಿತು; ಆದರೆ ಮಾಡುತ್ತಾಳೇನು? ರಾತ್ರಿ ಏನೂ ಫಲಹಾರ ಮಾಡದೆ ಕಣ್ಣೀರು ಸುರಿಸುತ್ತಾ ಬಿದ್ದುಕೊಂಡಳು. ನೀಲಮ್ಮಾಜಿಯು ಅಕ್ಕನ ದುಃಖವನ್ನು ನೋಡಿ ತಾನೂ ಕಣ್ಣೀರು ಸುರಿಸುತ್ತಾ ಮಲಗಿಕೊಂಡಳು. ಸುಲ್ತಾನನು "ಹೇಗೂ ಜನಾನಕ್ಕೆ ಬಂದ ಮೇಲೆ ಇನ್ನೆಲ್ಲಿಗೆ ಹೋಗುವರು? ಸ್ವಲ್ಪ ದುಃಖವನ್ನು ಶಾಂತ ಮಾಡಿಕೊಳ್ಳಲಿ" ಎಂದು ಆ ರಾತ್ರಿ ಅವರ ಗೊಡವೆಗೇ ಹೋಗಲಿಲ್ಲ.

ಮಾರನೇ ದಿವಸ ಸುಲ್ತಾನನು ರಾಣೀವಾಸದೊಡನೆ ದೇವಮ್ಮಾಜಿ ಮತ್ತು ನೀಲಮ್ಮಾಜಿಯರನ್ನು ರಾಜಧಾನಿಗೆ ಕರೆದುಕೊಂಡು ಹೋದನು.

## ದಳ :: ೧೦

ನಾವು ಈಗ ಪೆರಿಯಾ ಪಟ್ಟಣವನ್ನು ಬಿಟ್ಟು ವೀರರಾಜನನ್ನೂ ಅವನ ಪರಿವಾರದಳವನ್ನೂ ಹಿಂಬಾಲಿಸೋಣ. ವೀರರಾಜನು ಬೇಟೆಗೆ ಹೊರಟಾಗ ಅವನ ಸಂಗಡ ಅವನ ತಮ್ಮನಾದ ಅಪ್ಪಾಜಿರಾಜನೂ ಹೊಂಬಾಳೆ ನಾಯಕನೂ ಹೊಂಬಾಳೆ ನಾಯಕನ ಮೂರು-ನಾಲ್ಕು ಜನ ಪರಿವಾರದವರೂ ಇದ್ದರು. ಪೆರಿಯಾಪಟ್ಟಣದ ಪಶ್ಚಿಮದಲ್ಲಿ ಒಂದು ದೊಡ್ಡ ಕಾಡು ಇದ್ದಿತು. ಆ ಕಾಡಿನಲ್ಲಿ ಹುಲಿಗಳೂ ಚಿರತೆಗಳೂ ಇತರ ಸಾಧುವಾದ ಕಾಡುಪ್ರಾಣಿಗಳೂ ತುಂಬಿದ್ದುವು. ಈ ಸಂಗತಿಯನ್ನು ಕೇಳಿ ವೀರರಾಜನು ಆ ಕಾಡಿನಲ್ಲಿ ಬೇಟೆಯಾಡಬೇಕೆಂದು ಮೊದಲೇ ಆಲೋಚಿಸಿದ್ದನು. ಈಗ ಟಿಪ್ಪುಸುಲ್ತಾನರು ಮಂಗಳೂರು ಕಡೆ ಹೋದವರು ಪೆರಿಯಾಪಟ್ಟಣಕ್ಕಾಗಿ ಬರುವರೆಂಬ ವಾರ್ತೆಯನ್ನು ತಿಳಿದು ಸುಲ್ತಾನರು ಬರುವಾಗ ತಾನು ಪೆರಿಯಾಪಟ್ಟಣದಲ್ಲಿರಬಾರದೆಂದು ನಿಶ್ಚಯಿಸಿ. ವೀರರಾಜನು ಆ ಸಮಯಕ್ಕೆ ಸರಿಯಾಗಿ ನಂಜರಾಜಪಟ್ಟಣದ ಕಡೆಯ ಕಾಡಿಗೆ ಹೊರಟನು. ಕಾಡಿನಲ್ಲಿ ಮೂರ-ನಾಲ್ಕು ದಿವಸ ಬೇಟೆಯಾಡಬೇಕೆಂದು ಅಷ್ಟು ದಿವಸಗಳಿಗೆ ಬೇಕಾದ ಆಹಾರ-ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿದ್ದರು. ಹೀಗೆ ಹೊರಟು ಎರಡು ದಿವಸ ವೀರರಾಜನೂ ಅವನ ಸಂಗಡಿಗರೂ ಬಹಳವಾಗಿ ಬೇಟೆಯಾಡಿದರು. ವೀರರಾಜನು ಕೆಲವು ಹುಲಿಗಳನ್ನು ಕೊಂದನು. ಅವರ ಜೊತೆಗೆ ಕೆಲವು ಕುರುಬರೂ ಸೇರಿದರು. ವೀರರಾಜನು ಬೇಟೆಯಾಡುತ್ತ ಕುಶಾಲ ನಗರದಿಂದ ಆರೇಳು ಮೈಲುಗಳ ದೂರದ ವರೆಗೆ ಹೋಗಿ ಬಿಟ್ಟಿದ್ದನು. ಅಲ್ಲಿಂದ ಇನ್ನು ಹಿಂದಿರುಗಬೇಕೆಂದಿರುವಷ್ಟರಲ್ಲಿ ಅಲ್ಲೇ ಕಾಡಿನ ಅಂಚಿನಲ್ಲಿದ್ದ ಹಳ್ಳಿಯವರು ಈ ಬೇಟೆಗಾರರ ಹತ್ತಿರ ಬಂದು ''ಸ್ವಾಮಿ! ಈ ಕಾಡಿನಲ್ಲಿ ಒಂದು ದೊಡ ಹೆಬ್ಬುಲಿಯಿದೆ; ಅದು ನಮ್ಮ ದನ ಕರುಗಳನ್ನು ಬಹಳವಾಗಿ ಹಿಡಿಯುತ್ತದೆ. ನೀವು ಆ ಹೆಬ್ಬುಲಿಯನ್ನು ಕೊಲ್ಲಬೇಕೆಂದು ನಾವು ನಿಮ್ಮನ್ನು ಬೇಡಿಕೊಳ್ಳುತ್ತೇವೆ. ನಮಗೆ ಈಗ ಇಲ್ಲಿ ಜೀವಿಸುವದೇ ಕಷ್ಟವಾಗಿದೆ'' ಎಂದು ಹೇಳಿದರು. ಆಗ ಸಮಯವು ಮಧ್ಯಾಹ್ನವು ಮೀರಿದ್ದಿತು. ವೀರರಾಜನು ಹಿಂದಕ್ಕೆ ಪೆರಿಯಾಪಟ್ಟಣಕ್ಕೆ ಹೋಗಬೇಕೆಂದಿದ್ದನು; ಆದರೆ ಜನರು ತನ್ನಲ್ಲಿ ಬಂದು ಹಾಗೆ ಮೊರೆಯಿಟ್ಟದ್ದನ್ನು ಕೇಳಿ, ವೀರರಾಜನಿಗೆ ಆ ಹೆಬ್ಬುಲಿಯನ್ನು ಕೊಲ್ಲಬೇಕೆಂದು ಮನಸ್ಸಾಯಿತು. ಹಾಗೆಯೇ ಹೊಂಬಾಳೆ ನಾಯಕ ಮತ್ತು

ಇತರರನ್ನು ಕರೆದುಕೊಂಡು ಅವನು ಆ ಹಳ್ಳಿಯವರು ತೋರಿಸಿದ ಕಾಡಿಗೆ ಹೋದನು. ಅಲ್ಲಿ ಒಂದು ಸಣ್ಣ ಗುಡ್ಡದ ಬುಡದಲ್ಲಿ ಬಂಡೆಗಲ್ಲುಗಳ ಸಂದಿನಲ್ಲಿ ಒಂದು ಗುಹೆಯು ಹಾಗಿದ್ದಿತು ಆ ಗುಹೆಯು ಮುಂದುಗಡೆ ಕುರುಚಲು ಗಿಡಗಳು ಒತ್ತಾಗಿ ಬೆಳೆದಿದ್ದವು. ಆ ಗುಹೆಗೆ ಸುಮಾರು ಎರಡು ಫರ್ಲಾಂಗು ದೂರದಲ್ಲಿಯೇ ಹಳ್ಳಿಯವರು ನಿಂತುಬಿಟ್ಟರು ಅಲ್ಲಿಂದ ಮುಂದೆ ವೀರರಾಜನೂ ಹೊಂಬಾಳೆ ನಾಯಕನೂ ಮತ್ತು ಕೆಲವು ಕುರುಬರೂ ಮುಂದಕ್ಕೆ ಹೊರಟರು ಗುಹೆಗೆ ಹತ್ತಿರವಾದ ಹಾಗೆಯೇ ಬೇಟೆ ನಾಯಿಗಳು ಜೋರಾಗಿ ಬೊಗಳುವದಕ್ಕೆ ಸುರುಮಾಡಿದವು. ವೀರರಾಜನು ಗುಹೆಯ ಹತ್ತಿರಕ್ಕೆ ಹೋದನು. ಅಲ್ಲಿ ಒಂದು ಹೆಬ್ಬುಲಿಯು ತನ್ನ ಎರಡು ಮರಿಗಳೊಡನೆ ಇದ್ದು, ನಾಯಿಗಳು ಬೊಗಳುವ ಕಡೆಗೆ ದುರದುರನೆ ನೋಡುತ್ತಿತ್ತು. ಆಗ ವೀರರಾಜನು ಒಂದು ಸಾಧಾರಣ ಮರದ ಹಿಂದುಗಡೆಯಲ್ಲಿ ನಿಂತುಕೊಂಡು, ಹೆಬ್ಬುಲಿಗೆ ಗುಂಡು ಹೊಡೆದನು; ಆದರೆ ಆ ಗುಂಡು ಹುಲಿಯ ಭುಜಕ್ಕೆ ತಗುಲಿ ಗಾಯವನ್ನು ಉಂಟುಮಾಡಿತು. ಆಗ ಹುಲಿಯು ತಟ್ಟನೆ ನೆಗೆದು, ಒಬ್ಬ ಕುರುಬನನ್ನು ಹಿಡಿದುಬಿಟ್ಟಿತು. ಆ ಕುರುಬನ ತೋಳು ಹುಲಿಯ ದವಡೆಯ ಒಳಗೆ ಸಿಕ್ಕಿ ಆ ಕುರುಬನು "ತಾನು ಸತ್ತುಹೋದೆನು" ಎಂದು ಬೊಬ್ಬಿಟ್ಟನು ಆ ಕ್ಷಣವೇ ವೀರರಾಜನು ಇನ್ನೊಂದು ಗುಂಡನ್ನು ಹುಲಿಯ ಹಣೆಗೆ ಗುರಿಯಿಟ್ಟು ಹೊಡೆದನು ಆ ಹುಲಿಯು ಸತ್ತು ನೆಲಕ್ಕುರುಳಿತು ಆ ಕುರುಬನ ಕೈಯು ಮಾತ್ರ ಜಜ್ಜಿದ ಹಾಗಾಗಿದ್ದಿತು. ಅವನನ್ನು ಇತರ ಕುರುಬರು ಹೊತ್ತುಕೊಂಡು ಹೋದರು.

ಇಷ್ಟೆಲ್ಲಾ ಆಗುವಾಗ ಸಾಯಂಕಾಲವಾಗಿದ್ದಿತು. ವೀರರಾಜನಿಗೆ ಮತ್ತು ಅವನ ಪರಿವಾರದವರಿಗೆ ತಾವು ಬರುವಾಗ ತಂದಿದ್ದ ಆಹಾರ-ಸಾಮಗ್ರಿಗಳು ತೀರಿ ಹೋಗಿದ್ದುವು ಅವರಿಗೆ ಆ ರಾತ್ರಿಯಲ್ಲಿ ಇರುವುದಕ್ಕೆ ಸರಿಯಾದ ಸ್ಥಳವು ಸಿಗಲಿಲ್ಲ; ತಿನ್ನುವುದಕ್ಕೆ ಆಹಾರವೂ ಇರಲಿಲ್ಲ. ವೀರರಾಜನು ರಾತ್ರಿಯನ್ನು ಹೇಗೆ ಕಳೆಯುವುದೆಂದು ಆಲೋಚಿಸುತ್ತಿದ್ದನು.

ಈ ಮಧ್ಯೆ ವೀರರಾಜನು ಹೆಬ್ಬುಲಿಯ ಬೇಟೆಗೆ ಹೋಗುವುದಕ್ಕೆ ಮೊದಲೇ ಅವನು ಕಾಡಿನಲ್ಲಿ ಬೇಟೆಯಾಡುತ್ತಿರುವದನ್ನು ಕೆಲವು ಮುಸಲ್ಮಾನ ಗಡೀ ಪಹರೆಯವರು ಕಂಡರು ಆ ಕುಶಾಲ್‌ನಗರದ ಕಿಲ್ಲೆದಾರನು ವೀರರಾಜನ ಸ್ನೇಹಿತನಾದ ಖಾದರ್‌ಖಾನ್ ಖೈಸನಿಯಾಗಿದ್ದನು. ಅವನು

ಕುಶಾಲ್‌ನಗರದ ಕಿಲ್ಲೆದಾರನಾಗಿ ನೇಮಿಸಲ್ಪಟ್ಟು ಒಂದು ತಿಂಗಳಾಗಿದ್ದಿತು. ಇವನು 'ಈ ಬೇಟೆಗಾರರನು ಯಾರಿರಬಹುದು? ಕೊಡಗಿನ ಜನರು ಯಾರೂ ಬೇಟೆಗೆ ಹೋಗಲಿಲ್ಲವಲ್ಲ! ಪೆರಿಯಾಪಟ್ಟಣದ ಕಡೆಯಿಂದ ಯಾರೋ ಬಂದಿರಬೇಕು,' ಎಂದು ಆಲೋಚಿಸಿ, ಇವರ್ಯಾರೆಂಬವನ್ನು ನೋಡಬೇಕೆಂದು ಕುದುರೆಯನ್ನು ಹತ್ತಿಕೊಂಡು, ನೂರು ನಾಲ್ಕು ಸಿಪಾಯಿಗಳನ್ನು ತನ್ನ ಸಂಗಡಲೇ ಕರೆದುಕೊಂಡು ವೀರರಾಜನು ಬೇಟೆಯಾಡುತ್ತಿದ್ದ ಕಾಡಿನ ಹತ್ತಿರದ ಹಳ್ಳಿಗೆ ಬಂದನು. ಅಲ್ಲಿಂದ ಅವನು ಬೇಟೆಯವರನ್ನು ತನ್ನಲ್ಲಿಗೆ ಕರೆದುಕೊಂಡು ಬರುವಂತೆ ಸಿಪಾಯಿಗಳನ್ನು ಕಳುಹಿಸಿದನು. ಸಿಪಾಯಿಗಳು ಹೋಗಿ ವೀರರಾಜನಿಗೆ ಹೇಳಲು ಮೊದಲು ಅವನು ಬರಲೊಪ್ಪಲಿಲ್ಲ; ಆದರೆ ಅವನಿಗೆ ಆ ಕಿಲ್ಲೆದಾರನು ಖಾದರ್ ಖಾನ್ ಖೈಸರನೆಂಬುದು ತಿಳಿದ ಮೇಲೆ ಸಂತೋಷದಿಂದ ಬಂದನು. ಆ ಹಳ್ಳಿಯಲ್ಲಿ ಖಾದರ್ ಖಾನನೂ ವೀರರಾಜನೂ ಒಬ್ಬರನ್ನೊಬ್ಬರು ಕಂಡು ಬಹಳ ಸಂತೋಷಪಟ್ಟು, ಆಲಿಂಗನ ಮಾಡಿಕೊಂಡರು. ನಂತರ ಖಾದರಖಾನನು ವೀರರಾಜನನ್ನು ಕುಶಾಲ್ ನಗರಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ರಾತ್ರಿಯ ಊಟಕ್ಕೆ ಏರ್ಪಾಡು ಮಾಡಿ ಉಪಚರಿಸಿದನು. ಮಾರನೆಯ ದಿವಸ ಬೆಳಿಗ್ಗೆಯೂ ವೀರರಾಜನಿಗೆ ಆಹಾರ ಪದಾರ್ಥಗಳನ್ನು ಒದಗಿಸಿಕೊಟ್ಟು ಅನಂತರ ಅವನನ್ನೂ ಅವನ ಜೊತೆಯಲ್ಲಿದ್ದವರನ್ನೂ ಪೆರಿಯಾಪಟ್ಟಣಕ್ಕೆ ಕಳುಹಿಸಿದನು. ವೀರರಾಜನು ಖಾದರ್ ಖಾನ್ ಖೈಸರನ ಸತ್ಕಾರಕ್ಕೆ ಸಂತೋಷಪಟ್ಟು ತಾನು ಜೀವದಲ್ಲಿರುವಷ್ಟು ಕಾಲ ನೀವು ಹಿಂದೆ ಮತ್ತು ಈಗ ಮಾಡಿದ ಉಪಕಾರಗಳನ್ನು ಮರೆಯಲಾರೆನು. ಎಂದು ಹೇಳಿ ಹೊರಟು ಹೋದನು.

## ದಳ :: ೧೧

ಮರುದಿವಸ ಸಾಯಂಕಾಲ ಸುಮಾರು ನಾಲ್ಕು ಘಂಟೆಯ ಸಮಯ. ವೀರರಾಜನೂ, ಅವನ ಪರಿವಾರದವರೂ ದಾರಿ ನಡಿಗೆಯಿಂದ ಆಯಾಸ ಹೊಂದಿ ಮೆಲ್ಲನೆ ಬರುತ್ತಾ ಇದ್ದರು. ಪೆರಿಯಾಪಟ್ಟಣದ ಹತ್ತಿರ ಬರುತ್ತಾ ವೀರರಾಜನ ಮನಸ್ಸು ಇದ್ದಕ್ಕಿದ್ದ ಹಾಗೆ ಬೇಸರಗೊಂಡಿತು. ವೀರರಾಜನು ತಾನು ಹೀಗೆ ಚಿಂತಾಕ್ರಾಂತನಾಗುವುದಕ್ಕೆ ಏನು ಕಾರಣವಿರಬಹುದು? ಎಂದು

ಬಹಳ ಆಲೋಚಿಸಿದನು. ಪರಿಯಾಸಪಟ್ಟಣದ ಬಂಧನದ ವಾಸವು ಅವನ ಮುಖಕ್ಕೆ ಕಾರಣವಾಯಿತೇ? ಎಂದು ಹೇಳಲು ಆ ವಾಸವು ಅವನಿಗೆ ಹೊಸತಾರಲ್ಲಿ ವೀರರಾಜನ ಹಾಗೆಯೇ ಖಿನ್ನ ಮನಸ್ಕನಾಗಿ ತನ್ನ ಮನೆಯಿರುವ ಬೀದಿಗೆ ಬಂದನು. ಆಗ ಅಲ್ಲಿದ್ದ ಜನರು ಇವನನ್ನು ಒಂದು ವಿಚಿತ್ರ ರೀತಿಯಿಂದ ದೃಷ್ಟಿಸಿ ತಮ್ಮ ತಮ್ಮೊಳಗೆ ಮೆಲ್ಲನೆ ಮಾತನಾಡುತ್ತಿದ್ದರು. ವೀರರಾಜನಿಗೂ ಅವನ ಪರಿವಾರದವರಿಗೂ ಜನರಲ್ಲಿ ಇದುವರೆಗಿಲ್ಲದ ಈ ಹೊಸ ವರ್ತನೆಯನ್ನು ನೋಡಿ ಆಶ್ಚರ್ಯವಾಯಿತು. ವೀರರಾಜನು ತನ್ನ ಮನೆಗೆ ಬಂದು ನೋಡುವಾಗ ಮನೆಯ ಕದವು ಮುಚ್ಚಿತ್ತು. ಹೊರಚಾವಡಿಯಲ್ಲಿ ಪಹರೆ ಮಾಡುತ್ತಿದ್ದ ಸಿಪಾಯಿಗಳು ಬಹಳ ಔದಾಸೀನ್ಯದಿಂದ ಕೂಡಿದ್ದರು. ಅವರ ಮುಖವನ್ನು ನೋಡಿದರೆ ಅವರು ತಾವು ಏನೋ ಒಂದು ತಪ್ಪನ್ನು ಮಾಡಿದೆವೆಂಬ ಭಾವನೆಯಿದ್ದ ಹಾಗೆ ತೋರುತ್ತಿತ್ತು. ಮೇಲೆ ಮಹಡಿಯ ಕಿಟಿಕಿಯು ಮುಚ್ಚಿಕೊಂಡಿತ್ತು. ಮನೆಯಲ್ಲಿ ಎಲ್ಲಿ ನೋಡಿದರೂ ನಿಃಶಬ್ದ! ಇದನ್ನು ನೋಡಿ ವೀರರಾಜನಿಗೆ ಆಶ್ಚರ್ಯವುಂಟಾಯಿತು. ಅಷ್ಟರಲ್ಲಿ ಇವನನ್ನು ನೋಡಿ ಪಹರೆಯವರು ಎದ್ದುನಿಂತರು. ಆಗ ವೀರರಾಜನು ಅವರಲ್ಲಿ ಒಬ್ಬನನ್ನು ಕರೆದು:—

“ರಂಗಾ, ಏನೋ ಹೀಗೆ ಬಾಗಿಲು ಮುಚ್ಚಿಕೊಂಡು ಪಹರೆ ಮಾಡುತ್ತೀರಿ? ಮನೆಯವರು ಎಲ್ಲಿ ಹೋದರು?” ಎಂದು ಕೇಳಿದನು.

“ರಂಗಾ:— ಅಡ್ಡ ಬಿದ್ದೆ ಬುದ್ಧಿ! ದೊಡ್ಡ ಅಮ್ಮೋರ ಖಾಯಿಲೆಯಾಗಿ ಮಲಗಪ್ಪ ಬುದ್ಧಿ!

ವೀರರಾಜನಿಗೆ ಈ ಮಾತುಗಳನ್ನು ಕೇಳಿ ಬಹಳ ಗಾಬರಿಯಾಯಿತು. ಹೊರಗೆ ವೀರರಾಜನ ಮಾತುಗಳನ್ನು ಕೇಳಿ, ಆತನ ಪತ್ನಿಯು ಮನೆಯ ಕದವನ್ನು ತೆರೆದಳು. ವೀರರಾಜನು ಆತುರದಿಂದ ಮನೆಯ ಒಳಹೊಕ್ಕಿದನು. ಆಗ ನಂಜಮ್ಮಾಜಿಗೆ ಅಷ್ಟರವರೆಗೆ ಅಡಗಿಕೊಂಡಿದ್ದ ದುಃಖವು ಒಂದೇ ಬಾರಿಗೆ ಉಕ್ಕಿ ಬಂದು, ಅವಳು ಒಂದೇಸವನೆ ಅಳಲಾರಂಭಿಸಿದಳು. ವೀರರಾಜನು ಕೇಳಿದ ಪ್ರಶ್ನೆಗೆ, ದುಃಖದ ಭರದಲ್ಲಿ ಅವಳಿಂದ ಉತ್ತರ ಕೊಡಲಾಗಲಿಲ್ಲ. ವೀರರಾಜನು ಅವಳಿಂದ ಉತ್ತರ ಸಿಕ್ಕದ್ದನ್ನು ನೋಡಿ, ತನ್ನ ತಾಯಿಯು ಮಲಗುತ್ತಿದ್ದ ಕೊಠಡಿಗೆ ಹೋದನು. ಅಲ್ಲಿ ದೇವಾಂಬಿಕೆಯು ಮಲಗಿಕೊಂಡು ನರಳುತ್ತಾ ಇದ್ದಳು. ಆಗ ವೀರರಾಜನು:—“ಅಮ್ಮಾ!” ಎಂದು ಕರೆಯುತ್ತ

ಕೊಡಡಿಯು ಒಳಹೊಕ್ಕನು. ಆಗ ದೇವಾಂಬಿಕೆಯು ಮಲಗಿದಲ್ಲೇ ತಲೆಯೆತ್ತಿ ನೆ ಡಿ. "ವೀರರಾಜಾ, ಬಂದೆಯಪ್ಪಾ!" ಎಂದು ಹೇಳುತ್ತಾ, ತನ್ನ ನನ್ನು ಮಾತೃಪ್ರೇಮದಿಂದ ಅಪ್ಪಿಕೊಳ್ಳುವದಕ್ಕೆ ಕೈಚಾಚಿದಳು; ಆದರೆ ಮರುಕ್ಷಣದಲ್ಲೇ "ಬೇಡ, ಬೇಡ! ಹತ್ತಿರ ಬರಬೇಡಪ್ಪಾ; ನನ್ನ ಜೊತೆಯಲ್ಲಿ ನೀನೂ ಈ ರೋಗಕ್ಕೆ ಬಲಿಯಾಗಬೇಡ!" ಎಂದಳು. ವೀರರಾಜನು ಇಂದು ಯಾಕೆ ತನ್ನ ತಾಯಿಯು ಹೀಗೆ ಹೇಳುತ್ತಾಳೆ? ಎಂದು ಯೋಚಿಸುವಷ್ಟರಲ್ಲಿ ನಾಜವಮ್ಮಾಜಿಯು ಬಂದು ತನ್ನ ಗಂಡನ ಕೈಯನ್ನು ಹಿಡಿದು, ಕಿವಿಯಲ್ಲಿ "ಅತ್ತೆಯಮ್ಮನವರಿಗೆ ಸಿಡುಬು ಆಗಿದೆ; ಹತ್ತಿರ ಹೋಗಬೇಡಿ" ಎಂದು ಹೇಳಿದಳು ಆಗಿನ ಕಾಲದಲ್ಲಿ ಅಷ್ಟೇಕೆ, ಈಗ ಇಪ್ಪತ್ತು-ಮೂವತ್ತು ವರ್ಷಗಳ ಹಿಂದಿನ ವರೆಗೂ "ಸಿಡುಬು" ಎಂದರೆ ಜನರು ಬಹಳವಾಗಿ ಹೆದರುತ್ತಿದ್ದರು. ಊರಿನಲ್ಲಿ ಯಾರಿಗಾದರೂ ಸಿಡುಬು ಎದ್ದರೆ, ಸಾಧ್ಯವಿದ್ದವರು ಆ ಊರನ್ನೇ ಬಿಟ್ಟು ಹೋಗುತ್ತಿದ್ದರು. ಸಾಧ್ಯವಿಲ್ಲದವರು ತಮ್ಮ ತಮ್ಮ ಮನೆಗಳಲ್ಲಿಯೇ ಇದ್ದು ಸಿಡುಬು ಆದವರ ಮನೆಯ ಕಡೆಗೆ ಮುಖ ಹಾಕುತ್ತಿರಲಿಲ್ಲ ರೋಗಿಯ ಮನೆಯವರು ರೋಗಿಯನ್ನು ಉಪಚರಿಸುವುದಕ್ಕೆ ಹತ್ತಿರ ಸಹ ಸುಳಿಯುತ್ತಿರಲಿಲ್ಲ. ರೋಗಿಯ ಹತ್ತಿರ ಹೋದರೆ ತಮಗೆಲ್ಲಿ ಆ ಖಾಯಿಲೆಯು ಅಂಟಿಕೊಳ್ಳುವದೋ? ಎಂದು ಹೆದರುತ್ತಿದ್ದರು ಸಿಡುಬು ಆದವನಿಗೆ ದೂರದಲ್ಲಿ ಆಹಾರ ಪದಾರ್ಥಗಳನ್ನು ಇಟ್ಟು, ಅವನ ಸಂಬಂಧಿಕರು ಹೊರಟು ಹೋಗುತ್ತಿದ್ದರು ರೋಗಿಯು ಮೆಲ್ಲನೆ ತೆವಳಿಕೊಂಡು ತನಗಿಟ್ಟಿದ್ದ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಹೀಗಾಗಿ ಅನೇಕ ವೇಳೆ ಶುಶ್ರೂಷೆಯೂ, ಸಮಯಕ್ಕೆ ಸರಿಯಾಗಿ ಆಹಾರವೂ ಇಲ್ಲದೆ ಬಹಳ ಜನ ರೋಗಿಗಳು ಮೃತ್ಯುವಿನ ಪಾಲಾಗುತ್ತಿದ್ದರು ತಾಯಿಗೆ ಸಿಡುಬು ಎದ್ದ ಕೂಡಲೆ ವೀರರಾಜನಿಗೂ, ಮೈಯು "ಜುಂ" ಎಂದಿತು ಆದರೂ ಅಲ್ಲಿಂದ ಕಾಲ್ದೆಗೆಯದೆ, ತಾಯಿಯನ್ನು ಕುರಿತು "ಈಗ ಹ್ಯಾಗಿದೆಯಮ್ಮ?" ಎಂದು ಕೇಳಿದನು. ಆಗ ದೇವಾಂಬಿಕೆಯು "ಹ್ಯಾಗಿರುವುದಪ್ಪಾ! ನನ್ನ ಅಂತ್ಯಕಾಲವು ಸಮೀಪಿಸುತ್ತಾ ಇದೆ. ನಾನು ಇವತ್ತು ರಾತ್ರಿ, ಇಲ್ಲವೊ ನಾಳೆ ರಾತ್ರಿಯೊಳಗೆ ಸತ್ತು ಹೋಗುವುದೇ ಸರಿ. ನಿಮ್ಮನ್ನೆಲ್ಲಾ ಕಣ್ಣು ತುಂಬಾ ನೋಡುವ ಅದೃಷ್ಟವು ನನಗಿದ್ದಿಲ್ಲ. ಹಾಗಾಗಿ ಇಷ್ಟು ದಿವಸ ಜೀವ ಹಿಡಿದುಕೊಂಡಿದ್ದೆ.'

ವೀರರಾಜ:—ಹಾಗೆ ಹೇಳಬೇಡನಮ್ಮ! ನೀನು ಆರೋಗ್ಯವನ್ನು ಹೊಂದಿ

ಇನ್ನೂ ಅನೇಕ ವರ್ಷಗಳ ತನಕ ಬದುಕುವೆ.

ದೇವಾಂಬಿಕೆ: ನನ್ನ ಕಾಲವೆಲ್ಲ ಕಳೆದು ಹೋಯಿತು. ಇನ್ನೇನು? ನಿಮ್ಮನ್ನೆಲ್ಲ ಒಂದು ಸಾರಿ ಕಣ್ಣು ತುಂಬಾ ನೋಡಿ ನಂತರ ಪ್ರಾಣಬಿಡುವೆನು ಎಲ್ಲಿ? ಅಪ್ಪಾಜಿ, ಲಿಂಗಪ್ಪಾ ಎಲ್ಲಾ ಮುಂದೆ ಬನ್ನಿ. ನಂಜಮ್ಮಾ, ಬೆಳಕನ್ನು ತಾ. ಆ ಪಾಳಾದ ಸೂಳೆಯ ಮಗನು ಮೋಸಮಾಡಿ ನಮ್ಮ ಕಂದಮ್ಮಗಳನ್ನು ಕೊಂಡುಹೋದನು'' ಎಂದು ಹೇಳಿ ಕಣ್ಣೀರು ಸುರಿಸತೊಡಗಿದಳು.

ವೀರರಾಜನಿಗೆ ತನ್ನ ತಾಯಿಯು ಇನ್ನು ಹೆಚ್ಚು ಸಮಯ ಬದುಕುವದಿಲ್ಲವೆಂದು ನಿಶ್ಚಯವಾಯಿತು. ಅವನಿಗೆ ತಾಯಿಯು ಹೇಳಿದ ಕೊನೆಯ ಮಾತುಗಳನ್ನು ಕೇಳಿ ಆಶ್ಚರ್ಯವೂ ಭಯವೂ ಏಕಕಾಲದಲ್ಲಿ ಉಂಟಾದವು. ಅಷ್ಟರವರೆಗೆ ಅವನಿಗೆ ತನ್ನ ತಂಗಿಯರಾದ ನೀಲಮ್ಮಾಜಿ ಮತ್ತು ದೇವಮ್ಮಾಜಿಯರ ಯೋಚನೆಯು ಹೊಳೆದಿರಲಿಲ್ಲ. ಈಗ "ಅವರೆಲ್ಲಿರುವರು?" ಎಂದು ತನ್ನ ಹಿಂದೆ ಇದ್ದ ಮನೆ ಜನರನ್ನು ನೋಡಿದನು. ಅಲ್ಲಿ ಅವರನ್ನು ಕಾಣದಿರುವದನ್ನು ನೋಡಿ ತನ್ನ ಹೆಂಡತಿಯ ಕಡೆಗೆ ನೋಡಿದನು. ಆಗ ನಂಜಮ್ಮಾಜಿಯು ವೀರರಾಜನಿಗೆ ಒಂದು ಕಡೆ ದಾರಿ ನಡಿಗೆಯ ಆಯಾಸವೂ ಇನ್ನೊಂದೆಡೆಯಲ್ಲಿ ತಾಯಿಯು ರೋಗಗ್ರಸ್ಥಳಾಗಿರುವ ಚಿಂತೆಯೂ ಬಾಧಿಸುತ್ತಿರುವದನ್ನು ತಿಳಿದು, ಈಗ ಆ ಯುವತಿಯರನ್ನು ಸುಲ್ತಾನನ ಚಾಕರರು ಹಿಡಿದುಕೊಂಡು ಹೋದುದನ್ನು ಹೇಳಿದರೆ ಏನು ಅನರ್ಥವು ಸಂಭವಿಸಬಹುದೋ ಎಂದು ಭಯಪಟ್ಟು, ವೀರರಾಜನೊಡನೆ "ಅವರು ಎಲ್ಲಿಯೋ ಹೋಗಿರಬೇಕು. ಈಗ ಬರಬಹುದು. ನೀವು ಸ್ವಲ್ಪ ವಿಶ್ರಮಿಸಿಕೊಳ್ಳಿರಿ'' ಎಂದು ಹೇಳಿದಳು. ವೀರರಾಜನು ತನ್ನ ತಾಯಿಯ ದೇಹಸ್ಥಿತಿಯನ್ನು ನೋಡಿ ಆಕೆಯು ಬದುಕುವದು ಬಹಳ ಪ್ರಯಾಸವೆಂದು ತಿಳಿದನು. ಅವನಿಗೆ ಬಹಳ ದುಃಖವುಂಟಾಯಿತು. ಹಾಗೆಯೇ ದುಃಖಿಸುತ್ತ ಮಂಚದ ಮೇಲೆ ಮಲಗಿಕೊಂಡು ಯೋಚಿಸುತ್ತಿದ್ದನು. ಅಪ್ಪಾಜಿಯೂ ಲಿಂಗರಾಜನೂ ಹೊರಗಿನ ಕೋಣೆಯಲ್ಲಿ ಕಣ್ಣೀರು ಹಾಕಿಕೊಂಡು ಕುಳಿತಿದ್ದರು. ಆಗ ನಂಜಮ್ಮಾಜಿಯು ವೀರರಾಜನನ್ನು ಊಟಮಾಡುವದಕ್ಕೆ ಕರೆದಳು. ವೀರರಾಜನು ಕಷ್ಟದಿಂದ ಊಟಮಾಡುವದಕ್ಕೆ ಬಂದು ಕುಳಿತನು. ಆಗ ತಿರುಗಿ ಅವನಿಗೆ ನೀಲಮ್ಮಾಜಿ-ದೇವಮ್ಮಾಜಿಯರ ನೆನಪಾಗಿ "ಏನು ಅಮ್ಮಣ್ಣಿ ಮತ್ತು ನೀಲವ್ವ ಇನ್ನೂ ಬರಲಿಲ್ಲ; ಎಲ್ಲಿ ಹೋಗಿರುವರು?'' ಎಂದು ಕೇಳಿದನು.

ಆಗ ನಂಜಮ್ಮಾಜಿಯು "ನೀವು ಈಗ ಊಟಮಾಡಿ. ಅವರು ಯಾಕೆ ಬರ
ಲಿಲ್ಲವೋ ಏನೊ? ಈಗ ಬರಬಹುದು" ಎಂದು ಸಮಾಧಾನಪಡಿಸುವದಕ್ಕೆ
ಪ್ರಯತ್ನಿಸಿದಳು: ಆದರೆ ವೀರರಾಜನಿಗೆ ಅವಳ ಮಾತಿನಲ್ಲಿ ಸತ್ಯತೆಯು
ತೋರಲಿಲ್ಲ. ತನ್ನ ಪತ್ನಿಯು ಏನೋ ಒಂದು ವಿಷಯವನ್ನು ತನ್ನಿಂದ
ಮರೆಮಾಜುತ್ತಿದ್ದಾಳೆಂದು ಆತನು ಭಾವಿಸಿ "ನೀನು ನಿಜ ಹೇಳುವದಿಲ್ಲ
ಏನೋ ಕೆಟ್ಟ ಸಂಗತಿಯು ನಡೆದಿದೆ. ಯಾವಾಗಲೂ ಹೀಗೆ ರಾತ್ರಿಹೊತ್ತು
ಮನೆಬಿಟ್ಟು ಹೋಗದ ಹೆಣ್ಣುಮಕ್ಕಳು ಈಗ ತಾಯಿಯು ಖಾಯಿಲೆಯಿಂದ
ಮಲಗಿರುವಾಗ ಹೋಗುತ್ತಾರೆಯೋ? ದೊಡ್ಡ ಮಾರೆಮ್ಮನ ಖಾಯಿಲೆಯಿಂದ
ಮನೆಯವರನ್ನು ಅದಾರು ತಮ್ಮ ಮನೆಗೆ ಸೇರಿಸುತ್ತಾರೆ? ನನಗೆ ನಿಜವಾದ
ಸಂಗತಿಯನ್ನು ಹೇಳು" ಎಂದು ಸ್ವಲ್ಪ ಸಿಟ್ಟಿನಿಂದ ಕೇಳಿದನು. ನಂಜಮ್ಮಾ
ಜಿಯು ತನ್ನ ಗಂಡನಿಗೆ ನಡೆದುದನ್ನು ಹೇಳಿದರೆ ಸಿಟ್ಟಿನಿಂದ ಆತನು ಎಲ್ಲಿ
ಕಿಲ್ಲೇದಾರನನ್ನು ಹೊಡೆಯುವದಕ್ಕೆ ಹೋಗಿ ಆಪತ್ತನ್ನು ತಂದುಕೊಳ್ಳುವನೋ
ಎಂದು ಹೆದರಿ ಬಹಳ ಸಂಕಟಕ್ಕೊಳಗಾದಳು. ಅವಳಿಗೆ ತನ್ನ ಪತಿಯೊಡನೆ
ನಿಜಸ್ಥಿತಿಯನ್ನು ಹೇಳಿದರೂ ಭಯ, ಹೇಳದಿದ್ದರೂ ಭಯ! ಹೇಳದಿದ್ದರೆ
ಪತಿಯು ತನ್ನೊಡನೆ ಸಿಟ್ಟುಗೊಳ್ಳುವನು, ಎಂದು ಅಂಜುತ್ತಂಜುತ್ತ ಪತಿ
ಯೊಡನೆ "ಎಲ್ಲಿಯಾದರೂ ಸಿಟ್ಟುಗೊಂಡು ಅಪಾಯಕ್ಕೆ ಗುರಿಯಾಗಬೇಡಿ.
ಅವರು ಸುಲ್ತಾನರ ಅಂತಃಪುರಕ್ಕೆ ಅಥವಾ ಇನ್ನಾವ ಮುಸಲ್ಮಾನ ಸರದಾರನ
ಅಂತಃಪುರಕ್ಕೆ ಸೇರಿಸಲ್ಪಟ್ಟಿರುವರು" ಎಂದು ಹೇಳುತ್ತ, ಗುಲಾಮಲ್ಲಿಯು
ಬಂದು ನೀಲಮ್ಮಾಜಿ-ದೇವಮ್ಮಾಜಿಯರನ್ನು ಮೋಸದಿಂದ ಸುಲ್ತಾನನ
ರಾಣಿಯು ಬಳಿಗೆಂದು ಕರೆದುಕೊಂಡು ಹೋದ ಸಮಾಚಾರವನ್ನೆಲ್ಲ ಹೇಳಿ
ದಳು. ನಂಜಮ್ಮಾಜಿಯು ಹೇಳುತ್ತಿದ್ದ ಹಾಗೆ ವೀರರಾಜನ ಕಣ್ಣುಗಳು
ಕೆಂಪಾದುವು. ಅವನು ರೋಷದ ಭರದಲ್ಲಿ ನಡುಗಹತ್ತಿದನು. ಆಗಲೇ ಆ
ನೀಚ ಗುಲಾಮಲ್ಲಿಯನ್ನೂ ಟಿಪ್ಪುಸುಲ್ತಾನನನ್ನೂ ತುಂಡರಿಸಿ ಚೆಲ್ಲುವೆನೆಂದು
ಎದ್ದು ತನ್ನ ಕತ್ತಿಯ ಕಡೆಗೆ ಕೈಚಾಚಿದನು. ಆಗ ನಂಜಮ್ಮಾಜಿಯು
ಮುಂದಕ್ಕೆ ಬಂದು ವೀರರಾಜನ ಕೈಗಳೆರಡನ್ನೂ ಬಿಗಿಯಾಗಿ ಹಿಡಿದುಕೊಂಡು
"ದುಡುಕಬೇಡಿ. ಮೋಸವನ್ನು ಮೋಸದಿಂದಲೇ ಜಯಿಸಬೇಕು. ಈಗ ಈ
ಶತ್ರುಗಳ ಪಟ್ಟಣದಲ್ಲಿ ನಿಮ್ಮ ಶೌರ್ಯವು ನಿಮಗೆ ಕೆಡಕನ್ನು ತರಬಹುದು.
ಈಗ ಮನೆಬಿಟ್ಟು ಹೋಗಬೇಡಿ" ಎಂದು ಬೇಡಿಕೊಂಡಳು. ಆದರೂ ವೀರ

ರಾಜನು ಬೇರೆ ಮಾತುಗಳನ್ನು ಲಕ್ಷಿಸದೆ ಮುಂದಕ್ಕೆ ಬಾಗಿಲ ಹತ್ತಿರಕ್ಕೆ ಹೆಜ್ಜೆಯಿಡಲು, ಮರಣೋನ್ಮುಖಳಾದ ದೇವಾಂಬಿಕೆಯು "ಅಪ್ಪಾ ವೀರಪ್ಪಾ, ಅಪ್ಪಾಜಿ ಲಿಂಗೂ" ಎಂದು ಬಹಳ ಕ್ಷೀಣಸ್ವರದಲ್ಲಿ ಕರೆಯುವದು ವೀರರಾಜನಿಗೂ ನಂಜಮ್ಮಾಜಿಗೂ ಕೇಳಿಸಿತು.

ಆಗ ನಂಜಮ್ಮಾಜಿಯು, "ಅತ್ತೆ ಯವ್ರನವರಿಗೆ ಪ್ರಾಣ ಹೋಗುವ ಕಾಲವು ಹತ್ತಿರ ಬಂದಿರುವಂತೆ ತೋರುತ್ತದೆ. ಮೊದಲು ಅವರಲ್ಲಿಗೆ ಹೋಗೋಣ" ಎಂದು ಗಂಡನ ಕೈ ಹಿಡಿದೆಳೆದಳು. ವೀರರಾಜನು ಮನಸ್ಸು ಸತ್ತವನಾಗಿ ಅವಳ ಹಿಂದೆಯೇ ನಡೆದನು. ಅಪ್ಪಾಜಿ ಲಿಂಗರಾಜರೂ ಹಿಂದಿನಿಂದ ನಡೆದರು. ದೇವಾಂಬಿಕೆಯು ಇವರನ್ನು ಕಂಡ ಕೂಡಲೆ "ಅಪ್ಪಾ, ನನ್ನ ಜನ್ಮವು ಇಂದಿಗೆ ತೀರಿತು. ಮಹಾದೇವನ ಕಟಾಕ್ಷದಿಂದ ನೀವು ಬೇಗನೆ ಕೆಟ್ಟ ಜನರ ಕೈಯಿಂದ ತಪ್ಪಿಸಿಕೊಂಡು ಹೋಗಿ" ಎಂದು ಹೇಳಿ ಸುಮ್ಮನಾದಳು. ಇಷ್ಟು ಮಾತಾಡುವಷ್ಟರಲ್ಲಿ ಆಕೆಗೆ ಸಾಕುಸಾಕಾಗಿ ಹೋಯಿತು. ಅನಂತರ ಅವಳ ಉಸಿರಾಟವು ಜೋರು ಜೋರಾಯಿತು. ಕಣ್ಣಿನ ಗುಡ್ಡೆಗಳು ಕಾಂತಿಹೀನವಾದುವು. ಬಾಯಿಯು ಒಣಗಿತ್ತು. ಕೊನೆಗೆ ವೀರರಾಜ-ನಂಜಮ್ಮಾಜಿ ಮೊದಲಾದವರು ನೋಡುತ್ತಿದ್ದ ಹಾಗೆಯೇ ಅವಳ ಪ್ರಾಣವಾಯುವು ಹಾರಿಹೋಯಿತು. ವೀರರಾಜನು ಇದನ್ನು ನೋಡಿ ಮಂಕುಹಿಡಿದವನ ಹಾಗೆ ಕುಳಿತು ಬಿಟ್ಟಿದ್ದನು. ಅಪ್ಪಾಜಿ, ಲಿಂಗರಾಜರು ಗೊಳೋ ಎಂದು ಅಳುವುದಕ್ಕೆ ತೊಡಗಿದರು. ನಂಜಮ್ಮಾಜಿಯು ಕಣ್ಣೀರು ಸುರಿಸತೊಡಗಿದಳು.

ಇಷ್ಟು ಹೊತ್ತಿನಲ್ಲಿ ಹೊಂಬಾಳೆನಾಯಕನು ಅಲ್ಲಿಗೆ ಬಂದನು. ಹೊಂಬಾಳೆ ನಾಯಕನು ನಾವು ಮೊದಲು ಹೇಳಿದ ಹಾಗೆ ವೀರರಾಜನ ಮನೆಯಲ್ಲಿ ಪಹರೆ ಮಾಡುವವರ ಮುಖ್ಯಸ್ಥನಾಗಿದ್ದನು. ಈತನು ವೀರರಾಜನೊಡನೆ ಬೇಟೆಗೆ ಹೋದವನು ಪೆರಿಯಾಪಟ್ಟಣವನ್ನು ತಲುಪಿದೊಡನೆ ವಿಶ್ರಾಂತಿಯನ್ನು ಹೊಂದುವದಕ್ಕೋಸ್ಕರ ನೆಟ್ಟಗೆ ತನ್ನ ಮನೆಗೇ ಹೋದನು; ಆದರೆ ಇತ್ತಲಾಗಿ ವೀರರಾಜನ ತಾಯಿಯು ಯಾವಾಗ ಮೃತಿಯನ್ನು ಹೊಂದಿದಳೋ, ಆ ಕೂಡಲೆ ಪಹರೆಯವರು ಅವನಿಗೆ ಈ ವರ್ತಮಾನವನ್ನು ತಿಳಿಸಿದರು. ತತ್‌ಕ್ಷಣವೇ ಹೊಂಬಾಳೆ ನಾಯಕನು ವೀರರಾಜನ ಮನೆಗೆ ಬಂದನು.

ಹೊಂಬಾಳೆ ನಾಯಕನು ವೀರರಾಜನೂ ಇತರರೂ ದುಃಖದಲ್ಲಿ ಮುಳುಗಿ ಮುಂದೆ ತಾವು ಮಾಡಬೇಕಾದ ಕರ್ತವ್ಯದ ಯೋಚನೆಯೇ ಇಲ್ಲ

ದಿರುವುದನ್ನು ಕಂಡನು. ಆಗ ಅವನು ಮೆಲ್ಲನೆ ವೀರರಾಜನು ಕುಳಿತಲ್ಲಿಗೆ ಹೋಗಿ, 'ಬುದ್ಧಿ. ಆದದ್ದು ಆಗಿಹೋಯಿತು. ಇನ್ನು ದುಃಖಪಟ್ಟು ಫಲವಿಲ್ಲ. ತಾಯಿಯವರಿಗೆ ಹೇಗೂ ವಯಸ್ಸಾಗಿತ್ತು. ಇನು ಅವರ ದೇಹದ ಮುಂದಿನ ಕಾರ್ಯವನ್ನು ಮಾಡೋಣ. ಅವಕ್ಕೆ ಈಗ ಕಿಲ್ಲೆದಾರನಿಗೆ ವರ್ತಮಾನವನ್ನು ಕಳುಹಿಸುವೆನು." ಎಂದನು ಆಗ ವೀರರಾಜನು ಒಂದೇ ಸಾರಿ ಸಿಟ್ಟಿಗೆದ್ದು, "ಅವನು, ಅವನ ಕಡೆಯುವರು ಯಾರಾದರೂ ಇಲ್ಲಿಗೆ ಬಂದರೆ ಅವರನ್ನು ಕೊಂದುಹಾಕಿಬಿಡುತ್ತೇನೆ" ಎಂದು ಗಟ್ಟಿಯಾಗಿ ಹೇಳಿದನು ಹೊಂಬಾಳೆನಾಯಕನು "ಬುದ್ಧಿ, ಕೋಪ ಮಾಡಬೇಡಿ ನಾವು ಸಮಾಧಾನದಿಂದ ಕೆಲಸವನ್ನು ನಡಸಬೇಕು. ಹಾಗಿದ್ದರೆ ನಿಮಗೆ ಇಲ್ಲಿಂದ ತಪ್ಪಿಸಿಕೊಂಡು ಹೋಗುವದಕ್ಕೆ ಅನುಕೂಲವಾದರೂ ಆಗಬಹುದು. ಈಗ ಬಹಳ ರಾತ್ರಿಯಾಗಿದೆ ಬುದ್ಧಿ, ನೀವು ಸ್ವಲ್ಪ ವಿಶ್ರಮಿಸಿಕೊಳ್ಳಿ. ಬೆಳಗಾಗುತ್ತಲೆ ಕಿಲ್ಲೆದಾರನಿಂದ ನಾನು ತಾಯಿಯವರ ಶವಸಂಸ್ಕಾರಕ್ಕೆ ಪರವಾನಿಗೆ ತರುತ್ತೇನೆ" ಎಂದು ಹೇಳಿ, ತನ್ನ ಕೈಕೆಳಗಿನ ಪಹರೆಯವನಿಗೆ ಏನೋ ಹೇಳುವುದಕ್ಕೆ ಹೊರಕ್ಕೆ ಹೊರಟನು.

---

## ದಳ :: ೧೨

ಬೆಳಗ್ಗೆ ಏಳು ಗಂಟೆಯ ಸಮಯ. ದಕ್ಷಿಣಾಯನವಾಗಿದ್ದುದರಿಂದ ಸೂರ್ಯೋದಯವಾಗಿ ಬಹಳ ಸಮಯವಾಗಿರಲಿಲ್ಲ ಅಷ್ಟು ಹೊತ್ತಿಗೆ ಹೊಂಬಾಳೆ ನಾಯಕನ. ವೀರರಾಜನ ಮನೆಯಿಂದ ಹೊರಟು ಕಿಲ್ಲೆದಾರನ ಮಹಲಿಗೆ ಹೊರಟನು. ಆತನ ಸಂಗಡ ಆತನ ಕೈಕೆಳಗಿನ ಪಹರೆದಾರನೊಬ್ಬನಿದ್ದನು. ಹೊಂಬಾಳೆ ನಾಯಕನಿಗೆ ರಾತ್ರಿಯೆಲ್ಲ ನಿದ್ದೆಕೆಟ್ಟಿದ್ದುದರಿಂದ ಆತನ ಕಣ್ಣುಗಳು ಕೆಂಪಾಗಿದ್ದುವು; ಮುಖವು ನಿಸ್ತೇಜವಾಗಿದ್ದಿತು. ಹೊಂಬಾಳೆ ನಾಯಕನು ನಿದ್ದೆಕೆಟ್ಟ ಆಲಸ್ಯದಿಂದಲೂ ವೀರರಾಜನ ತಾಯಿಯು ಸತ್ತ ದುಃಖದಿಂದಲೂ ಕೂಡಿದವನಾಗಿ, ನಿಧಾನವಾಗಿ ಮಹಲಿನ ಕಡೆಗೆ ಹೋಗುತ್ತಿದ್ದನು. ಹೀಗೆ ಹೋಗುತ್ತ ಒಂದೆರಡು ಫರ್ಲಾಂಗುಗಳನ್ನು ಕ್ರಮಿಸುವಷ್ಟರಲ್ಲಿ ಇಬ್ಬರು ನಡುಪ್ರಾಯದ ಜನರು ಈತನಿಗೆ ಎದುರಾದರು. ಆ ಜನರು ನೋಡುವದಕ್ಕೆ ಲಿಂಗಾಯುತರಂತೆ ಇದ್ದರು. ಕುತ್ತಿಗೆಯಲ್ಲಿ ಒಂದು ದಾರವು ನೇತಾಡುತ್ತಿದ್ದು, ಅದರ ತುದಿಯಲ್ಲಿ ಎದೆಯ ಕೆಳಭಾಗಕ್ಕೆ ಸರಿ

ಯಾಗಿ ಬೆಳ್ಳಿಯ ಶಿವಲಿಂಗವು ಕಟ್ಟಲ್ಪಟ್ಟಿತ್ತು. ಕೊರಳಲ್ಲಿ ಒಂದೆರಡು ರುದ್ರಾಕ್ಷಿಗಳೂ ಇದ್ದುವು ಅವರು ಹೊಂಬಾಳೆ ನಾಯಕನನ್ನು ನೋಡಿ 'ಗೌಡರೇ, ನಮಸ್ಕಾರ. ನಾವು ತಮ್ಮನ್ನು ಕಾಣೋಕ್ಕೆ ಹೋಗಿದ್ವಿ'' ಎಂದು ಹೇಳಿದರು ಹೊಂಬಾಳೆ ನಾಯಕನು ಆಶ್ಚರ್ಯದಿಂದ ಅವರ ಕಡೆಗೆ ನೋಡಿ ''ನೀವು ಯಾರು? ನಿಮಗೆ ನನ್ನಲ್ಲಿ ಏನು ಕೆಲಸ?" ಎಂದನು.

ಆಗಂತುಕರು:—ಗೌಡರೇ, ನಾವು ಲಿಂಗಕಟ್ಟಿದೋರು. ನಮ್ಮೂರು ಹಾಸನ. ತಮ್ಮ ಕೈಕೆಳಗೇನಾದರೂ ಚಾಕರಿಮಾಡಿಕೊಂಡು ಜೀವನ ಮಾಡ ಬೇಕೆಂದು ಬಂದೇವಿ ತಾವೇನಾದರೂ ನಮಗೆ ಉಪಕಾರ ಮಾಡಬೇಕು.

ಹೊಂಬಾಳೆ ನಾಯಕ:—ನೀವು ನನ್ನಲ್ಲ್ಯಾಕೆ ಬರುತ್ತೀರಿ; ನಮ್ಮ ಸುಲ್ತಾನರ ಹತ್ತಿರ ಹೋದರೆ ಅವರೇನಾದರೂ ಚಾಕರಿಕೊಟ್ಟಾರು. ನೀವು ಪಟ್ಟಣಕ್ಕೆ ಹೋಗಿ

ಆಗಂತುಕರು:—ನಾವು ಲಿಂಗಕಟ್ಟಿದೋರು ಹೋದ್ರೆ ನಮ್ಮ ಜಾತಿ ಹೋಗ್ತೈತೆ ಗೌಡ್ರೆ ನೀವು ನಿಮ್ಮ ತಾಬೇಲಿ ನಹರೆದಾರರ ಚಾಕ್ರಿ ಕೊಡ್ಸಿ ಬಿದ್ಡೀ

ಹೊಂಬಾಳೆ ನಾಯಕನು ಸ್ವಲ್ಪ ಯೋಚಿಸಿ, ಹೇಗೂ ದೇವಾಂಬಿಕೆಯ ಶವಸಂಸ್ಕಾರಕ್ಕೆ ಕೆಲವು ಲಿಂಗವಂತರ ಸಹಾಯವು ಅವಶ್ಯವಿದೆಯೆಂದು ಅವರಿಗೆ "ನಾನು ಈಗ ಕಿಲ್ಲೆದಾರರ ಮಹಲಿಗೆ ಹೋಗಿ ಬೇಗನೆ ಬರುವೆನು. ನೀವು ಇಲ್ಲಿಯೇ ಕಾದಿರಿ. ಚಾಕರಿ ವಿಷಯ ನಂತರ ಮಾತಾಡುವ" ಎಂದು ಹೇಳಿ, ಕಿಲ್ಲೇದಾರನ ಮಹಲಿಗೆ ಹೋದನು ಅಷ್ಟರಲ್ಲಿ ಕಿಲ್ಲೇದಾರನು ಬೆಳಗಿನ ಫಲಾಹಾರವನ್ನು ತೀರಿಸಿ, ಪಲ್ಲಂಗದ ಮೇಲೆ ದಿಂಬುಗಳಿಗೆ ಒರಗಿ ಕುಳಿತುಕೊಂಡಿದ್ದನು. ಹೊಂಬಾಳೆ ನಾಯಕನು ಅವನ ಮುಂದೆ ಹೋಗಿ ಬಗ್ಗಿ ನಮಸ್ಕಾರಮಾಡಿ 'ಹುಜೂರ್, ವೀರರಾಜರ ತಾಯಿ ಸತ್ತುಹೋದರು. ಅವರ ಶವವನ್ನು ದಫನ್ ಮಾಡುವದಕ್ಕೆ ಪರವಾನಿಗೆ ಕೊಡಬೇಕು'' ಎಂದನು.

ಕಿಲ್ಲೆದಾರ:—ವೀರರಾಜನ ತಾಯಿ ಸತ್ತುಹೋದಳೋ! ವೀರರಾಜ ನೆಲ್ಲಿ? ಮೊನ್ನೆ ದರ್ಬಾರಿನಲ್ಲಿ ಅವನನ್ನು ನೋಡಲಿಲ್ಲ.

ಹೊಂಬಾಳೆ ನಾಯಕ:—ಮೊನ್ನೆ ಅವರು ಇರಲಿಲ್ಲ ಹುಜೂರ್, ಬೇಟೆಗೆ ಹೋಗಿದ್ದರು; ನಿನ್ನೆ ಬಂದರು. ಬಂದು ಸ್ವಲ್ಪ ಹೊತ್ತಿಗೆ ತಾಯಿಯ ಪ್ರಾಣವು ಹೋಯಿತು. ತಾಯಿಗೆ ಸಿಡುಬಾಗಿತ್ತು.

ಕಿಲ್ಲೆದಾರ: ನಾನು ಈ ಮಾತು ನಂಬುವದಿಲ್ಲ. ಎಲ್ಲಿ, ಮಹಮ್ಮದ್ ಸಾಬಿಯನ್ನು ಕರೆದುಕೊಂಡು ಬಾ. ಅವನು ಹೋಗಿ ಅವಳು ಸತ್ತಿದ್ದಾಳೋ ಇದ್ದಾಳೋ ಎಂದು ನೋಡಿಕೊಂಡು ಬರಲಿ.

ಹೊ. ನಾಯಕ:-ನಾನು ಸುಲ್ತಾನರ ಉಪ್ಪು ತಿಂದಿದ್ದೇನೆ. ಹುಜೂರ್, ನಾನು ಸುಳ್ಳು ಹೇಳುವದಿಲ್ಲ

ಕಿಲ್ಲೆದಾರ: -ವೀರರಾಜನೇ ಬಂದು ಪರವಾನಿಗೆ ತೆಗೆದುಕೊಂಡು ಹೋಗಲಿ. ನೀನ್ಯಾಕೆ ಬರುವುದು? ನೀನು ನಮ್ಮ ನೌಕರನೋ, ವೀರರಾಜನ ನೌಕರನೋ?

ಹೊ ನಾಯಕ: ಕೋಪಮಾಡಬಾರದು, ಹುಜೂರ್. ವೀರರಾಜರು ತಾಯಿಯ ಶವದ ಹತ್ತಿರ ಕುಳಿತುಕೊಂಡು ಅಳುತ್ತಿದ್ದಾರೆ. ಅವರು ಹೇಗೆ ಬಂದಾರು? ತಾವು ಪರವಾನಿಗೆಯನ್ನು ಕೊಟ್ಟು ಈ ಮಹಮ್ಮದ್ ಸಾಬಿಯನ್ನು ಕಳುಹಿಸಿ. ಆತನು ಶವ ದಹನವಾಗುವವರೆಗೆ ಅಲ್ಲಿಯೇ ಇರಲಿ.

ಕಿಲ್ಲೆದಾರ:—ಒಳ್ಳೇದು. ಮಹಮ್ಮದ್, ಇವನ ಜೊತೆಯಲ್ಲಿ ಹೋಗಿ ವೀರರಾಜನ ತಾಯಿಯು ಸತ್ತಿದ್ದಾಳೋ ಅವರ ಶವವನ್ನು ದಫನ್ ಮಾಡುತ್ತಾರೋ ನೋಡಿಕೊಂಡು ಬಾ.

ಮಹಮ್ಮದ್:—ತಮ್ಮ ಹುಕುಂ ಹುಜೂರ್,

ಅನಂತರ ಹೊಂಬಾಳೆ ನಾಯಕನು ಮಹಮ್ಮದ್ ಸಾಬಿಯೂ ಬಂದಕ್ಕೆ ಹೊರಟರು. ದಾರಿಯಲ್ಲಿ ಮಹಮ್ಮದ್ ಸಾಬಿಯು ವೀರರಾಜನ ಪ್ರಸ್ತಾಪವನ್ನೆತ್ತಿ "ಪಾಪ! ವೀರರಾಜರ ತಾಯಿಗೆ ಇಲ್ಲಿ ಸೆರೆಮನೆವಾಸದಲ್ಲಿ ಸಾಯುವದು ಬರೆದಿತ್ತೇ! ಅವರಿಗೆಷ್ಟು ದುಃಖವಾಗಿರಬಹುದು!" ಎಂದನು

ಮಹಮ್ಮದ ಸಾಬಿಯು ವೀರರಾಜನಲ್ಲಿ ಸಹಾನುಭೂತಿಯಿಂದ ಮಾತನಾಡಿದ್ದನ್ನು ಕೇಳಿ ಹೊಂಬಾಳೆ ನಾಯಕನಿಗೆ ಬಹಳ ಆಶ್ಚರ್ಯವಾಯಿತು. ವೀರರಾಜನ ಮೇಲೆ ಸಹಾನುಭೂತಿಯಿಂದಿರುವ ಈ ಮುಸಲ್ಮಾನನ್ಯಾರು? ಎಂದು ಆತನು ಯೋಚಿಸತೊಡಗಿದನು. ಅಷ್ಟರಲ್ಲಿ ನಮಗೆ ಈ ಮೊದಲೇ ಪರಿಚಿತರಾಗಿರುವ ಆ ಆಗಂತುಕರಿಬ್ಬರು ಅಲ್ಲಿ ಇವರ ಜೋತೆ ಸೇರಿದರು. ಆಗ ಮಹಮ್ಮದ ಸಾಬಿಯು ಆ ಲಿಂಗಾಯತರ ಮುಖವನ್ನು ನೋಡಿ ಮುಗುಳು ನಗು ಸೂಚಿಸಿದುದೂ ಹೊಂಬಾಳೆ ನಾಯಕನ ದೃಷ್ಟಿಗೆ ಬಿತ್ತು. ಆಗ ಅವನು ಸುಮ್ಮನಿರಲಾರದೆ "ಏನು ಸಾಬರೇ, ನಿಮಗೂ ಇವರಿಗೂ

ಮೊದಲೇ ಪರಿಚಯವಿರುವ ಹಾಗೆ ತೋರುತ್ತದೆ. ನೀವು ಇವರನ್ನು ಎಲ್ಲಿ ಕಂಡಿರುವಿರಿ?'' ಎಂದು ಕೇಳಿದನು.

ಮಹಮ್ಮದ ಸಾಬಿ:—ಇವರನ್ನು ಇಲ್ಲಿಯೇ ಕಂಡದ್ದು ನಾಯಕರೇ. ಇವರು ನಮ್ಮೂರು ಕಡೆಯವರು.

ಹೊ. ನಾಯಕ:—ಇವರಿಗೆ ಇಲ್ಲಿ ಏನಾದರೂ ಚಾಕರಿ ಬೇಕಂತೆ.

ಮಹಮ್ಮದ ಸಾಬಿ:—ನಿಮ್ಮ ಕೈಕೆಳಗೆ ಮಾಡಿಕೊಳ್ಳಿ ನಾಯಕರೇ, ಒಳ್ಳೇ ನಂಬಿಗಸ್ತರು.

ಹೀಗೆ ಮಾತಾಡುತ್ತ ಬರುತ್ತಾ ವೀರರಾಜನ ಮನೆಗೆ ಬಂದರು. ಆಗ ಹೊಂಬಾಳೆ ನಾಯಕನು ಆ ಲಿಂಗಾಯತರನ್ನು ಕರೆದು, 'ನೀವು ಇವತ್ತು ನನಗೆ ಸಿಕ್ಕಿದ್ದು ಒಳ್ಳೆಯದಾಯಿತು. ನೀವು ಎಷ್ಟು ಶ್ರದ್ಧೆಯಿಂದ ಕೆಲಸ ಮಾಡಿರುವಿರೆಂಬುದು ನನಗೆ ಇವತ್ತೇ ತಿಳಿಯುವುದು. ಇಲ್ಲಿ ವೀರರಾಜರ ಮಾತೋಶ್ರೀಯವರು ಕಾಲವಾಗಿರುವರು. ಅವರ ಶವಸಂಸ್ಕಾರವು ಈಗ ಆಗಬೇಕು'' ಎಂದು ಹೇಳಿದನು. ಆಗ ಆ ಲಿಂಗಾಯತರು 'ತಮ್ಮ ಅಪ್ಪಣೆ ಬುದ್ಧಿ; ನಾವು ಯಾವ ಕೆಲಸಕ್ಕೂ ಹಿಂದೆ ಬೀಳುವವರಲ್ಲ. ಹಣ ಗಿಣ ಏನು ಬೇಕಾದರೂ ಬೇಡವೆನ್ನೆವು, ಬುದ್ಧಿ'' ಎಂದರು.

ಅನಂತರ ಹೊಂಬಾಳೆನಾಯಕನು ಇವರನ್ನು ಹೊರಗೆ ಬಿಟ್ಟು, ತಾನು ವೀರರಾಜನ ಮನೆಯೊಳಗೆ ಹೋದನು. ಆ ಸಮಯದಲ್ಲಿ ವೀರರಾಜನು ಮನೆಯ ನಡುಮನೆಯಲ್ಲಿದ್ದ ಒಂದು ಮರದ ಹಲಗೆಯಲ್ಲಿ ಕುಳಿತುಕೊಂಡು ಏನನ್ನೋ ಯೋಚಿಸುತ್ತಿದ್ದನು. ಆಗ ಹೊಂಬಾಳೆ ನಾಯಕನು ಅಲ್ಲಿಗೆ ಬಂದು 'ಸ್ವಾಮೀ, ಹೋದ ಕೆಲಸವು ನೆರವೇರಿತು. ಕಿಲ್ಲೆದಾರರು ಮಾತೋಶ್ರೀಯವರ ಶವಸಂಸ್ಕಾರಕ್ಕೆ ಅನುಮತಿಯಿತ್ತಿರುವರು. ಸಂಗಡ ಮಹಮ್ಮದ ಸಾಬಿಯನ್ನು ಕಳುಹಿಸಿರುವರು. ನಮ್ಮ ಅದೃಷ್ಟಕ್ಕೆ ಸರಿಯಾಗಿ ದಾರಿಯಲ್ಲಿ ಇಬ್ಬರು ಲಿಂಗವಂತರೂ ಸಿಕ್ಕಿದರು. ಅವರನ್ನು ಕರೆದುಕೊಂಡು ಬಂದೆ. ಇನ್ನೇನು ಬೇಕು? ಅಪ್ಪಣೆಯಾಗಲಿ.'

ವೀರರಾಜ:—ಹೊಂಬಾಳೆನಾಯಕ, ನೀನು ನನ್ನ ಒಡಹುಟ್ಟಿದವನಿಗಿಂತ ಹೆಚ್ಚಾಗಿರುವಿ. ನನ್ನ ಇವತ್ತಿನ ಈ ದುರವಸ್ಥೆಯನ್ನು ನೋಡುವಾಗ, ನಮ್ಮ ಹಿಂದಿನ ಸುಖದ ದಿನಗಳು ನೆನಪಿಗೆ ಬರುತ್ತವೆ. ನನ್ನ ತೀರ್ಥರೂಪರು ಕೊಡಗಿನ ರಾಜರಾಗಿದ್ದಾಗ ನಮಗಿದ್ದ ಸುಖ, ಸಂಪತ್ತು, ಘನತೆ, ವೈಭವಗಳನ್ನು

ಈಗಿನ ಸೆರೆಮನೆ ವಾಸ, ಈ ಪಾರತಂತ್ರ್ಯದ ಜೀವನ, ಈ ಪರಾಶ್ರಯ ಮತ್ತು ಹೀನ ದೆಸೆಗಳೊಡನೆ ಹೋಲಿಸಿದರೆ ಒಮ್ಮೊಮ್ಮೆ ನಾನು ದುಃಖದಿಂದ ಮೈ ಮರೆಯುವೆನು: ಸಿಟ್ಟಿನಿಂದ ಹುಚ್ಚನಂತಾಗುವೆನು; ಟಿಪ್ಪುಸುಲ್ತಾನನನ್ನೂ ಆತನ ರಾಜ್ಯವನ್ನೂ ಪುಡಿಪುಡಿ ಮಾಡುವೆನೆಂದು ವೀರಾವೇಶವನ್ನು ತಾಳು ವೆನು; ಆದರೆ ಮರುಕ್ಷಣದಲ್ಲಿಯೇ ನಮ್ಮ ಈಗಿನ ದುರವಸ್ಥೆಯು ಕಣ್ಣ ಮುಂದೆ ನಿಲ್ಲುವಾಗ ಮೃತಪ್ರಾಯನಾಗುವೆನು. ನಮ್ಮ ಈ ಪಾರತಂತ್ರ್ಯವು ಕೊನೆಗಾಣುವದೋ? ಕೊನೆಗಾಣುವುದಾದರೆ ಎಂದಿಗೆ ಕೊನೆಗಾಣುವುದು? ಎಂಬ ಚಿಂತೆಯು ನನ್ನನ್ನು ಸದಾ ಬಾಧಿಸುತ್ತಿರುವದು. ನಾನು ಈಗ ಕೊಡಗಿ ನಲ್ಲಿ ರಾಜನಾಗಿದ್ದರೆ, ನನ್ನ ಮಾತೋಶ್ರೀಯವರ ಅಂತಿಮ ಸಂಸ್ಕಾರವು ಎಷ್ಟು ವಿಜೃಂಭಣೆಯಿಂದ ಜರುಗುತ್ತಿದ್ದಿತು? ಎಷ್ಟು ಜನ ನನ್ನ ಸರ್ದಾರರೂ ಪ್ರಜೆ ಗಳೂ 'ನಾನು ಮುಂದೆ ತಾನು ಮುಂದೆ' ಎಂದು ಮೃತದೇಹವನ್ನು ಹೊರುವು ದಕ್ಕೆ ಬರುತ್ತಿದ್ದರು. ಈಗಲಾದರೋ ನಾನು ಯಾರನ್ನು ಕರೆಯುವುದು, ಯಾರ ಆಶ್ರಯವನ್ನು ಬೇಡುವುದು? ಎಂಬ ಯೋಜನೆಯಾಗಿದೆ. ಮಡಿಕೇರಿ ಯಲ್ಲಾಗಿದ್ದರೆ ಊರಿಗೆ ಊರೇ ಸಾಲುಗಟ್ಟಿ ಸ್ಮಶಾನಕ್ಕೆ ಬರುತ್ತಿದ್ದರು; ಆದರೆ ಈಗಿನ ನನ್ನ ಅವಸ್ಥೆಯಲ್ಲಿ ಈ ಶ್ರವವನ್ನು ಹೊರುವವರೇ ಇಲ್ಲವಾಗಿದೆ." ಎಂದು ಹೇಳಿ ಕಣ್ಣೀರು ಹಾಕತೊಡಗಿದನು

ಆಗ ಹೊಂಬಾಳೆ ನಾಯಕನು:—'ಮಹಾಸ್ವಾಮಿ, ಹಿಂದಿನ ವೈಭವ ವನ್ನು ಈಗ ನೆನಸಿ ಫಲವಿಲ್ಲ. ಕಾಲಚಕ್ರವು ಇದ್ದ ಹಾಗೆ ಇರುವದಿಲ್ಲ. ಒಮ್ಮೆ ಸುಖದ ಕಾಲ, ಒಮ್ಮೆ ದುಃಖದ ಕಾಲ. ಇನ್ನು ನಿಮಗೆ ಬಹಳ ದಿನ ಈ ಸೆರೆಮನೆಯ ವಾಸವಿರಲಾರದು.'

ವೀರರಾಜ:—'ನನಗೇನೂ ಬಿಡುಗಡೆಯ ಆಶೆಯಿರುವುದಿಲ್ಲ. ಯಾವ ವಿಷ ಗಳಿಗೆಯಲ್ಲಿ ನಮ್ಮ ತೀರ್ಥರೂಪರವರು ಹೈದರಾಲಿಖಾನರ ಮೈತ್ರಿಯನ್ನು ಕೋರಿದರೋ, ಅಂದಿನಿಂದಲೇ ನನಗೆ ಸುಖವಿಲ್ಲದಾಯಿತು ನಮ್ಮ ತಂದೆ ಯವರು ಜೀವದಿಂದಿದ್ದಾಗ ಹೈದರಾಲಿಖಾನರು ಯುದ್ಧದ ಬಗ್ಗೆ 'ಅಷ್ಟು ಹಣ ಕೊಡಬೇಕು, ಇಷ್ಟು ಹಣ ಕೊಡಬೇಕು' ಎಂದು ಹಿಂಸಿಸಿದರು. ಅವರು ಸತ್ತ ಮೇಲೆ ನಾವು ಚಿಕ್ಕವರೆಂಬ ನೆವವನ್ನು ಹೂಡಿ, ನಮ್ಮನ್ನು ಗೋರೂರಿಗೆ ಸಾಗಿಸಿ ಸೆರೆಯಲ್ಲಿಟ್ಟರು. ಅಲ್ಲಿಂದ ಈಗ ಇಲ್ಲಿಯ ಸೆರೆಯಲ್ಲಿ ಟ್ಟಿರುವರು ಈ ಸೆರೆಯಿಂದ ಬಿಡುಗಡೆಯಾಗುವದೆಂದೋ ಎಂಬದನ್ನು

ಆ ಮಹಾದೇವನೇ ಬಲ್ಲ!'

ಹೊ. ನಾಯಕ:—'ದೇವರು ಕಂಡ ಹಾಗೆ ಆಗುತ್ತದೆ. ಈಗ ಅದರ ಯೋಚನೆ ಬೇಡ. ಮೊದಲು ನಿಮ್ಮ ಗಾತ್ರೋತ್ರಿಯವರ ಶವಸಂಸ್ಕಾರ ವನ್ನು ಮಾಡೋಣ'

ವೀರರಾಜ: -'ಹಾಗೆಯೇ ಆಗಲಿ. ನೀನೇ ಎಲ್ಲ ಏರ್ಪಾಡನ್ನು ಮಾಡು.

ಹೊಂಬಾಳೆ ನಾಯಕನು ಈ ಮೊದಲೇ ಶವವನ್ನು ಸ್ಮಶಾನಕ್ಕೆ ಸಾಗಿ ಸುವದಕ್ಕೆ ತಕ್ಕ ಏರ್ಪಾಡನ್ನು ಮಾಡಿದ್ದನು. ವೀರರಾಜನು ಹೇಳಿದ ಕೂಡಲೆ ಹೊಂಬಾಳೆ ನಾಯಕನು ಒಳಗೆ ಶವಕ್ಕೆ ಬೇಕಾದ ಸಂಸ್ಕಾರ ಮಾಡಿಸಿ, ಚಟ್ಟದ ಮೇಲೆ ಕೂರಿಸಿ ಸ್ಮಶಾನಕ್ಕೆ ಸಾಗಿಸಿದನು. ಆಗೊಮ್ಮೆ ಲಿಂಗರಾಜ, ಅಪ್ಪಾಜಿರಾಜರ ಮತ್ತು ನಂಜಮ್ಮಾಜಿಯರ ರೋದನ ಧ್ವನಿಯು ಹೆಚ್ಚಾ ಯಿತು ವೀರರಾಜನಿಗೂ ಕಣ್ಣಿನಲ್ಲಿ ನೀರು ತುಂಬಿತು. ಅಷ್ಟರಲ್ಲಿ ನಂಜ ಮ್ಮಾಜಿಯು, 'ನೀಲಕ್ಕ-ದೇವಕ್ಕ, ನಿಮ್ಮಿಬ್ಬರಿಗೆ ಅತ್ತೆಮ್ಮನವರ ಮರಣ ಕಾಲ ದಲ್ಲಿ ಅವರ ದರ್ಶನ ಮಾಡುವ ಭಾಗ್ಯವು ಇಲ್ಲದಾಯಿತೇ?' ಎಂದು ಹೇಳಲು, ವೀರರಾಜನ ಮುಖವು ಕಪ್ಪಾಗಿ, ಕತ್ತಿಯ ಕಡೆಗೆ ಕೈ ಹಾಕಿದನು; ಆದರೆ ಹೊಂಬಾಳೆ ನಾಯಕನು, 'ಮಹಾಸ್ವಾಮಿ, ಸ್ಮಶಾನಕ್ಕೆ ಕತ್ತಿಯು ಏತಕ್ಕೆ? ಈಗ ನೀವು ಸಾವಧಾನ ಚಿತ್ತದಿಂದಿರಿ' ಎಂದು ಹೇಳಿ, ವೀರರಾಜನನ್ನು ಹೊರಡಿ ಸಿದನು.

ಸ್ವಲ್ಪ ಹೊತ್ತಿನಲ್ಲಿಯೇ ಸ್ಮಶಾನವು ಸಿಕ್ಕಿತು. ಅಲ್ಲಿ ದೇವಾಂಬಿಕೆಯ ಅಂತಿಮ ಸಂಸ್ಕಾರಗಳು ನಡೆದವು. ಅಷ್ಟರವರೆಗೆ ವೀರರಾಜನು ಅಲ್ಲಿ ಯಾರ್ಯಾರಿರುವರೆಂಬದನ್ನು ನೋಡಿರಲಿಲ್ಲ. ಈಗ ಸುತ್ತಲೂ ಮೆಲ್ಲನೆ ತಲೆಯೆತ್ತಿ ನೋಡಿದನು. ಆಗ ಆ ಹೊಸಬರಿಬ್ಬರು ವೀರರಾಜನಿಗೆ ಬಗ್ಗಿ ನಮಿಸಿದರು; ಮಹಮ್ಮದಸಾಬಿಯೂ ನಮ್ರತೆಯಿಂದ ನಮಸ್ಕಾರ ಮಾಡಿದನು. ಇದೆಲ್ಲ ವನ್ನ ನೋಡಿ ವೀರರಾಜನಿಗೆ ಆಶ್ಚರ್ಯವಾಯಿತು. ಸೆರೆಯಲ್ಲಿರುವ ತನಗೆ ಇಷ್ಟು ಮರ್ಯಾದೆಯನ್ನು ಕೊಡುವ ಇವರು ಯಾರು? ಇವರಿಗೇನಾದರೂ ತನ್ನ ಪೂರ್ವಚರಿತೆಯು ಗೊತ್ತಿದೆಯೇ?' ಎಂದು ಆತನು ಯೋಚಿಸಿ, ಅವ ರನ್ನು ಇನ್ನಷ್ಟು ನೋಡಿದನು. ಅವರ ಆಕಾರವು ದೊಡ್ಡದಾಗಿ, ಅವರ ಮೈಕಟ್ಟು ದೃಢವಾಗಿದ್ದಿತು. ಮುಖದಲ್ಲಿ ನಿಶ್ಚಯವೂ ನಿರ್ಭೀತಿಯೂ ವ್ಯಕ್ತ ವಾಗಿದ್ದವು ಆಗ ಆತನು ಲಿಂಗವಂತರ ಹಾಗೆ ಇದ್ದ ಆ ಹೊಸಬರನ್ನು

ನೋಡಿ, 'ಯಾರಪ್ಪ ನೀವು, ಯಾವ ಊರಿನಿಂದ ಬಂದಿರಿ?' ಎಂದು ಕೇಳಿದನು.

ಆಗ ಅವರಲ್ಲಿ ಒಬ್ಬನು:--ಮಹಾಸ್ವಾಮಿ, ನಮ್ಮೂರು ಇಲ್ಲಿಂದ ಎಂಬತ್ತು ಮೈಲು ದೂರದಲ್ಲಿದೆ. ನಾವು ಲಿಂಗವಂತರು. ಮಹಾಸ್ವಾಮಿ ಯವರ ಸೇವೆಮಾಡುವದಕ್ಕೋಸ್ಕರ ಇಲ್ಲಿಗೆ ಬಂದೆವು.

ವೀರರಾಜ:- ಸೇವೆಮಾಡುವದಕ್ಕೆ ಸುಲ್ತಾನರ ಸರ್ದಾರರ ಹತ್ತಿರಕ್ಕೆ ಹೋಗಿ. ನನ್ನ ಸೇವೆಮಾಡಿ ನಿಮಗೆ ಸಿಕ್ಕುವದೇನು? ನೋಡಿದರೆ ನೀವು ಲಿಂಗವಂತರೆಂದು ಕಾಣುವದಿಲ್ಲ. ನಿಮ್ಮನ್ನು ನೋಡಿದರೆ ನನಗೆ ನಮ್ಮ ಕೊಡಗು ಸೀಮೆಯು ಜ್ಞಾಪಕವಾಗುತ್ತದೆ; ಆದರೆ ನನ್ನ ಆ ಶೂರ ಪ್ರಜೆಗಳು ಇಲ್ಲೆಲ್ಲಿ ಬಂದಾರು? ನೀವು ಯಾರೋ ಸುಲ್ತಾನನ ಗೂಢಚಾರರಾಗಿದ್ದು, ನಮ್ಮ ಗುಟ್ಟು ತಿಳಿದು ಸುಲ್ತಾನನಿಗೆ ತಿಳಿಸುವದಕ್ಕೆ ಬಂದಿರಬಹುದು

ಆಗಂತುಕ:—ಮಹಾಸ್ವಾಮಿ, ನಿಮ್ಮ ಪಾದದಾಣೆಯೂ ನಾವು ತಿಂದ ಉಪ್ಪಿಗೆ ಎರಡು ಬಗೆಯುವವರಲ್ಲ; ನೀವು ನಮ್ಮನ್ನು ನಿಮ್ಮಲ್ಲಿಟ್ಟುಕೊಂಡರೆ, ನಿಮ್ಮ ಸೆರೆಮನೆವಾಸವೂ ಬಹಳ ದಿವಸವಿರಲಾರದು.

ವೀರರಾಜ:—ನಿಮ್ಮನ್ನು ಕೆಲಸಕ್ಕಿಡುವದಕ್ಕೂ ನನ್ನ ಸೆರೆಮನೆವಾಸಕ್ಕೂ ಏನು ಸಂಬಂಧ? ಇದರಲ್ಲಿ ಏನೋ ರಹಸ್ಯವಿರುವಂತೆ ತೋರುತ್ತದೆ.

ಆಗಂತುಕ:--ಇದರಲ್ಲಿ ರಹಸ್ಯವೇನೂ ಇಲ್ಲ. ನಮ್ಮನ್ನು ನಿಮ್ಮ ಪಾದದ ಹತ್ತಿರ ಇಟ್ಟುಕೊಳ್ಳಬೇಕೆಂದು ಮಾತ್ರ ನಾವು ಬೇಡಿಕೊಳ್ಳುವೆವು.

ವೀರರಾಜ:— ನಾನು ಈಗ ಸ್ವತಂತ್ರನಲ್ಲ. ಹೊಂಬಾಳೆ ನಾಯಕನಿಗೆ ಯಾರಾದರೂ ಪಹರೆಯುವರು ಬೇಕಾಗಿದ್ದರೆ ಸೇರಿಕೊಳ್ಳಲಿ. ಹೊಂಬಾಳೆ ನಾಯಕ, ಇಗೋ ಇವರಿಬ್ಬರಿಗೆ ನಿನ್ನ ಕೈಕೆಳಗೆ ಚಾಕರಿಬೇಕಂತೆ. ಖಾಲಿ ಯಿದ್ದರೆ ಇಟ್ಟುಕೋ; ನಂಬಿಗಸ್ಥರ ಹಾಗೆ ಕಾಣುತ್ತದೆ.

ಹೊ. ನಾಯಕ: ಈಗ ಖಾಲಿಯಿಲ್ಲ ಬುದ್ಧಿ; ಆದರೂ ಸುಮ್ಮನೆ ಊಟಮಾಡಿಕೊಂಡು ನಮ್ಮ ಪಹರೆಯುವರೊಡನೆ ಇರಲಿ. ಖಾಲಿ ಬಿದ್ದಹಾಗೆ ಇವರನ್ನು ಸುಲ್ತಾನರ ಫೌಜಿಗೆ ಸೇರಿಸುತ್ತೇನೆ ಆ ಆಗಂತುಕರನ್ನು ನೋಡಿ 'ಏನ್ರಪ್ಪಾ ನಿಮ್ಮ ಹೆಸರು? ಈಗ ನೀವು ಇಲ್ಲಿ ಇರಿ. ಖಾಲಿ ಬಿದ್ದಾಗ ನಿಮಗೆ ಕೆಲಸ ಕೊಡಿಸುತ್ತೇನೆ.'

ಆಗಂತುಕರಲ್ಲೊಬ್ಬನು:—ಹಾಗೆಯೇ ಆಗಲಿ ದೇವರು ನನ್ನ ಹೆಸರು ಮಲ್ಲಪ್ಪ ಇವನ ಹೆಸರು ಬಸಪ್ಪ.

ಇಷ್ಟುಮಾತುಗಳಾಗುವಾಗ ವೀರರಾಜನೂ ಹೊಂಬಾಳೆ ನಾಯಕನೂ ವೀರರಾಜನ ಮನೆಗೆ ಬಂದು, ಸೇರಿದರು. ವೀರರಾಜನೂ ಅವನ ತಮ್ಮಂದಿರೂ ಮನೆಯೊಳಗೆ ಹೋದರು ಹೊಂಬಾಳೆ ನಾಯಕನು ಪಹರೆಯವರಿಗೆ ಎಚ್ಚರ ಹೇಳಿ, ತನ್ನ ಬಿಡಾರಕ್ಕೆ ಹೊರಟು ಹೋದನು.

---

## ದಳ :: ೧೩

ಮಲ್ಲಪ್ಪನೂ ಬಸಪ್ಪನೂ ಹೊಂಬಾಳೆನಾಯಕನ ಕೈಕೆಳಗೆ ಕೆಲಸಕ್ಕೆ ಸೇರಿ ಕೆಲವು ದಿನಗಳಾಗಿದ್ದವು. ಅವರಿಗೂ ಉಳಿದ ಪಹರೆಯವರಿಗೂ ಬಹಳ ಸ್ನೇಹವುಂಟಾಯಿತು ಆದರಿಂದ ಅವರು ಕೆಲವು ಸಾರಿ ಅವರನ್ನೇ ತಮ್ಮ ಬದಲು ವೀರರಾಜನ ಮನೆಯಲ್ಲಿ ಪಹರೆಗೆ ನಿಲ್ಲಿಸುತ್ತಿದ್ದರು. ಅವರಿಬ್ಬರೂ ವೀರರಾಜನಿಗೆ ವಿಶೇಷವಾದ ಮರ್ಯಾದೆ ಕೊಡುತ್ತಿದ್ದರು. ಇದರಿಂದ ಆತನಿಗೂ ಈ ಹೊಸಬರ ಮೇಲೆ ತುಂಬಾ ವಿಶ್ವಾಸವೂ ನಂಬಿಕೆಯೂ ಬೆಳೆದುವು. ಹೀಗಿರಲು, ಒಂದು ದಿವಸ ಮಲ್ಲಪ್ಪನು ಹೊರಬಾಗಿಲಿನಲ್ಲಿ ಬಸಪ್ಪನನ್ನು ಪಹರೆಗೆ ನಿಲ್ಲಿಸಿ, ವೀರರಾಜನೊಡನೆ ಹೀಗೆಂದನು:--"ಮಹಾಸ್ವಾಮಿ, ತಮಗೆ ತಮ್ಮ ರಾಜ್ಯವಾದ ಕೊಡಗಿನ ನೆನಪಾಗುವುದಿಲ್ಲವೇ?"

ವೀರರಾಜನು ಆಶ್ಚರ್ಯದಿಂದ: —"ನೀವು ಯಾರೋ ಸುಲ್ತಾನರ ಗೂಢಚಾರರಿರಬೇಕೆಂದು ತೋರುತ್ತದೆ ಇಲ್ಲದಿದ್ದರೆ ಪಹರೆಯವರಿಗೆ ಈ ಮಾತುಗಳು ಏಕೆ?"

ಮಲ್ಲಪ್ಪ:—'ಮಹಾಸ್ವಾಮಿ, ಅಡ್ಡಬಿದ್ದೆ ಕೋಪಿಸಿಕೊಳ್ಳಬೇಡಿ. ನಾವು ಗೂಢಾಚಾರರಲ್ಲ, ನಾವು ನಿಮ್ಮ ಪಾದಸೇವಕರು ನಿಮ್ಮ ಬಿಡುಗಡೆಯ ಸಲುವಾಗಿ ಬಂದವರು.

ವೀರರಾಜ:—ಹಾಗೆಂದರೇನು? ನಿಮ್ಮ ಮಾತು ನನಗೆ ಅರ್ಥವಾಗುವದಿಲ್ಲವಲ್ಲ! ನಿಮಗೂ ನನ್ನ ಬಿಡುಗಡೆಗೂ ಇರುವ ಸಂಬಂಧವೇನು?

ಮಲ್ಲಪ್ಪ (ವೀರರಾಜನ ಸಮೀಪಕ್ಕೆ ಬಂದು):—ಮಹಾಸ್ವಾಮಿ, ನಾವು ಕೊಡಗರು. ನಿಮ್ಮನ್ನು ಇಲ್ಲಿಂದ ಬಿಡಿಸಿಕೊಂಡು ಹೋಗುವದಕ್ಕಾಗಿ ವೇಷ ಮರೆಯಿಸಿಕೊಂಡು ಇಲ್ಲಿಗೆ ಬಂದಿರುವೆವು.

ವೀರರಾಜ:—(ಆಶ್ಚರ್ಯದಿಂದ) ನಿಜವಾಗಿಯೂ ನೀವು ಕೊಡಗರೇ? ನನ್ನ ಪ್ರಜೆಗಳೇ? ನೀವು ಇಲ್ಲಿಗೆ ಹೇಗೆ ಬಂದಿರಿ?

ಮಲ್ಲಪ್ಪ:—ಮಹಾಸ್ವಾಮಿಾ, ನಾವು ಮೊದಲು ಇಲ್ಲಿಗೆ ಕಿತ್ತಳೆ ಹಣ್ಣು ವ್ಯಾಪಾರಿಗಳಾಗಿ ಬಂದೆವು ಅಂದಿನಿಂದ ಒಂದಲ್ಲ ಒಂದು ರೀತಿಯಲ್ಲಿ ತಮ್ಮ ದರ್ಶನಕ್ಕಾಗಿ ಉಪಾಯವನ್ನು ಹುಡುಕುತ್ತಿದ್ದೆವು ಇಂದು ಅದು ಫಲಕಾರಿಯಾಯಿತು

ವೀರರಾಜ:—ನನ್ನ ಪ್ರಜೆಗಳು ನನ್ನ ಬಿಡುಗಡೆಗೆ ಪ್ರಯತ್ನಿಸುವುದನ್ನು ನೋಡಿ, ನನಗೆ ಬಹಳ ಸಂತೋಷವುಂಟಾಗಿದೆ; ಆದರೆ ಇಲ್ಲಿಂದ ಬಿಡುಗಡೆಯಾಗುವ ಬಗೆ ಹೇಗೆ? ಕೋಟೆಯು ಭದ್ರವಾಗಿದೆ; ಕೋಟೆಯ ಸುತ್ತಲೂ ಬಲವಾದ ಪಹರೆಯಿದೆ.

ಮಲ್ಲಪ್ಪ:—ನಾವೂ ಅದನ್ನೇ ಯೋಚಿಸುತ್ತಿದ್ದೇವೆ. ನಮ್ಮ ಸ್ನೇಹಿತನೊಬ್ಬನು ಉಕ್ಕಡದ ಪಹರೆಗಾರರ ಜಮಾದಾರ್ ಇಸ್ಮಾಯಿಲ್ ಖಾನರನ್ನು ನಮ್ಮ ಕಡೆಗೆ ಒಲಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾನೆ

ವೀರರಾಜ:—ಹೀಗೋ? ನಿಮ್ಮ ಮಾತನ್ನು ಕೇಳಿ ನನಗೆ ಇಲ್ಲಿಂದ ಪಾರಾಗಿ ಹೋಗುವ ಯೋಚನೆಯು ಹೆಚ್ಚಾಗುತ್ತಿದೆ; ಆದರೆ ನಾವು ಈಗ ಮಾಡಬೇಕಾದುದೇನು?

ಮಲ್ಲಪ್ಪ:—ನೀವು ಹೆಚ್ಚೇನು ಮಾಡಬೇಕಾದುದಿಲ್ಲ ಮಹಾಸ್ವಾಮಿ, ಹೊಂಬಾಳೆ ನಾಯಕರನ್ನು ಮಾತ್ರ ನೀವು ನಮ್ಮ ಕಡೆಗೆ ಮಾಡಿಕೊಳ್ಳಬೇಕು ಅವರ ಸಹಾಯವಿಲ್ಲದಿದ್ದರೆ, ನಮ್ಮ ಪ್ರಯತ್ನಗಳು ಯಶಸ್ವಿಯಾಗಲಾರವು

ವೀರರಾಜ:—ನೋಡೋಣ ಮಹಾದೇವನ ದಯೆಯಿದ್ದರೆ ನಾವು ನಮ್ಮ ದೇಶಕ್ಕೆ ತಿರುಗಿ ರಾಜರಾಗಬಹುದು. ಈಗ ನೀನು ಹೋಗಬಹುದು.

---

## ದಳ :: ೧೪

ಮಾರನೆಯ ದಿನ ಬೆಳಿಗ್ಗೆ ಎಂಟು ಗಂಟೆಯ ಸಮಯ. ಹೊಂಬಾಳೆ ನಾಯಕನು ವೀರರಾಜನ ಮನೆಗೆ ಬಂದನು. ಆಗ ವೀರರಾಜನು ಏನೋ ಗಾಢವಾದ ಯೋಚನೆಯಲ್ಲಿ ಮುಳುಗಿದ್ದ ಹಾಗೆ ತೋರುತ್ತಿತ್ತು. ಆತನಿಗೆ ಹೊಂಬಾಳೆ ನಾಯಕನು ಬಂದುದೇ ತಿಳಿಯಲಿಲ್ಲ. ಆಗ ಹೊಂಬಾಳೆ ನಾಯಕನು ವೀರರಾಜನನ್ನು ಕುರಿತು "ಬುದ್ಧಿ, ಏನು? ಬಹಳ ಯೋಚನೆಯಲ್ಲಿರುವ ಹಾಗೆ ತೋರುತ್ತದೆ; ಅಂಥಾ ವಿಚಾರವಾವುದು?" ಎಂದು ಕೇಳಿದನು

ವೀರರಾಜ:—ಹೊಂಬಾಳೆ ನಾಯಕ, ನನ್ನ ಭವಿಷ್ಯವನ್ನೇ ಆಲೋಚಿಸುತ್ತಿದ್ದೆನು. ನನ್ನ ಜೀವಮಾನದಲ್ಲಿ ನಾನು ತಿರುಗಿ ನನ್ನ ರಾಜ್ಯವನ್ನು ಸಂಪಾದಿಸುವೆನೋ ಇಲ್ಲವೆ ಇಲ್ಲಿಯೇ ಕೈದಿಯಾಗಿರುವೆನೋ ಎಂದು ಯೋಚಿಸುತ್ತಿದ್ದೇನೆ

ಹೊಂಬಾಳೆ ನಾಯಕ:—ಬುದ್ಧಿ, ನಿಮ್ಮ ಸ್ಥಿತಿಯನ್ನು ನೋಡಿ ನನಗೂ ದುಃಖವುಂಟಾಗುತ್ತದೆ. ನಿಮ್ಮಂಥ ವೀರರಿಗೆ ಈ ಸೆರೆಮನೆಯು ಯೋಗ್ಯ ಸ್ಥಳವಲ್ಲ; ಆದರೆ ಮಾಡುವದೇನು? ಸುಲ್ತಾನರು ತಾವಾಗಿ ನಿಮ್ಮ ರಾಜ್ಯವನ್ನು ನಿಮಗೆ ಕೊಡುವ ಹಾಗಿಲ್ಲ. ನಿಮಗೆ ಇಲ್ಲಿಂದ ಪಾರಾಗಿ ಹೋಗುವದಕ್ಕೂ ಆಗುವ ಹಾಗಿಲ್ಲ

ವೀರರಾಜ:—ಸುಲ್ತಾನರು ನಮ್ಮನ್ನು ಬಿಡುಗಡೆಮಾಡುವ ಹಾಗಿಲ್ಲವೆಂಬುದು ನಿಶ್ಚಯ. ಬೇರೆ ರೀತಿಯಲ್ಲಿ ಪಾರಾಗಿ ಹೋಗುವದು ಹೇಗೆ? ನಿಮ್ಮನ್ನು ನಮ್ಮ ಪಹರೆಗೆಂದೇ ನೇಮಕ ಮಾಡಿದ್ದಾರೆ.

ಹೊಂಬಾಳೆ ನಾಯಕ:—ಹೌದು ಬುದ್ಧಿ; ಆಗಾಗ್ಗೆ ಕಿಲ್ಲೆದಾರರು ನನ್ನೊಡನೆ ನಿಮ್ಮ ವೃತ್ತಾಂತವನ್ನು ಕೇಳುತ್ತಿರುವರು.

ವೀರರಾಜ: ಹೊಂಬಾಳೆನಾಯಕ, ನಾನು ಯಾವಜ್ಜೀವವೂ ಹೀಗೆ ಸೆರೆಮನೆಯಲ್ಲಿಯೇ ಕೊಳೆಯಬೇಕಲ್ಲವೆ?

ಹೊಂಬಾಳೆ ನಾಯಕ:—ಏನು ಮಾಡುವದು? ಬುದ್ಧಿ, ಸುಲ್ತಾನರ ಚಿತ್ತ ನನ್ನಿಂದಾಗುವ ಹಾಗಿದ್ದರೆ ನಾನು ನಿಮ್ಮನ್ನು ಬಿಡಿಸುತ್ತಿದ್ದೆನು.

ವೀರರಾಜ:—ಹೆದರಬೇಡ ಹೊಂಬಾಳೆ ನಾಯಕ, ನೀನು ಸುಲ್ತಾನರ ಕೈಕೆಳಗೇ ಇದ್ದರೆ, ನಿನಗೆ ದೊಡ್ಡ ಪದವಿ ಸಿಕ್ಕುವ ಆಶೆಯಿದೆಯೆ?

ಹೊಂಬಾಳೆ ನಾಯಕ:—ನನಗೆ ಅಂಥಾ ಆಶೆಯೇನೂ ಇಲ್ಲ ಬುದ್ಧಿ. ನಮ್ಮನ್ನು ಸುಲ್ತಾನರ ದರ್ಬಾರಿನಲ್ಲಿ ಯಾರು ಕೇಳುತ್ತಾರೆ? ನಮ್ಮನ್ನು ಈಗಿದ್ದ ಹಾಗೆ ಇಟ್ಟರೆ ಸಾಕು.

ವೀರರಾಜ:—ಹೊಂಬಾಳೆ ನಾಯಕ, ನೀನು ಅಮಲ್ದಾರನಾಗಿರುವದಕ್ಕೆ ಇಷ್ಟಪಡುವದಿಲ್ಲವೇ? ದಂಡಿನ ಅಧಿಪತಿಯಾಗಿರಲು ಇಷ್ಟಪಡುವದಿಲ್ಲವೆ?

ಹೊಂಬಾಳೆ ನಾಯಕ:—ಅಭಾಗ್ಯನಾದ ನನಗದೆಲ್ಲಿಂದ ಬುದ್ಧಿ? ಅದೆಲ್ಲ ಸುಲ್ತಾನರ ಖಾಸ ಸರದಾರರಿಗೆ.

ವೀರರಾಜ:—ನೀನು ಅಮಲ್ದಾರನೂ ಆಗಬಹುದು; ದಳವಾಯಿಯೂ ಆಗಬಹುದು. ನೀನು ನನ್ನದೊಂದು ಆಶೆಯನ್ನು ಪೂರೈಯಿಸುವೆಯಾ?

ಹೊಂಬಾಳೆ ನಾಯಕ—ಆಗಲಿ ಬುದ್ಧಿ. ನಿಮ್ಮ ಆಶೆಯೇನು ಹೇಳಿ?

ವೀರರಾಜ:—ಹೊಂಬಾಳೆ ನಾಯಕ, ನೀನು ನನ್ನನ್ನು ಈ ಸೆರೆಮನೆಯಿಂದ ಬಿಡಿಸಬೇಕು. ನಿನ್ನ ಉಪಕಾರವನ್ನು ನಾನು ಎಂದಿಗೂ ಮರೆಯುವದಿಲ್ಲವಷ್ಟೇ ಅಲ್ಲ, ನಿನ್ನನ್ನು ನಾನು ದೊಡ್ಡ ಅಧಿಕಾರಕ್ಕೇರಿಸುವೆನು.

ಹೊಂಬಾಳೆ ನಾಯಕ:--(ಸ್ವಲ್ಪ ಭಯದಿಂದ) ಬುದ್ಧಿ, ಇದು ಹೇಗಾಗುವದು? ನಾನು ಸುಲ್ತಾನರ ಉಪ್ಪು ತಿಂದು ಅವರಿಗೆ ಎರಡು ಬಗೆಯುವದೆ? ಇದರಲ್ಲಿ ನ್ಯಾಯುವಿದೆಯೇ? ಇದು ನನ್ನಿಂದಾಗದು.

ವೀರರಾಜ: -ಅಪ್ಪಾ, ಚೆನ್ನಾಗಿ ಯೋಚನೆ ಮಾಡು. ನನ್ನನ್ನು ಈ ಸೆರೆಯಿಂದ ಬಿಡಿಸುವದರಿಂದ ನೀನು ಒಂದು ಪುಣ್ಯಕೆಲಸವನ್ನು ಮಾಡಿದಂತಾಗುತ್ತದಲ್ಲದೆ, ಪಾಪದ ಕೆಲಸ ಮಾಡಿದಂತಾಗುವದಿಲ್ಲ. ನ್ಯಾಯಾನ್ಯಾಯ ವಿಚಾರ ಮಾಡಿದರೆ, ಸುಲ್ತಾನರು ಪರಂಪರೆಯಿಂದ ಆಳಿಕೊಂಡು ಬಂದ ರಾಜವಂಶವನ್ನು ಮೂಲೆಗೊತ್ತಿ, ತಾವು ಆಳುವದು ನ್ಯಾಯುವೇ? ಈ ರಾಜ್ಯವು ಹಿಂದೂ ರಾಜರದಲ್ಲವೆ? ದೊಡ್ಡ ನವಾಬರು ನಾವು ಚಿಕ್ಕವರಾಗಿರುವಾಗ ನಮ್ಮ ರಾಜ್ಯವನ್ನು ಅಪಹರಿಸಿ ನಮ್ಮನ್ನು ಸೆರೆಯಲ್ಲಿಟ್ಟಿದ್ದು ನ್ಯಾಯುವೆ? ನಮ್ಮ ತಂದೆಯವರಾಗಲೀ ನಾವಾಗಲೀ ಹೈದರಲ್ಲೀ ಸಾಹೇಬರಿಗೂ ಟಿಪ್ಪು ಸುಲ್ತಾನರಿಗೂ ಏನು ಕೇಡನ್ನು ಬಗೆದಿದ್ದೆವು? ಅವರೂ ಅವರು ನಮ್ಮ ರಾಜ್ಯವನ್ನು ಅಪಹರಿಸಿದ್ದು ಅನ್ಯಾಯುವಲ್ಲವೆ? ಹೊಂಬಾಳೆ ನಾಯಕ, ಚೆನ್ನಾಗಿ ಆಲೋಚನೆ ಮಾಡಿ ನೋಡು. ಸುಲ್ತಾನರ ಸೇವೆಯೆಂದರೆ ಅನ್ಯಾಯ ಮೂರ್ತಿಯ ಸೇವೆ ಮಾಡಿದಂತಾಗುವದು.

ಹೊಂಬಾಳೆ ನಾಯಕ:—ಬುದ್ಧಿ, ನಿಮ್ಮ ಮಾತುಗಳನ್ನು ಕೇಳಿ ನನ್ನ ಮನಸ್ಸು ಕಲಕಿದಂತಾಗಿದೆ. ನಾನು ಬಹಳ ಯೋಚನೆಯಲ್ಲಿ ಬಿದ್ದಿದ್ದೇನೆ!'

ವೀರರಾಜ:—ಹೊಂಬಾಳೆ ನಾಯಕ, ಇನ್ನೂ ಆಲೋಚನೆ ಮಾಡು. ಸುಲ್ತಾನರ ಆಳಿಕೆಯಲ್ಲಿ ಜನರಿಗೇನು ಸುಖವಾಗಿದೆ? ಎಷ್ಟೊಂದು ಜನರು ಬಲಾತ್ಕಾರದಿಂದ ಮತಾಂತರಗೊಳಿಸಲ್ಪಟ್ಟರು! ಎಷ್ಟೊಂದು ಸ್ತ್ರೀಯರ ಮಾನ ಹಾನಿಯಾಯಿತು. ನಮ್ಮ ತಂಗಿಯರನ್ನು ಸುಲ್ತಾನರು ಮೋಸದಿಂದ ತಮ್ಮ ಜನಾನಕ್ಕೆ ಸೇರಿಸಲಿಲ್ಲವೆ? ಇದರಲ್ಲಿ ಧರ್ಮವಿದೆಯೇ? ನ್ಯಾಯುವಿದೆಯೇ?

ನೀನು ಹಿಂದುವಾಗಿದ್ದು, ಮೋಸದಿಂದ ಸೆರೆಯಲ್ಲಿಡಲ್ಪಟ್ಟಿರುವ ನಮ್ಮನ್ನು ಬಿಡಿಸುವುದಕ್ಕೆ ಪ್ರಯತ್ನಿಸುವುದಿಲ್ಲವೇ? ನಾನು ಬಿಡುಗಡೆಯಾದರೆ ತಿರುಗಿ ಒಂದು ಹಿಂದೂ ರಾಜ್ಯವು ತಲೆಯೆತ್ತುವುದಿಲ್ಲವೇ? ನೀನು ಈಗ ನನ್ನನ್ನು ಇಲ್ಲಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಸಹಾಯ ಮಾಡಿದರೆ, ನೀನು ಒಂದು ಹಿಂದೂ ರಾಜ್ಯವನ್ನು ಸ್ಥಾಪಿಸಿದಂತಾಗುವುದು. ನಿನಗೆ ಎಷ್ಟೋ ಪುಣ್ಯವೂ ಬರುವುದು.''

ಹೊಂಬಾಳೆ ನಾಯಕ: –'ನೀವು ಹೇಳಿದ್ದು ನನ್ನ ಮನಸ್ಸಿಗೆ ಹೊಕ್ಕಿತು ಬುದ್ಧಿ; ಆದರೆ ನಿಮ್ಮನ್ನು ಇಲ್ಲಿಂದ ಹೋಗುವುದಕ್ಕೆ ಬಿಟ್ಟರೆ ನನ್ನ ಗತಿಯೇನಾಗಬೇಕು? ಸುಲ್ತಾನರು ನನ್ನನ್ನು ಸುಮ್ಮನೆ ಬಿಟ್ಟು ಬಿಡುತ್ತಾರೆಯೇ?'

ವೀರರಾಜ –'ನೀನು ನಮ್ಮ ಸಂಗಡಲೇ ಬಂದು ಬಿಡು. ನಿನ್ನ ಶೌರ್ಯಕ್ಕೆ, ವೀರತ್ವಕ್ಕೆ ತಕ್ಕಂಥಾ ದೊಡ್ಡ ಪದವಿಯನ್ನೇ ನಾನು ಕೊಡುವೆನು.'

ಹೊಂಬಾಳೆ ನಾಯಕ:—ಆದರೆ ಹೆಂಗಸರು, ಮಕ್ಕಳು ಸಮೇತ ನೀವು ಸಿ ಕೋಟೆಯ ಹೆಬ್ಬಾಗಿಲನ್ನು ದಾಟುವುದು ಹೇಗೆ? ದಾಟಿದರೂ ಊರ ಹೊರಗಿನ ಉಕ್ಕಡವನ್ನು ದಾಟುವದು ಹೇಗೆ? ನನಗೆ ನೀವು ಇಲ್ಲಿಂದ ಪಾರಾಗಿ ಹೋಗುವುದು ಅಸಾಧ್ಯ ಕೆಲಸವೆಂದು ತೋರುತ್ತದೆ, ಬುದ್ಧಿ.'

ವೀರರಾಜ:—'ಹೊಂಬಾಳೆ ನಾಯಕ, ಸಾಧಿಸಿದರೆ ಎಲ್ಲವನ್ನೂ ಮಾಡಬಹುದು. ಏನೋ ದೇವರ ದಯೆಯು ನನ್ನ ಮೇಲಿರುವಂತೆ ತೋರುತ್ತದೆ. ಹತ್ತಿರ ಬಾ ನಿನಗೆ ಎಲ್ಲಾ ಸಂದರ್ಭಗಳನ್ನು ಹೇಳಿ ಕೊಡುವೆನು.' ಎಂದು ಹೇಳಿ, ಹೊಂಬಾಳೆ ನಾಯಕನ ಕಿವಿಯಲ್ಲಿ ಆ ಕೊಡಗರು ತನ್ನ ಬಿಡುಗಡೆಗೆ ಪ್ರಯತ್ನ ಮಾಡುತ್ತಿರುವುದನ್ನೂ, ಉಕ್ಕಡದ ಪಹರೆಗಾರ ಇಸ್ಮಾಯಿಲಖಾನನನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುವುದನ್ನೂ ಹೇಳಿದನು.

ಇವೆಲ್ಲವನ್ನು ಕೇಳಿ ಹೊಂಬಾಳೆ ನಾಯಕನಿಗೆ ಆಶ್ಚರ್ಯವಾಯಿತು; ಮತ್ತು ಇಷ್ಟೆಲ್ಲ ಒಳಸಂಚು ಅಷ್ಟರವರೆಗೆ ತನ್ನ ತಿಳುವಳಿಕೆಗೆ ಬಾರದಿದ್ದುದಕ್ಕೆ ಆತನಿಗೆ ಸ್ವಲ್ಪ ಸಿಟ್ಟೂ ಬಂತು. ಆಗ ಆತನ ಮನಸ್ಸಿನ ಇಂಗಿತವನ್ನು ವೀರರಾಜನು ಅರಿತುಕೊಂಡು:—'ಹೊಂಬಾಳೆ ನಾಯಕ, ನಾನು ನಿನಗೆ ಮೊದಲೇ ತಿಳಿಸಲಿಲ್ಲವೆಂದು ಸಿಟ್ಟು ಮಾಡಬೇಡ. ನನಗೆ ತಿಳಿದದ್ದೇ ನಿನ್ನೆ [illegible] ದಿನ. ನನ್ನ ಪ್ರಜೆಗಳು ಏನು ಪ್ರಯತ್ನ ಮಾಡಿದರೂ ನಿನ್ನ ಸಹಾಯವಿಲ್ಲದೆ

ನಾನು ಇಲ್ಲಿಂದ ಅಲ್ಲಾ ತಲಾಗುವುದಿಲ್ಲವೆಂಬದು ನನಗೆ ತಿಳಿಯುವದಿಲ್ಲವೆ? ನೀನು ದೊಡ್ಡ ಮನಸ್ಸು ಮಾಡಿ ನನ್ನನ್ನು ಇಲ್ಲಿಂದ ಕೊಡಗಿಗೆ ಕರೆದುಕೊಂಡು ಹೋದರೆ, ನಿನ್ನ ಉಪಕಾರವನ್ನು ನಾನು ಮರೆಯಲಾರೆನು. ನಿನಗೆ ಭೂಮಿಗಳನ್ನು ಜಹಗೀರು ಕೊಡುವೆನು. ರಾಜ್ಯದಲ್ಲಿ ದೊಡ್ಡ ಅಧಿಕಾರ ಕೊಡುವೆನು. ನನ್ನನ್ನು ಬಿಡಿಸುವದರಿಂದ ನಿನಗೆ ಪುಣ್ಯವೂ ಬರುವುದು'

ಹೊಂಬಾಳೆ ನಾಯಕನು ಸ್ವಲ್ಪ ಹೊತ್ತು ಆಲೋಚಿಸಿ:—'ಆಗಲಿ ಬುದ್ಧಿ, ನನ್ನ ಕೈಯಿಂದಾಗುವ ಸಹಾಯನನ್ನು ನಿನಗೆ ಮಾಡುವೆನು' ಎಂದ ಮಾತುಗಳನ್ನು ಕೇಳಿ ವೀರರಾಜನಿಗೆ ಬಹಳ ಸಂತೋಷವೂ ಸಮಾಧಾನವೂ ಉಂಟಾಯಿತು. ಆತನು ಹೊಂಬಾಳೆ ನಾಯಕನನ್ನು ಆಲಿಂಗನ ಮಾಡಿಕೊಂಡು, 'ಇಂದಿನಿಂದ ನೀನು ನನ್ನ ಒಡಹುಟ್ಟಿದ ತಮ್ಮನಿಗೆ ಸಮಾನನೆಂದು ನಾನು ಭಾವಿಸುವೆನು' ಎಂದು ಹೇಳಿದನು ಅನಂತರ ಹೊಂಬಾಳೆ ನಾಯಕನು ಸಾಯಂಕಾಲ ತಿರುಗಿ ಬರುವೆನೆಂದು ಹೇಳಿ ತನ್ನ ಮನೆಯ ಕಡೆಗೆ ತೆರಳಿದನು.

---

## ದಳ :: ೧೫

ಸುಮಾರು ಸಾಯಂಕಾಲದ ಸಮಯ ಪಿರಿಯಾಪಟ್ಟದಿಂದ ಎರಡು ಮೈಲುಗಳ ದೂರದಲ್ಲಿದ್ದ ಒಂದು ಉಕ್ಕಡದಲ್ಲಿ ಇಬ್ಬರು ಕುಳಿತುಕೊಂಡು ಮಾತನಾಡುತ್ತಿದ್ದರು. ಅವರು ಹಿಂದುಸ್ತಾನಿಯಲ್ಲಿ ಮಾತನಾಡುತ್ತಿದ್ದರು. ಅವರಲ್ಲಿ ಒಬ್ಬನಿಗೆ ಹಿಂದುಸ್ತಾನೀ ಭಾಷೆಯು ಅಷ್ಟೊಂದು ಚನ್ನಾಗಿ ಬರುತ್ತಿರಲಿಲ್ಲ. ಆತನು ಮರ್ಯಾದೆ ಕೊಟ್ಟು ಮಾತನಾಡುತ್ತಿದ್ದನು. ಇದರಿಂದ ಇನ್ನೊಬ್ಬನು ಉಕ್ಕಡದ ಪಹರೆಯುವರ ಮುಖ್ಯಸ್ಥನಂತೆ ತೋರುತ್ತಿತ್ತು ಆತನ ಪ್ರಾಯವು ನಾಲ್ವತ್ತಕ್ಕೆ ಮೀರಿರಲಿಲ್ಲ. ಗಟ್ಟಿಮುಟ್ಟಾಗಿದ್ದಿತು; ಆದರೆ ಮುಖವು ಬಹಳ ಚಿಂತಾಕ್ರಾಂತವಾದಂತೆ ತೋರುತ್ತಲಿದ್ದಿತು. ಆತನು ತನ್ನ ಮುಂದೆ ನಿಂತವನೊಡನೆ:—'ಏನೋ ಮಹಮ್ಮದ, ನೀನು ಹೇಳುವುದು ನಿಜವೋ ಅಥವಾ ನನ್ನನ್ನು ತಮಾಷೆ ಮಾಡಲಿಕ್ಕೆ ಹೇಳುತ್ತಲಿರುವೆಯೋ?'

ಮಹಮ್ಮದ್:—'ನಾನು ಹೇಳುವುದು ದೇವರಾಣೆಯಾಗಿಯೂ ನಿಜ. ಖಾನ್‌ಸಾಹೇಬ. ನಾನು ಎಂದಾದರೂ ನಿಮಗೆ ತಮಾಷೆ ಮಾಡುವದುಂಟೆ? ಆ ವರ್ತಮಾನವನ್ನು ಕೇಳಿ ನನಗೂ ಬಹಳ ಬೇಸರವಾಯಿತು.'

ಖಾನ್ ಸಾಹೇಬ:—'ಮಹಮ್ಮದ, ಸುಲ್ತಾನರು ಇಂಥ ಅನ್ಯಾಯವನ್ನು ಮಾಡುವರೆಂದು ನಾನು ತಿಳಿದಿರಲಿಲ್ಲ. ಸುಲ್ತಾನರು ನನ್ನನ್ನು ಕೆಲಸದಿಂದ ತೆಗೆದು ಹಾಕುವರೇ? ನನ್ನನು ಬಂದೀಖಾಖೆಯಲ್ಲಿರಿಸುವರೆ? ನಾನು ಅವರಿಗೆ ಮಾಡಿದ ಅಂಥ ಅಪರಾಧವಾದರೂ ಏನು?'

ಮಹಮ್ಮದ:—ಖಾವಂದ, ನೀವು ಮಾಡಿದಪರಾಧವು—ಜಾಫರನಿಗೆ ನಿಮ್ಮ ಮಗಳನ್ನು ಕೊಡದೆ ಇರುವದು. ಅವನಿಗಿನ್ನೇನು ಅಪರಾಧ ಬೇಕು? ಅವನು ಅದಕ್ಕೋಸ್ಕರವೇ ಉಪ್ಪು-ಕಾಗ ಬೆರಸಿ. ನಿಮ್ಮ ಮೇಲೆ ಸುಲ್ತಾನರಿಗೆ ಚಾಡಿಯನ್ನು ಹೇಳಿರುವನು. ನೀವು ರಾಜದ್ರೋಹಿಯೆಂದು ನಿಮ್ಮ ಮೇಲೆ ತಪ್ಪುಹೊರಿಸಿರುವನು ನೀವು ಒಮ್ಮೆ ಬಂದೀಖಾನೆಯನ್ನು ಸೇರಿದರೆ ನಿರಾಯಾಸವಾಗಿ ಅತನ ಬಗಲಿಗೆ ನಿಮ್ಮ ಮಗಳು ಬಿದ್ದಂತೆಯೇ ಸರಿ, ಎಂದು ಅವನು ಭಾವಿಸಿರುವನು.

ಖಾನ್ ಸಾಹೇಬ:—ಯಾ ಅಲ್ಲಾ! ನಾನು ಹಾಗೆಂದಿಗೂ ಆಗಲು ಬಿಡೆನು. ನಾನು ಜೀವಂತನಿರುವ ವರೆಗೆ ನನ್ನ ಮಗಳ ಒಂದು ಕೂಡ ಕೂದಲು ಕೊಂಕದಂತೆ ನೋಡಿಕೊಳ್ಳುವೆನು.

ಮಹಮ್ಮದ:—ಖಾವಂದ, ನೀವನ್ನುವದು ಸರಿ; ಅದರೆ ಸುಲ್ತಾನರ ಶಿಪಾಯಿಗಳು ನಿಮ್ಮನ್ನು ಬಲಾತ್ಕಾರದಿಂದ ಹಿಡಿದು ತೆಗೆದುಕೊಂಡು ಹೋದರೆ ಆಗ ನೀವು ಮಾಡುವುದಾದರೂ ಏನು?

ಖಾನ್ ಸಾಹೇಬ:—ನಾನು ಯುದ್ಧ ಮಾಡಿ ಸಾಯುವೆನು

ಮಹಮ್ಮದ:—ತಾವು ಯುದ್ಧಮಾಡಿ ಸತ್ತರೆ ತಮ್ಮ ಮಗಳ ಗತಿ ಏನು? ನೀವು ಕೋಪಿಸದಿದ್ದರೆ ನಾನೊಂದುಪಾಯವನ್ನು ಹೇಳುವೆನು.

ಖಾನ್ ಸಾಹೇಬ:—ಅದೇನು? ಹೇಳು, ಹೆದರಬೇಡ.

ಮಹಮ್ಮದ:—ನನ್ನ ಮನಸ್ಸಿನಲ್ಲಿರುವುದನ್ನು ಹೇಳುವುದಕ್ಕೆ ಭಯವಾಗುತ್ತದೆ. ಆದರೂ ನಾನು ಹೇಳುವ ಉಪಾಯದಿಂದ ನೀವು ದೊಡ್ಡ ಸರದಾರರೂ ಜಹಗೀರದಾರರೂ ಆಗುವ ಸಂದರ್ಭವಿರುತ್ತದೆ.

ಖಾನ್ ಸಾಹೇಬ:—ನಾನು ಸರದಾರನೂ ಜಹಗೀರದಾರನೂ ಆಗುವ ಸಂದರ್ಭವು ಹೇಗೆ? ನೀನು ನನಗೆ ತಮಾಷೆ ಮಾಡುವಂತೆ ತೋರುತ್ತೆ. ತಮಾಷೆ ಮಾಡುವದಕ್ಕಿದು ಸಮಯವಲ್ಲ. ನಿನ್ನ ಮನಸ್ಸಿನಲ್ಲಿರುವುದನ್ನು ಬಿಚ್ಚಿ ಹೇಳು.

ಮುಹಮ್ಮದ: —ಖಾವಂದ, ನೀವು ಇನ್ನು ಸುಲ್ತಾನರ ರಾಜ್ಯದಲ್ಲಿರುವದು ಹಿತವಲ್ಲ. ಜಾಫರನು ನಿಮಗೆ ಕೆಡಕು ಮಾಡಬೇಕೆಂದು ಟೊಂಕ ಕಟ್ಟಿರುವನು. ಅವನ ಮೇಲೆ ಈಗ ಸುಲ್ತಾನರ ದಯೆಯಿದೆ. ಆದುದರಿಂದ ನಿಮಗೆ ನಾವು ಏನು ಮಾಡಿದರೂ ಒಳ್ಳೆಯದಾಗಲಿಕ್ಕಿಲ್ಲ.

ಖಾನ್ ಸಾಹೇಬ:—ಮುಹಮ್ಮದ್, ನಾನು ಈ ರಾಜ್ಯವನ್ನು ಬಿಟ್ಟು ಹೋಗುವದಾದರೂ ಎಲ್ಲಿಗೆ? ಸುತ್ತುಮುತ್ತಲೆಲ್ಲವೂ ಸುಲ್ತಾನರ ರಾಜ್ಯವಲ್ಲವೆ? ಮಲೆಯಾಳ, ಮಂಗಳೂರು, ಬಿದನೂರು, ಕಣಿವೆ ಕೆಳಗಿನ ಸೀಮೆ—ಇವೆಲ್ಲವೂ ಸುಲ್ತಾನರಿಗೆ ಸೇರಿದವಲ್ಲವೆ? ಸುಲ್ತಾನರ ಉಪ್ಪು ತಿಂದು ಈಗ ಅವರ ರಾಜ್ಯದಿಂದೋಡಿ ಹೋಗುವದು ಯಾವ ನ್ಯಾಯ್ಯ?

ಮುಹಮ್ಮದ: —ನ್ಯಾಯಾನ್ಯಾಯಗಳನ್ನು ನಮ್ಮ ಪ್ರಾಣ-ಮಾನಗಳುಳಿದ್ದರೆ ನೋಡಿಕೊಳ್ಳಬಹುದು. ಪ್ರಾಣಕ್ಕೂ ಮಾನಕ್ಕೂ ಅಪಾಯ ಒದಗುವ ಸಂದರ್ಭವು ಬಂದಾಗ ಅವುಗಳ ಭದ್ರತೆಯನ್ನು ಮೊದಲು ನೋಡಬೇಕು. ಸುತ್ತಮುತ್ತಲೆಲ್ಲವೂ ಸುಲ್ತಾನರ ರಾಜ್ಯವಾದರೂ ನೀವು ಇಲ್ಲಿಗೆ ಹತ್ತಿರದಲ್ಲಿರುವ ಕಾಡುಸೀಮೆಯಾದ ಕೊಡಗನ್ನು ಸೇರಿಕೊಂಡು ಬಿಡಿರಿ. ಅಲ್ಲಿಗೆ ಹೋದರೆ ನಿಮ್ಮ ಸ್ಥಿತಿಯು ಉತ್ತಮವಾಗುವದು.

ಇಸ್ಮಾಯಿಲ್ ಖಾನ್: —ಏನು, ಕೊಡಗು ದೇಶಕ್ಕೆ ಹೋಗಿ ತಲೆಮರೆಯಿಸಿಕೊಳ್ಳುವದೆ? ಅಲ್ಲೇನು ಸುಲ್ತಾನರ ಆಳ್ವಿಕೆ ಇಲ್ಲವೆ? ಆ ಜ್ವರದ ಊರಿಗೆ ನಾನು ಹೋಗಲೊ? ಅದರಲ್ಲೂ ಕಳ್ಳನಂತೆ ಓಡಿಹೋಗಲೊ? ಛೀ! ಛೀ! ಇದೆಂದಿಗೂ ಆಗದು

ಮುಹಮ್ಮದ: —ತಮ್ಮ ಮಾನ-ಪ್ರಾಣಗಳುಳಿಯಬೇಕಾದರೆ ನಾನು ಹೇಳಿದಂತೆ ನೀವೀಗ ಮಾಡಲೇಬೇಕು ಇಲ್ಲದಿದ್ದರೆ ಹೇಗೂ 'ಇವೆರಡೂ' ಉಳಿಯುವದು ನಿಶ್ಚಯವಿಲ್ಲ. ಪ್ರಾಣ ಉಳಿದರೂ ಕಾರಾಗೃಹವಾಸವು ತಪ್ಪಿದ್ದಲ್ಲ. ಆದುದರಿಂದ ಇಲ್ಲಿಂದ ಹೋದರೆ ತಾವು ಸುರಕ್ಷಿತವಾಗಿರಬಹುದು.

ಇಸ್ಮಾಯಿಲ್ ಖಾನನು ಆಶ್ಚರ್ಯಚಕಿತನಾಗಿ: —ಅದು ಹೇಗೆ? ಮುಹಮ್ಮದ, ನೀನು ಹೇಳುವುದು ನನಗೆ ತಿಳಿಯುವದೇ ಇಲ್ಲ. ನೀನು ನನ್ನನ್ನು ಯಾವದೋ ಒಂದು ಒಳಸಂಚಿನಲ್ಲಿ ಸಿಕ್ಕಿಸುವಂತಿದೆ.

ಮುಹಮ್ಮದ:—ಒಳಸಂಚು, ಹೊರಸಂಚು ಏನೂ ಇಲ್ಲ. ತಾವೇನೂ ಗಾಬರಿಪಡುವ ಆವಶ್ಯಕತೆಯಿಲ್ಲ. ತಮಗೆ ಶುಭವೂ ಇತರರಿಗೆ ಒಳ್ಳೆಯದೂ

ಆಗುವ ಸಂದರ್ಭವನ್ನೇ ನಾನು ಹೇಳುತ್ತಿರುವುದು. ಇಲ್ಲದಿದ್ದರಂತೂ ತಮಗೆ ಪ್ರಾಣ-ಮಾನ ಹಾನಿಗಳು ಅಥವಾ ಆಜೀವ ಪರ್ಯಂತ ಕಾರಾಗೃಹವಾಸವು ನಿಶ್ಚಯವು.

ಇಸ್ಮಾಯಿಲಖಾನ್: — ಮುಹಮ್ಮದ್, ಇನ್ನು ನೀನು ನನ್ನನ್ನು ಚಿಂತೆಯಲ್ಲಿಡಬೇಡ ನಾನೇನು ಮಾಡಬೇಕೆಂಬುದನ್ನು ಹೇಳು.

ಮುಹಮ್ಮದ್:— ನಾನು ಹೇಳುವದನ್ನು ಕೇಳಿ ಭಯಪಡಬೇಡಿ-ಕೊಡಗಿನ ಅರಸುಕುಮಾರ ವೀರರಾಜರು ಹೇಗಾದರೂ ತಾವು ಸುಲ್ತಾನರ ಸೆರೆಯಿಂದ ತಪ್ಪಿಸಿಕೊಂಡು ತಮ್ಮ ದೇಶಕ್ಕೆ ಮರಳಿ ಹೋಗಬೇಕೆಂದು ಹಟತೊಟ್ಟಿರುವರು -ವರ ತಂಗಿಯರನ್ನು ಆ ನೀಚ ಜಾಫರನು ಅಪಹರಿಸಿ, ಸುಲ್ತಾನರ ಜನಾನಕ್ಕೆ ಸೇರಿಸಿದ್ದು ಅವರಿಗೆ ಅಸಹನೀಯವಾದ ಅಪಮಾನವಾದಂತಾಗಿದೆ. ಅವರು ಹೋಗುವದಕ್ಕೆ ನೀವು ಸಹಾಯ ಮಾಡಿದರೆ ಅವರಿಗೂ ಒಳ್ಳೆಯದು, ನಿಮಗೂ ಕ್ಷೇಮವು.

ಇಸ್ಮಾಯಿಲಖಾನ: -- ಏನು? ನಾನು ವೀರರಾಜರಿಗೆ ತಪ್ಪಿಸಿಕೊಂಡು ಹೋಗುವದಕ್ಕೆ ಸಹಾಯ ಮಾಡುವುದೇ? ಇಂಥ ರಾಜದ್ರೋಹವನ್ನು ನಾನು ಮಾಡಬಹುದೆ? ಎಂದಿಗೂ ಆಗದು ಮುಹಮ್ಮದ, ನೀನು ಇಂಥ ರಾಜದ್ರೋಹಿಯೆಂದು ನಾನು ತಿಳಿದಿರಲಿಲ್ಲ. ನೀನು ಮುಸಲ್ಮಾನ ಜಾತಿಗೆ ಸೇರಿದರೂ ನಿನ್ನ ಕಾಫರ ಬುದ್ಧಿಯನ್ನು ಬಿಡಲಾರೆ!

ಮುಹಮ್ಮದ:— ಖಾನಸಾಹೇಬ, ಸಿಟ್ಟು ಮಾಡಬೇಡಿರಿ. ನಾನು ರಾಜದ್ರೋಹವನ್ನೇನೂ ಮಾಡಲಿಲ್ಲ; ರಾಜದ್ರೋಹವನ್ನು ಬೋಧಿಸಲೂ ಇಲ್ಲ. ಯಾವ ರಾಜನು ಧರ್ಮ, ನ್ಯಾಯ, ಸತ್ಯಗಳನ್ನು ಗಣನೆಗೆ ತರುವುದಿಲ್ಲವೋ, ಯಾವ ರಾಜನು ತನ್ನಲ್ಲಿ ನಿಷ್ಠೆಯಿಂದಿರುವ ಜನರನ್ನು ದುಷ್ಟರ ಚಾಡಿ ಮಾತುಗಳನ್ನು ಕೇಳಿ ಅವಿಶ್ವಾಸಗಳಿಂದ ನೋಡುತ್ತಾನೋ, ಅಂಥ ಅವನ ರಾಜ್ಯವು ಚಿರಕಾಲ ಬಾಳದು. ಅಂಥ ರಾಜ್ಯವನ್ನು ಬಿಟ್ಟು ಅಗಲುವುದೇ ಒಳ್ಳೆಯದು. ನೀವೇ ನೋಡಿರಿ. ನೀವು ಇನ್ನಿಲ್ಲಿದ್ದರೆ ನಿಮ್ಮ ಪ್ರಾಣ-ಮಾನಗಳಿಗೆ ಹಾನಿ ನೀವು ಕೊಡಗಿಗೆ ಹೋದರೆ ನಿಮಗೆ ಧನ, ಮಾನ, ಪ್ರಾಣಗಳಿಗೆ ಕೊರತೆಯಿಲ್ಲ. ವೀರರಾಜರನ್ನಾದರೂ ನಮ್ಮ ಸುಲ್ತಾನರು ಅನ್ಯಾಯದಿಂದ ಸೆರೆಯಲ್ಲಿಟ್ಟಿಲ್ಲವೆ? ನೀವು ವೀರರಾಜರಿಗೆ ಸಹಾಯ ಮಾಡಿದರೆ ನ್ಯಾಯಕ್ಕೊತ್ತಾಸೆ ಕೊಟ್ಟಂತಾಗುತ್ತದೆ. ಅಂತೂ ಸುಲ್ತಾನರ ರಾಜ್ಯದಲ್ಲಿದ್ದರೆ ನಿಮ್ಮ

ಪರಿಣಾಮವು ನೆಟ್ಟಗಾಗಲಿಕ್ಕಿಲ್ಲವೆಂದು ನಾನು ಖಂಡಿತವಾಗಿ ಹೇಳಬಲ್ಲೆನು. ಇನ್ನು ನಿಮಗೆ ಆಧಾರವೇನಾದರೂ ಬೇಕಾಗಿದ್ದರೆ, ಈ ಕಾಗದವನ್ನೋದಿ ನೋಡಿ, ಎಂದು ಮಡಿಚಿದ ಒಂದು ಕಾಗದವನ್ನು ಇಸ್ಮಾಯಿಲಖಾನನಿಗೆ ಕೊಟ್ಟನು. ಅದರಲ್ಲಿ ಹೀಗೆ ಬರೆದಿದ್ದಿತು:---

'ಸ್ನೇಹಿತ ಅಬ್ದುಲ್ಲನಿಗೆ, ಜಾಫರನ ಸಲಾಮುಗಳು. ನಾನು ಅಲ್ಲಾನ ದಯೆಯಿಂದ ಕ್ಷೇಮವಾಗಿದ್ದೇನೆ. ನಾನು ನಿನಗೆ ಒಂದು ಸಂತೋಷದ ಸುದ್ದಿಯನ್ನು ತಿಳುಹಿಸಬೇಕೆಂದಿದ್ದೇನೆ. ಸುಲ್ತಾನರು ನನ್ನ ಮೇಲೆ ಬಹಳ ದಯೆಯಿಂದಿದ್ದಾರೆ. ನನ್ನನ್ನು ಪಟ್ಟಣಕ್ಕೆ ಕರೆಯಿಸಿ ತಮ್ಮ ಅರಮನೆಯಲ್ಲಿಯೇ ಒಂದು ದೊಡ್ಡ ಉದ್ಯೋಗವನ್ನು ಕೊಡುತ್ತಾರೆ. ಅದಕ್ಕೆ ಮೊದಲೇ ಇಲ್ಲಿನ ಉಕ್ಕಡದ ಪಹರೆದಾರ ಇಸ್ಮಾಯಿಲನ ಮೇಲೆ ಸುಲ್ತಾನರ ಕೋಪ ಬೀಳುವಂತೆ ಮಾಡಿ, ಅವನನ್ನು ಸೆರೆಯಲ್ಲಿರಿಸಿ, ನಾನು ಅವನ ಮಗಳನ್ನು ನಿಕಾ ಮಾಡಿಕೊಳ್ಳುತ್ತೇನೆ. ಆ ಬೀಬಿಯು ಸುರತ್ ಎಷ್ಟು ಚಂದಾಗಿರುವದು! ನನ್ನ ಕೆಲಸವು ಮುಕ್ಕಾಲು ಪಾಲು ಆಗಿದೆ. ಇನ್ನು ಒಂದು ವಾರದೊಳಗೆಲ್ಲ ಸಫಲವಾಗುತ್ತದೆ ಈ ವಿಷಯವು ಗುಟ್ಟಾಗಿರಲಿ. ಬಾಕಿ ರೂಬ ರೂಬ. ಸಲಾಂ.

ತಮ್ಮ,

ಜಾಫರಖಾನ.'

ಈ ಕಾಗದವನ್ನೋದಿ ನೋಡಿ, ಇಸ್ಮಾಯಿಲಖಾನನಿಗೆ ಬಹಳ ಸಿಟ್ಟೂ ಭಯವೂ ಉಂಟಾದವು. ಆಗ ಆತನು ಮಹಮ್ಮದನನ್ನು ನೋಡಿ:--'ಮಹಮ್ಮದ, ನೀನು ಹೇಳಿದುದು ನಿಜವೆಂದು ತೋರುತ್ತಲಿದೆ. ಇಲ್ಲಿದ್ದರೆ ನನಗೆ ಒಳ್ಳೆಯದಾಗುವುದಿಲ್ಲ. ಇಂಥ ಸುಲ್ತಾನನ ಅಡಿಯಲ್ಲಿರುವದು ನನಗೆ ಬೇಡ. ನೀನು ಹೇಗೆ ಹೇಳುವೆಯೋ ಹಾಗೆಯೇ ನಡೆದುಕೊಳ್ಳುವೆನು; ಆದರೆ ಈಗ ನನ್ನ ಹೆಂಡತಿ-ಮಕ್ಕಳನ್ನು ಹೇಗೆ ಕರೆದುಕೊಂಡು ಹೋಗಲಿ?'

ಮಹಮ್ಮದ:—ನಿಮ್ಮ ಹೆಂಡತಿ-ಮಕ್ಕಳ ಆಲೋಚನೆಯನ್ನು ಬಿಟ್ಟು, ನೀವು ಕೊಡಗಿಗೆ ತಲುಪಿ ಅಲ್ಲಿ ನ್ಯಾಯವಾದ ಒಂದು ನಿವಾಸಸ್ಥಳ ನೋಡಿಕೊಳ್ಳಿರಿ. ಅಷ್ಟರವರೆಗೆ ಯಾರಿಗೂ ತಿಳಿಯದಂತೆ ಅವರನ್ನು ಕಾಪಾಡುವ ಭಾರವು ನನ್ನದು. ನೀವು ವೀರರಾಜರೊಡನೆ ಕೊಡಗಿಗೆ ಹೋದರೆ, ಅಲ್ಲಿ ನಿಮ್ಮ ಯೋಗಕ್ಷೇಮವನ್ನು ಅವರೇ ನೋಡಿಕೊಳ್ಳುವರು ನಿಮಗೆ ಬೇಕಾದಷ್ಟು ಹಣವನ್ನೂ ಭೂಮಿಯನ್ನೂ ಕೊಡುವರು

ಇಸ್ಮಾಯಿಲ್ ಖಾನನು:—ಮುಹಮ್ಮದ. ವೀರರಾಜರು ಪೆರಿಯಾಪಟ್ಟಣದ ಕೋಟೆಯಿಂದ ತಪ್ಪಿಸಿಕೊಳ್ಳುವುದಾದರೂ ಹೇಗೆ? ಅಲ್ಲಿ ಪಹರೆಯವರಿಲ್ಲವೆ? ಹೊಂಬಾಳೆ ನಾಯಕರು ವೀರರಾಜರಿಗೆ ತಪ್ಪಿಸಿಕೊಂಡು ಹೋಗುವದಕ್ಕೆ ಬಿಡುವರೇ?

ಮುಹಮ್ಮದ:— ನಾವು ಅದರ ಏರ್ಪಾಡು ಮಾಡಿದ್ದೇವೆ. ಸುಲ್ತಾನರ ವರ್ತನೆಯು ಅನೇಕರಿಗೆ ಅಸಹ್ಯವನ್ನೂ ಜಿಗುಪ್ಸೆಯನ್ನೂ ಉಂಟು ಮಾಡಿರುತ್ತವೆ. ಆದ್ದರಿಂದ ವೀರರಾಜರ ಧೈರ್ಯ-ಸ್ಥೈರ್ಯಗಳಿಗೂ ಉದಾರ ಗುಣ ಮತ್ತು ಸರಳ ಸ್ವಭಾವಗಳಿಗೂ ಮೆಚ್ಚಿದವರು ಹೇಗಾದರೂ ಮಾಡಿ ಅವರನ್ನು ಅನ್ಯಾಯದ ಸೆರೆಯಿಂದ ಬಿಡಿಸಬೇಕೆಂದು ಆತುರದಲ್ಲಿರುವರು.

ಇಸ್ಮಾಯಿಲ್ ಖಾನ್:-- ಮುಹಮ್ಮದ್, ಹೊಂಬಾಳೆ ನಾಯಕರು ವೀರರಾಜರಿಗೆ ಸಹಾಯಕರಾಗಿರುವರೇ?

ಮುಹಮ್ಮದ: —ಹೊಂಬಾಳೆ ನಾಯಕರು ವೀರರಾಜರಿಗೆ ಸಹಾಯಕರಾಗಿರುವದರಿಂದಲೇ ಅವರಿಗೆ ಈಗ ಸೆರೆಯಿಂದ ಬಿಡಿಸಿಕೊಂಡು ಹೋಗುವದಕ್ಕೆ ಸಾಧ್ಯವಾಗಿರುವದು. ನಿಮ್ಮ ಸಹಾಯವು ಸಿಕ್ಕಿದರೆ ಕೊಡಗಿನ ಗಡಿಯವರೆಗೆ ಯಾವ ಕಷ್ಟವೂ ಇಲ್ಲ.

ಇಸ್ಮಾಯಿಲ್ ಖಾನ್:--ಅವರು ಕೋಟೆಯ ಬಾಗಿಲನ್ನು ಹೇಗೆ ದಾಟಿ ಬರುವರು? ಅವರು ಹೆಂಡತಿ ಮತ್ತು ಪರಿವಾರ ಸಹಿತವಾಗಿ ಬರುವರೇ?

ಮುಹಮ್ಮದ:—ಅದರ ಏರ್ಪಾಡನ್ನೆಲ್ಲ ನಾವು ಮಾಡುತ್ತಿದ್ದೇವೆ. ಅವರನ್ನು ನಾಡದು ರಾತ್ರಿ ಕೋಟೆಯಿಂದ ಹೊರದಾಟಿಸಿ ಕರೆದುಕೊಂಡು ಬರುತ್ತೇವೆ. ಆಗ ನೀವೂ ಹೊರಟು ಸಿದ್ಧರಾಗಿರಿ. ಹೆಂಡತಿ-ಮಕ್ಕಳನ್ನು ನನ್ನ ಹೆಂಡತಿಯ ತಾಯಿಯ ಮನೆಯಲ್ಲಿ ಸುರಕ್ಷಿತವಾಗಿರುವಂತೆ ಕಳುಹಿಸುತ್ತೇನೆ.

ಇಸ್ಮಾಯಿಲ್ ಖಾನ್:—ನೀನೂ ನಮ್ಮ ಜೊತೆಯಲ್ಲಿ ಬರುವದಿಲ್ಲವೆ?

ಮುಹಮ್ಮದ:—ನಾನು ಈಗಲೇ ಬರುವದಿಲ್ಲ. ಇಲ್ಲಿನ ಸಂದರ್ಭಗಳನ್ನು ತಿಳಿದುಕೊಂಡು ಕೆಲವು ದಿವಸಗಳ ನಂತರ ಬರುವೆನು. ತೆಗೆದುಕೊಳ್ಳಿರಿ—ವೀರರಾಜರು ಹಾಕಿಕೊಳ್ಳುತ್ತಿದ್ದ ಚಿನ್ನದ ಸರವನ್ನು ಅವರು ನಿಮಗೆ ಬಹುಮಾನವಾಗಿ ಕೊಟ್ಟು ಕಳುಹಿಸಿದ್ದಾರೆ.

ಇಸ್ಮಾಯಿಲ್ ಖಾನ್:—ಅವರಿಗೆ ನನ್ನ ಸಲಾಮುಗಳನ್ನು ಹೇಳು ಇಲ್ಲಿಂದ ವೀರರಾಜರು ಕೊಡಗಿಗೆ ಹೋಗುವದಕ್ಕೆ ಸಹಾಯ ಮಾಡುವದೂ

ನಾನು ಹೋಗುವದೂ ನನಗೆ ಬಹಳ ಕೆಟ್ಟ ಕೆಲಸವಾಗಿ ಕಾಣುತ್ತದೆ.

ಮಹಮ್ಮದ:-ಖಾನ್ ಸಾಹೇಬ, ಏನೂ ಬೇಸರ ಮಾಡಬೇಡಿರಿ. ಇದೆಲ್ಲ ನಾವು ಯೋಜನೆ ಮಾಡಿಕೊಂಡ ಹಾಗೆ ಹಾಗಾದರೆ ಈ ಸುಲ್ತಾನರು ಮೈಸೂರಿಗೆ ನ್ಯಾಯವಾದ ಅರಸರೇ? ದೊಡ್ಡ ನವಾಬರು ಹಿಂದೂರಾಜರನ್ನು ಮೂಲೆಯಲ್ಲಿ ಕೂರಿಸಿ, ತಾವು ರಾಜ್ಯವನ್ನಪಹರಿಸಲಿಲ್ಲವೇ? ಈಗ ಈ ಸುಲ್ತಾನರು ಧರ್ಮದಿಂದ ರಾಜ್ಯವಾಳುವರೇ? ಆದುದರಿಂದ ಯಾವ ಯೋಚನೆಯನ್ನೂ ಮಾಡದೆ ನಾನೆಂದಂತೆ ಮಾಡಿರಿ

ಇಸ್ಮಾಯಿಲ್ ಖಾನ್: —ಹಾಗೆಯೇ ಆಗಲಿ. ಈ ವಿಷಯವನ್ನು ಯಾರಿಗೂ ಹೇಳಬೇಡ. ನಾಳೆ ನನಗೆ ಎಲ್ಲ ಏರ್ಪಾಡುಗಳನ್ನು ಹೇಳು

ಮಹಮ್ಮದ:—ಆಗಲಿ, ಈಗ ನಾನು ಹೋಗಿಬರುತ್ತೇನೆ ಸಲಾಂ, ಎಂದು ಹೇಳಿ ಹೋಗುತ್ತ ದಾರಿಯಲ್ಲಿ ತನ್ನ ಮನಸಿನೊಳಗೆ "ಅಂತೂ ಖಾನ್ ಸಾಹೇಬನಿಗೆ ಸ್ವಲ್ಪ ಬೆದರಿಕೆಯನ್ನೂ ಸ್ವಲ್ಪ ಆಶೆಯನ್ನೂ ತೋರಿಸಿ ಆತನನ್ನು ನಮ್ಮವನಾಗಿ ಮಾಡಿಕೊಂಡಂತಾಯಿತು. ಆ ಕಾಗದವನ್ನು ನಾನು ಸೃಷ್ಟನೆ ಮಾಡದೆ ಹೋಗಿದ್ದರೆ, ಆತನು ನನ್ನ ಮಾತುಗಳನ್ನು ಅಷ್ಟು ಸುಲಭದಲ್ಲಿ ನಂಬುತ್ತಿರಲಿಲ್ಲ ಹೇಗೂ ನಮ್ಮ ರಾಜರ ಸೆರೆಯನ್ನು ಬಿಡಿಸುವದಕ್ಕೆ ಯಾವ ಉಪಾಯವನ್ನಾದರೂ ನಾವು ಮಾಡಿ ನಮ್ಮ ಕೆಲಸವನ್ನು ಸಾಧಿಸಲೇಬೇಕು. ನಮ್ಮ ಪ್ರಯತ್ನದಲ್ಲಿ ಇನ್ನೊಬ್ಬರಿಗೆ ಕೆಡಕಾಗದಿದ್ದರೆ ಯಾವ ಉಪಾಯವನ್ನಾದರೂ ನಾವು ಅನುಸರಿಸಬಹುದು" ಎಂದು ಆಲೋಚಿಸುತ್ತ ಮನಸ್ಸಿನಲ್ಲಿಯೇ ಹಿಗ್ಗಿ ವೀರರಾಜನ ಮನೆಯ ಕಡೆಗೆ ನಡೆದನು.

## ದಳ :: ೧೬

ಕ್ರಿ. ಶ. ೧೭೮೮ನೇ ಡಿಸೆಂಬರ ತಿಂಗಳ ಹದಿನಾಲ್ಕನೆಯು ತಾರೀಖು ಕೃಷ್ಣಪಕ್ಷದ ಸಪ್ತಮಿಯು ದಿವಸ ರಾತ್ರಿ. ವೀರರಾಜನೂ ಅವನ ಪರಿವಾರದವರೂ ಆ ರಾತ್ರಿ ಕೋಟೆಯಿಂದ ತಪ್ಪಿಸಿಕೊಂಡು ಹೋಗುವದಕ್ಕೆ ನಿಶ್ಚಯಿಸಿದ್ದರು. ಕೋಟೆಯು ಹೆಬ್ಬಾಗಿಲಿನ ಮೂಲಕ ಪಾರಾಗಿ ಹೋಗುವ ಹಾಗಿರಲಿಲ್ಲ. ಅಲ್ಲಿ ನಾಲ್ಕು ಜನ ಮುಸಲ್ಮಾನ ಶಿಪಾಯಿಗಳು ಪಹರೆ ಮಾಡುತ್ತಿದ್ದರು. ಆದುದರಿಂದ ಕೋಟೆಯು ಗೋಡೆಯನ್ನು ಹತ್ತಿ ದಾಟಿ ಹೋಗುವದಕ್ಕೆ ಬೇಕಾದ ಸಾಮುಗ್ರಿಗಳನ್ನು ವೀರರಾಜನ ಸೇವಕರಾದ ಮಲ್ಲಪ್ಪ ಮತ್ತು ಬಸಪ್ಪ ಇವರು ಜೊತೆಗೂಡಿಸಿದ್ದರು.

ಆ ರಾತ್ರಿ ವೀರರಾಜನು ತನ್ನ ಮನೆಯಲ್ಲಿ ಪಹರೆಯವರಿಗೆ ಔತನದ ಊಟ ಮಾಡಿಸಿದ್ದನು. ಊಟದ ನಂತರ ಅಮಲೇರುವ ಪದಾರ್ಥವನ್ನು ಮದ್ಯದಲ್ಲಿ ಹಾಕಿ ಅವರಿಗೆ ಬೇಕಾದಷ್ಟು ಕುಡಿಸಿದನು ಇದರಿಂದ ಅವರಿಗೆ ಬೇಗನೆ ನಿದ್ದೆ ಹತ್ತಿ ಅವರು ಗೊರಕೆ ಹೊಡೆಯಹತ್ತಿದರು ಇದಕ್ಕೆ ಮೊದಲೇ ಹೊಂಬಾಳೆ ನಾಯಕನು ಕೋಟೆಯು ಪಶ್ಚಿಮ ಭಾಗದಲ್ಲಿ ಒಂದು ಕರಿನೂಲಿನ ಹಗ್ಗದಿಂದ ಏಣಿಯನ್ನು ಮಾಡಿ ಅದರ ಒಂದು ತುದಿಯನ್ನು ಕೋಟೆಯು ಹೊರಗಿನ ಗೋಡೆಯು ಕೆಳಗಡೆ ಒಂದು ಬಂಡೆಕಲ್ಲಿಗೆ ಬಿಗಿಯಾಗಿ ಕಟ್ಟಿದ್ದನು. ಇದರ ಇನ್ನೊಂದು ತುದಿಯನ್ನು ಒಳಭಾಗದಲ್ಲಿ ಗೋಡೆಯು ಕೆಳಬದಿಯಲ್ಲಿ ಒಂದು ಗೂಟವನ್ನು ನೆಟ್ಟು ಸಿಕ್ಕಿಸಿದ್ದನು. ಕೋಟೆಯು ಹೊರಭಾಗದಲ್ಲಿ ಮುಹಮ್ಮದನು ನೀರು ತುಂಬುವ ಅಗಲ ಬಾಯುಳ್ಳ ಎರಡು ತಾಮ್ರದ ಹಂಡೆಗಳನ್ನು ತಂದು ಕಾದಿದ್ದನು.

ಆಗ ಮಾಗಿಯು ಕಾಲವಾಗಿದ್ದರಿಂದ ಬಹಳ ಛಳಿಯಾಗಿದ್ದಿತು. ಆದ್ದರಿಂದ ರಾತ್ರಿಯಲ್ಲಿ ಯಾರೂ ಮನೆಯು ಹೊರ ಹೊರಡುತ್ತಿರಲಿಲ್ಲ. ಅದರಲ್ಲೂ ವೀರರಾಜನು ಹೊರಡಬೇಕೆಂದು ನಿಶ್ಚಯಿಸಿದ್ದು ಕೃಷ್ಣಪಕ್ಷದಲ್ಲಿ. ಆಗ ಮಧ್ಯರಾತ್ರಿಯು ಕಾಲವಾಗಿತ್ತು. ಇಂಥ ಸಮಯದಲ್ಲಿ ಯಾರು ತಾನೆ ಹೊರಬಿದ್ದಾರು? ಆದರೂ ಒಂದು ವ್ಯಕ್ತಿಯು ಈ ಸಮಯದಲ್ಲಿ ಹೊರಗೆ ಸುಳಿದಾಡುತ್ತಿದ್ದಿತು. ಆ ವ್ಯಕ್ತಿಯೇ ನಮ್ಮ ಪೂರ್ವಪರಿಚಿತನಾದ ಗುಲಾಮಲ್ಲಿಯು. ಆತನಿಗೆ ಮುಹಮ್ಮದನು ವೀರರಾಜರ ಮನೆಗೆ ಹೋಗುವುದೂ, ಹೊಂಬಾಳೆ ನಾಯಕನೊಡನೆಯೂ ಮಲ್ಲಪ್ಪ ಮತ್ತು ಬಸಪ್ಪರೊಡನೆ

ಯೂ ಬಹಳ ವ್ಯತ್ರಿಯಿಂದಿರುವದೂ ತಿಳಿದಿತ್ತು. ಅವನಿಗೆ ಇವರಲ್ಲಿ ಏನೋ ರಹಸ್ಯವಿರಬಹುದೆಂಬ ಅನುಮಾನವು ಹುಟ್ಟಿತು. ಮಹಮ್ಮದನು ಮುಸಲ್ಮಾನ ಜಾತಿಗೆ ಬಲಾತ್ಕಾರದಿಂದ ಸೇರಿಸಲ್ಪಟ್ಟ ಕೊಡಗನೆಂದು ಆತನಿಗೆ ತಿಳಿದಿತ್ತು. ಆದುದರಿಂದ ಒಂದಲ್ಲ ಒಂದು ದಿವಸ ಇವರೆಲ್ಲರ ಒಳಸಂಚನ್ನು ಕಂಡು ಹಿಡಿದು ತಾನು ತನ್ನ ಯಜಮಾನನ ಮತ್ತು ಸುಲ್ತಾನನ ದಯೆಯನ್ನು ಸಂಪಾದಿಸಬೇಕೆಂದಿದ್ದಿತು. ದೈವವಶಾತ್ ಈ ಸಪ್ತಮಿ ದಿವಸದ ರಾತ್ರಿ ಆತನಿಗೆ ನಿದ್ರೆಯೇ ಹತ್ತಿರಲಿಲ್ಲ. ಆತನು ತನ್ನ ಹಾಸಿಗೆಯಲ್ಲಿ ಹೊರಳಾಡಿ ಸಾಕಾಗಿ, ರಾತ್ರಿ ಹನ್ನೊಂದು ಗಂಟೆಯ ವೇಳೆಗೆ ಒಂದು ಸಾರಿ ಪೇಟೆಯ ಕಡೆಗೆ ಹೋಗಿ ಬರುವೆನೆಂದು ಹೊರಟನು. ಬರುವಾಗ ವೀರರಾಜನ ಮನೆಯಲ್ಲಿ ಒಂದು ಚಿಕ್ಕ ಬೆಳಕನ್ನು ಕಂಡನು. ಅಲ್ಲೇ ಮರೆಯಾಗಿ ಸ್ವಲ್ಪ ಹೊತ್ತು ನಿಂತುಕೊಂಡು ವೀರರಾಜನ ಮನೆಯ ಕಡೆಗೆ ನೋಡುತ್ತಿರುವಾಗ, ಕೆಲವು ಜನರು ಪಿಸಿಪಿಸಿ ಮಾತನಾಡುವದೂ ಅನಂತರ ಕೋಟೆಯ ಪಶ್ಚಿಮ ಭಾಗದ ಗೋಡೆಯ ಕಡೆಗೆ ಹೋಗುವದೂ ಇವನಿಗೆ ಮಸಕು ಮಸಕಾಗಿ ಕಂಡು ಬಂತು. ತಾನು ಕಾಯುತ್ತಿದ್ದ ಸಂದರ್ಭವು ಸಿಕ್ಕಿತು; ತಾನು ವೀರರಾಜನು ಓಡಿಹೋಗುವದನ್ನು ಅಡ್ಡಿಮಾಡಿ ಸುಲ್ತಾನನ ದಯೆಗೆ ಪಾತ್ರನಾಗುವೆನು; ತನಗೆ ಒಂದು ದೊಡ್ಡ ಉದ್ಯೋಗವು ಸಿಕ್ಕುವುದು, ಎಂದು ಆತನು ಹಿಗ್ಗಿದನು. ಹಾಗೆಯೇ ಆತನು ವೀರರಾಜನ ಪರಿವಾರದವರ ಹಿಂದೆ ಅವರಿಗೆ ತಿಳಿಯದಂತೆ ನಡೆದನು.

ವೀರರಾಜನೂ ಅವನ ಪರಿವಾರದವರೂ ಹೊಂಬಾಳೆ ನಾಯಕನೂ ಕೋಟೆಯ ಪಶ್ಚಿಮ ದಿಕ್ಕಿನ ಗೋಡೆಯ ಬುಡಕ್ಕೆ ಬಂದರು. ವೀರರಾಜನ ಪರಿವಾರದವರೆಂದರೆ ವೀರರಾಜನ ಪತ್ನಿ ನಂಜಮ್ಮಾಜಿ, ಆತನ ಒಂದು ವರುಷದ ಹೆಣ್ಣುಮಗು ರಾಜಮ್ಮಾಜಿ ಮತ್ತು ಆತನ ತಮ್ಮಂದಿರು ಅಪ್ಪಾಜಿರಾಜ ಮತ್ತು ಲಿಂಗರಾಜ ಮತ್ತು ಆತನ ಕೆಲಸದವರಾಗಿ ಸೇರಿಕೊಂಡಿದ್ದ ಇಬ್ಬರು ಕೊಡಗರು ಕೋಟೆಯ ಪಶ್ಚಿಮ ಭಾಗದಲ್ಲಿ ಮನೆಗಳು ಇರಲಿಲ್ಲ. ಕೋಟೆಯ ಹೊರಭಾಗವು ಕಾಡಿನಿಂದ ತುಂಬಿತ್ತು. ಅಲ್ಲಿ ಯಾರೂ ಪಹರೆಯವರಿರಲಿಲ್ಲ; ಮತ್ತು ಆ ಸಮಯವು ಯುದ್ಧಸಮಯವಲ್ಲದ್ದರಿಂದ ಇದ್ದ ಪಹರೆಯವರೂ ತಮ್ಮ ತಮ್ಮ ಸ್ಥಳಗಳಲ್ಲಿ ನಿಶ್ಚಿಂತೆಯಿಂದ ಗೊರಕೆ ಹೊಡೆಯುತ್ತಿದ್ದರು. ಆ ಭಾಗದ ಗೋಡೆಯು ವಿಶೇಷ ಎತ್ತರವೂ ದಪ್ಪವೂ ಆಗಿರಲಿಲ್ಲ. ಹೊಂಬಾಳೆ

ನಾಯಕನೂ ಮುಚ್ಚಂಜೆಯಲ್ಲಿಯೇ ಕರಿನೂಲಿನ ಹಗ್ಗದ ಏಣಿಯೊಂದನ್ನು ಕೋಟೆಯ ಗೋಡೆಯ ಒಳಭಾಗದಿಂದ ಹೊರಭಾಗದ ವರೆಗೆ ಕಟ್ಟಿದ್ದನೆಂದು ಹಿಂದೆ ಹೇಳಿದ್ದೆವಷ್ಟೆ? ವೀರರಾಜನು ಒಳ್ಳೇ ಶಕ್ತಿವಂತನಾಗಿದ್ದನು ಅವನು ತನ್ನ ಹೆಂಡತಿಯನ್ನು ತನ್ನ ಬೆನ್ನ ಮೇಲೆ ಹೊತ್ತುಕೊಂಡು ಕೋಟೆಯ ಗೋಡೆಯನ್ನು ದಾಟಿದನು ಅಪ್ಪಾಜಿಯು ವೀರರಾಜನ ಚಿಕ್ಕ ಮಗುವನ್ನು ಎತ್ತಿಕೊಂಡು ಅವನ ಹಿಂದೆಯೇ ಬಂದನು ಇದನ್ನೆಲ್ಲ ಗುಲಾಮಲ್ಲಿಯು ನೋಡುತ್ತಿದ್ದನು: ಆದರೆ ಆ ಮುಸಮುಸಕಾದ ಬೆಳಕಿನಲ್ಲಿ ಅವನಿಗೆ ಆ ಜನರ ಗುರತು ಸಿಕ್ಕಲಿಲ್ಲ. ಆತನು ವೀರರಾಜನೂ ಆತನ ತಮ್ಮ ಅಪ್ಪಾಜಿಯೂ ದಾಟಿ ಹೋದ ಸಮಯಕ್ಕೆ ಸರಿಯಾಗಿ ಮಲ್ಲಪ್ಪ ಮತ್ತು ಬಸಪ್ಪನ ಹಿಂದೆ ಮೆಲ್ಲನೆ ಬಂದನು. ಮಲ್ಲಪ್ಪನಿಗೆ ತನ್ನ ಹಿಂದೆ ಯಾರೋ ನಡೆದ ಶಬ್ದವು ಕೇಳಿ ಬರಲು ಆತನು ತನ್ನ ಹಿಂದೆ ಬರುವವರಿಗೆ ಸಂಶಯವು ಸಿಕ್ಕದಂತೆ ಕುತ್ತಿಗೆಯನ್ನು ತಿರುಗಿಸಿ ಹಿಂದೆ ನೋಡಿದನು. ಆಗ ಅವನಿಗೆ ಯಾರೋ ಶತ್ರುವು ತಮ್ಮ ಹಂಚಿಕೆಯನ್ನು ತಿಳಿದು ತಮಗೆ ಅಡ್ಡಿ ಮಾಡುವದಕ್ಕೆ ಬಂದಿರುವನು, ಎಂದು ತಿಳಿಯಿತು ಆದ್ದರಿಂದ ಜಾಗರೂಕನಾಗಿ ಅವನು ಆ ಹೊಸಬನ ಕಡೆಯೇ ದೃಷ್ಟಿಯನ್ನಿಟ್ಟುಕೊಂಡಿದ್ದನು ಗುಲಾಮಲ್ಲಿಗೆ ತನ್ನ ಮೇಲೆ ಮಲ್ಲಪ್ಪನು ಸಂಶಯಪಟ್ಟದ್ದು ತಿಳಿಯಲಿಲ್ಲ

ಆತನು ಒಂದು ಕರಿ ದುಬಟಿಯನ್ನು ಹೊದ್ದಿದ್ದನು. ವೀರರಾಜನೂ ಅಪ್ಪಾಜಿಯೂ ದಾಟಿಹೋದದ್ದನ್ನು ನೋಡಿ ಇತರರು ಹೋಗದಂತೆ ತಡೆ ಮಾಡಿ, ಅನಂತರ ಬೊಬ್ಬೆ ಹೊಡೆದು ಪಹರೆಯವರನ್ನು ಎಬ್ಬಿಸಬೇಕೆಂದು ಆತನು ಯೋಚಿಸಿದನು ಅದಕ್ಕೋಸ್ಕರ ಅವರು ಹತ್ತಿಹೋಗುತ್ತಿದ್ದ ಕರಿ ನೂಲಿನ ಏಣಿಯನ್ನು ಚೂರಿಯಿಂದ ಕತ್ತರಿಸಬೇಕೆಂದು ಆತನು ವೀರರಾಜರ ಪರಿವಾರದವರ ಹಾಗೆಯೇ ಮುಂದೆ ಮುಂದೆ ನುಗ್ಗಿ ಆ ಏಣಿಯ ಹತ್ತಿರ ಬಂದನು. ಇನ್ನೇನು ಹತ್ತುವವರ ಹಾಗೆ ನಟಿಸಿ, ಅದನ್ನು ತನ್ನ ಕೈಯಲ್ಲಿದ್ದ ಚೂರಿಯಿಂದ ಕತ್ತರಿಸಬೇಕೆನ್ನುವಷ್ಟರಲ್ಲಿ ಮಲ್ಲಪ್ಪನು ಹಿಂದಿನಿಂದ ಹಾರಿ ಗುಲಾಮಲ್ಲಿಯನ್ನು ಬಿಗಿಯಾಗಿ ಹಿಡಿದನು. ಗುಲಾಮಲ್ಲಿಯ ಬಾಯಿಯಿಂದ ಯಾವ ಶಬ್ದವೂ ಹೊರಬೀಳುವ ಮೊದಲೇ ಮಲ್ಲಪ್ಪನ ಜೊತೆಗಾರ ಬಸಪ್ಪನು ಗುಲಾಮಲ್ಲಿಯ ಬಾಯಿಗೆ ಒಟ್ಟೆಯನ್ನು ತುರುಕಿ ಅವನ ಕೈಕಾಲುಗಳನ್ನು ಕಟ್ಟಿದನು. ಅಷ್ಟರಲ್ಲಿ ಕೋಬಾಳೆ ನಾಯಕ ಮತ್ತು ಇತರರಿಗೆ ತಾವು ಎಂಥ

ಅಪಾಯದಲ್ಲಿ ಸಿಕ್ಕಿಬಿದ್ದಿದ್ದೆವು, ಎಂದು ತಿಳಿಯಿತು. ಗುಲಾಮಲ್ಲಿಯನ್ನು ಅಲ್ಲಿಯೇ ಬಿಟ್ಟರೆ ತನಗೆ ಹೆಚ್ಚಿನ ಅಪಾಯವು ಒದಗಬಹುದೆಂದು ಅವರು ಅವನನ್ನು ಹೊತ್ತುಕೊಂಡು ಕೋಟೆಯ ಹೊರಭಾಗಕ್ಕೆ ಒಯ್ದರು. ಲಿಂಗರಾಜನು ಹತ್ತು ವರ್ಷಪ್ರಾಯದ ಚಿಕ್ಕ ಹುಡುಗನಾದ್ದರಿಂದ ಹೊಂಬಾಳೆ ನಾಯಕನು ಅವನನ್ನು ಎತ್ತಿಕೊಂಡೇ ಗೋಡೆಯನ್ನು ದಾಟಿದನು. ಗೋಡೆಯ ಹೊರಗೆ ಮಹಮ್ಮದನು ನೀರು ತುಂಬುವ ಅಗಲ ಬಾಯುಳ್ಳ, ಎರಡು ದೊಡ್ಡ ತಾಂಬ್ರದ ಹಂಡೆಗಳನ್ನು ತಂದು ಕಾದಿದ್ದನು, ಕೋಟೆಯ ಹೊರಗೆ ಕಾಲಿಟ್ಟೊಡನೆ ವೀರರಾಜನೂ ಆತನ ಹೆಂಡತಿ ನಂಜಮ್ಮಾಜಿಯೂ ಒಂದೊಂದು ಹಂಡೆಯಲ್ಲಿ ಕುಳಿತುಕೊಂಡರು. ಹೊಂಬಾಳೆ ನಾಯಕನೂ ಮಹಮ್ಮದನೂ ಆ ಕೊಡಗರಿಬ್ಬರೂ ಸರತಿ ಮೇರೆ ಒಂದೊಂದು ಹಂಡೆಯನ್ನು ಹೊತ್ತುಕೊಂಡು ವೇಗವಾಗಿ ನಡೆದರು. ವೀರರಾಜನ ಮಗುವು ನಿದ್ರಿಸುತ್ತಿತ್ತು. ಅದನ್ನೂ ಲಿಂಗರಾಜನನ್ನೂ ಇವರೇ ಎತ್ತಿಕೊಂಡಿದ್ದರು. ಇತಲಾಗಿ ಗುಲಾಮಲ್ಲಿಯ ಬಾಯಿಗೆ ಬಿಗಿಯಾಗಿ ಇನ್ನೂ ಬಟ್ಟೆಯನ್ನು ಇಟ್ಟು ಬಿಗಿದು ಅವನ ಕೈಕಾಲುಗಳನ್ನು ಕಟ್ಟಿ ಒಂದು ಮರಕ್ಕೆ ಕಟ್ಟಿ ಹೊರಟು ಹೋದರು. ಸ್ವಲ್ಪ ದೂರ ಹೋಗುತ್ತಲೇ ಇಸ್ಮಾಯಿಲ್ ಖಾನನ ಪಹರೆಯ ಉಕ್ಕಡವು ಸಿಕ್ಕಿತು. ಮಹಮ್ಮದನು ಈ ಮೊದಲೇ ಆತನಿಗೆ ವೀರರಾಜನು ತಪ್ಪಿಸಿಕೊಂಡು ಬರುವ ಹಂಚಿಕೆಯನ್ನು ತಿಳುಹಿಸಿದ್ದನು. ಅದ್ದರಿಂದ ಆತನು ತನ್ನ ಆಪ್ತ ನೌಕರರಾದ ಇಬ್ಬರನ್ನು ಮಾತ್ರ ಇಟ್ಟುಕೊಂಡು ಉಳಿದ ನೌಕರರನ್ನು ಪಟ್ಟಣಕ್ಕೆ ಕಳುಹಿಸಿದ್ದನು. ವೀರರಾಜನೂ ಅವನ ಜತೆಯವರೂ ಬಂದ ಕೂಡಲೆ ವೀರರಾಜನು ಹಂಡೆಯಿಂದಿಳಿದು ಇಸ್ಮಾಯಿಲ್ ಖಾನನನ್ನು ಆಲಂಗಿಸಿಕೊಂಡನು. ಮತ್ತು ಇಸ್ಮಾಯಿಲ್ ಖಾನನಿಗೆ ತನಗೆ ಸಹಾಯ ಮಾಡಬೇಕೆಂದೂ, ತಾನು ಅವನಿಗೆ ಜಹಗೀರನ್ನೂ, ದ್ರವ್ಯವನ್ನೂ, ಸೈನ್ಯಾಧಿಕಾರವನ್ನೂ ಕೊಡುವೆನೆಂದೂ ವಾಗ್ದಾನ ಮಾಡಿದನು. ಇಸ್ಮಾಯಿಲ್ ಖಾನನು ವೀರರಾಜನ ಮಾತುಗಳನ್ನು ಕೇಳಿ ಅದುವರೆಗೆ ತನ್ನ ಮನಸ್ಸಿನಲ್ಲಿದ್ದ ಸಂಕೋಚವನ್ನು ಮನಃಪೂರ್ತಿಯಾಗಿ ತೊರೆದು, ವೀರರಾಜನಿಗೆ ಸಹಾಯ ಮಾಡುವುದಾಗಿ ಒಪ್ಪಿಕೊಂಡನು. ಅನಂತರ ವೀರರಾಜನೂ ಇಸ್ಮಾಯಿಲ್ ಖಾನನೂ ಇತರರೂ ಅಲ್ಲಿಂದ ಹೊರಟು ಕಾಡು ದಾರಿಗಾಗಿ ನಡೆದರು. ಮಹಮ್ಮದನು ಮಾತ್ರ ತಾನು ಕೆಲವು ದಿವಸಗಳಲ್ಲಿ ಬರುವೆನೆಂದು ಹೇಳಿ ಹಿಂದಕ್ಕೆ ಹೋದನು.

ವೀರರಾಜನು ಆತನಿಗೆ ತನ್ನಲ್ಲಿದ್ದ ಸ್ವಲ್ಪ ಹಣವನ್ನು ಕೊಟ್ಟು ಬೇಗನೆ ಕೊಡಗಿಗೆ ಬರುವಂತೆ ಹೇಳಿದನು. ಇಸ್ಮಾಯಿಲ್‌ಖಾನನು ತನ್ನ ನೌಕರರಿಬ್ಬರಿಗೆ ತಾನು ಆ ರಾತ್ರಿ ಊರಿಗೆ ಹೋಗಿ ಎರಡು ದಿವಸಗಳಲ್ಲಿ ಹಿಂತಿರುಗುವೆನೆಂದು ಹೇಳಿದ್ದನು. ಆ ರಾತ್ರಿಹೊತ್ತಿನಲ್ಲಿ ವೀರರಾಜನು ಬರುವುದು ಅವರಿಗೆ ತಿಳಿಯಬಾರದೆಂದು ಅವರಿಗೆ ಸ್ವಲ್ಪ ಅಫೀಮು ಹಾಕಿ ಶರಾಬು ಕುಡಿಸಿದ್ದನು. ಆದ್ದರಿಂದ ವೀರರಾಜನು ತನ್ನ ಪರಿವಾರದವರೊಡನೆ ಬರುವಾಗ ಅವರು ಗಾಢನಿದ್ರೆಯಲ್ಲಿದ್ದರು.

ಆದರೆ ಇಸ್ಮಾಯಿಲ್‌ಖಾನನ ಉಕ್ಕಡವನ್ನು ದಾಟಿದ ಕೂಡಲೆ ಅಪ್ಪಾಜಿಯು ಎತ್ತಿಕೊಂಡಿದ್ದ ವೀರರಾಜನ ಮಗು ರಾಜಮ್ಮನಿಗೆ ಚಳಿಗಾಳಿಯು ಬೀಸಿ ಎಚ್ಚರಾಗಿ ಅದು ಗಟ್ಟಿಯಾಗಿ ಅಳತೊಡಗಿತು. ಆಗ ಅವರೆಲ್ಲರಿಗೂ ಬಹಳ ಗಾಬರಿಯಾಯಿತು. ಈ ಮಗುವಿನ ಅಳುವಿನಿಂದ ಮಲಗಿದ ಪಹರೆಯುವರಿಗೆ ಎಚ್ಚರವಾದರೆ ಅವರು ವೀರರಾಜನ ಕಡೆಯವರನ್ನು ತಡೆಯಬಹುದು; ಅಥವಾ ಬೇಗನೆ ಕೋಟೆಯ ಹೊರಬಾಗಿಲಿನ ಪಹರೆಯುವರಿಗೆ ತಿಳಿಸಿ ಅವರು ಓಡಿ ಬಂದು ಇವರನ್ನು ಹಿಡಿದರೆ ಇವರು ಇಷ್ಟರವರೆಗೆ ಮಾಡಿದ ಪ್ರಯತ್ನವು ನಿಷ್ಫಲ ಮತ್ತು ಮುಂದಿನ ಜೀವನಕ್ಕೆ ಸಂಚಕಾರ. ಸುಲ್ತಾನನು ವೀರರಾಜನನ್ನೂ ಅವನ ಕುಟುಂಬದವರನ್ನೂ ಬಹುಶಃ ಕೊಲ್ಲಿಸಬಹುದು; ಅಥವಾ ಕೊಡಗಿನಿಂದ ಬಹು ದೂರ ಎಲ್ಲಿಯಾದರೂ ಕಠಿಣವಾದ ಬಂಧನದಲ್ಲಿಡಬಹುದು. ಆತನಿಗೆ ಸಹಾಯ ಮಾಡಿದ ಹೊಂಬಾಳೆನಾಯಕ, ಇಸ್ಮಾಯಿಲ್‌ಖಾನ್ ಮತ್ತು ಮುಹಮ್ಮದ್ ಇವರಿಗಂತೂ ರಾಜದ್ರೋಹದ ಅಪಾದನೆಯ ಮೇಲೆ ಮರಣ ದಂಡನೆಯೇ ಸರಿ. ಆದುದರಿಂದ ಆಗ ಏನು ಮಾಡುವುದೆಂಬುದು ಅವರಿಗೆ ತಿಳಿಯಲಿಲ್ಲ. ವೀರರಾಜನೂ ನಂಜಮ್ಮಾಜಿಯೂ ಹಿಂಡೆಗಳಲ್ಲಿ ಕುಳಿತುಕೊಂಡಿದ್ದರಿಂದ ಅವರು ಮಗುವನ್ನು ಎತ್ತಿ ಸಮಾಧಾನ ಪಡಿಸುವ ಹಾಗೂ ಇರಲಿಲ್ಲ. ವೀರರಾಜನು ಈ ಸಂದಿಗ್ಧ ಪರಿಸ್ಥಿತಿಯನ್ನು ನೋಡಿ ಬೇರೆ ಯಾವ ಉಪಾಯವೂ ತೋಚದೆ, ಹೊಂಬಾಳೆ ನಾಯಕನಿಗೂ ಇಸ್ಮಾಯಿಲ್‌ಖಾನನಿಗೂ ಆ ಮಗುವನ್ನು ಕತ್ತಿಯಿಂದ ಕಡಿದು ಹಾಕಿರೆಂದು ಹೇಳಿದನು. ಹೊಂಬಾಳೆನಾಯಕನೂ ಇಸ್ಮಾಯಿಲ್‌ಖಾನನೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಆಗ ಹೊಂಬಾಳೆನಾಯಕನ ಮನಸ್ಸಿಗೆ ಏನೋ ಹೊಳೆಯಲು ಇಸ್ಮಾಯಿಲ್‌ಖಾನನ ಬಳಿಗೆ ಹೋಗಿ ಅವನ ಕಿವಿಯಲ್ಲಿ

ಏನನ್ನೋ ಹೇಳಿದನು. ಇಸ್ಮಾಯಿಲಖಾನನಿಗೆ ಸಮಾಧಾನವಾದ ಹಾಗೆ ಕಂಡ್ರು ಬಂತು. ಆತನಿಗೆ ಅಫೀಮು ತಿನ್ನುವ ಅಭ್ಯಾಸವಿತ್ತು. ಅವನು ತಾನು ಹೊತ್ತು ಕೊಂಡಿದ್ದ ಹಂಡೆಯನ್ನು ಕೊಡಗರಲ್ಲಿಯ ಒಬ್ಬನಿಗೆ ಹೊರಿಸಿ. ತಾನು ಮಗು ವನ್ನು ಎತ್ತಿಕೊಂಡು ಹಿಂದೆ ನಿಂತನು. ವೀರರಾಜನೂ ಇತರರೂ ಸ್ವಲ್ಪ ದೂರ ಹೋದ ಕೂಡಲೆ ಆ ಮಗುವಿಗೆ ಸ್ವಲ್ಪ ಅಫೀಮನ್ನು ತಿನ್ನಿಸಿ ಅದಕ್ಕೆ ಮಂಕು ಬರುತ್ತಲೇ ಒಂದು ಬಟ್ಟೆಯನ್ನು ಬಿಗಿದು ತನ್ನ ಬೆನ್ನಿಗೆ ಕಟ್ಟಿ ಅವ ರನ್ನು ಅನುಸರಿಸಿ ಮುಂದೆ ನಡೆದನು.

ಉಕ್ಕಡದಿಂದ ಎರಡು ಮೈಲು ದೂರದಲ್ಲಿ ಕೊಡಗಿಗೆ ಹೋಗುವ ಆಗಿನ ಕಾಲದ ಅಗಲ ಕಿರಿದಾದ ಮಾರ್ಗದ ಬಲಭಾಗದಲ್ಲಿ ಮರಗಳ ಮರೆಯಲ್ಲಿ ಪಲ್ಲಕ್ಕಿಗಳನ್ನು ತಂದಿಟ್ಟುಕೊಂಡು ಕಾದಿರುವುದಕ್ಕೆ ಕೆಲವು ಬೋಯಿಗಳನ್ನು ಹೊಂಬಾಳೆ ನಾಯಕನು ಈ ಮೊದಲೇ ಏರ್ಪಡಿಸಿದ್ದನು. ಹಾಗೆಯೇ ಅವರು ಅಲ್ಲಿ ಪಲ್ಲಕ್ಕಿಗಳನ್ನಿಟ್ಟುಕೊಂಡು ಕಾದು ಕುಳಿತಿದ್ದರು. ಅಲ್ಲಿ ವೀರರಾಜನೂ ನಂಜಮ್ಮಾಜಿಯೂ ಹಂಡೆಗಳಿಂದಿಳಿದು ಪಲ್ಲಕ್ಕಿಗಳನ್ನೇರಿದರು. ಲಿಂಗರಾಜ ನು ನಂಜಮ್ಮಾಜಿಯೊಡನೆ ಕುಳಿತುಕೊಂಡನು. ಪಲ್ಲಕ್ಕಿಗಳನ್ನು ಹೊತ್ತು ಕೊಂಡು ಬೋಯಿಗಳು ಆ ಕಾಡಿನಲ್ಲಿದ್ದ ಒಂದು ಕಾಲುದಾರಿಗಾಗಿ ನಿಶ್ಶಬ್ದ ದಿಂದ ವೇಗವಾಗಿ ನಡೆಯುವುದಕ್ಕೆ ತೊಡಗಿದರು. ಒಬ್ಬನ ಬಾಯಿಂದಲೂ ಚಕಾರ ಕೂಡ ಹೊರಡುತ್ತಿರಲಿಲ್ಲ. ಹೀಗೆ ಹೋಗುತ್ತಿರುವಾಗ ಪೇರಿಯಾ ಪಟ್ಟಣದಿಂದ ಹತ್ತು ಮೈಲಿ ದೂರದಲ್ಲಿ ಒಂದು ಅವರಿಗೆ ಗಹನವಾದ ಅರಣ್ಯವು ಸಿಕ್ಕಿತು.

---

## ದಳ :: ೧೭

ವಿಸ್ತಾರವಾದ ಅರಣ್ಯ ಅತಿ ನಿಬಿಡವಾಗಿ ಬೆಳೆದ ವೃಕ್ಷಸಮೂಹ. ಎಲ್ಲಿ ನೋಡಿದರೂ ಅಂಧಕಾರ. ವೀರರಾಜನ ಅನುಚರರ ಕೈಯಲ್ಲಿಯ ಒಂದೆರಡು ದೊಂದಿಗಳು ಮಸಕು ಮಸಕಾದ ಬೆಳಕನ್ನು ಕೊಡುತ್ತಿದ್ದುವು. ಎಲ್ಲಿ ನೋಡಿ ದರೂ ಈ ದಾರಿ ನಡಿಗರಲ್ಲದೆ, ಇತರ ಮನುಷ್ಯರ ಸುಳುವೇ ಇಲ್ಲ. ಹೀಗೆ ವೀರರಾಜನೂ ಆತನ ಪರಿವಾರದವರೂ ದಾರಿಯನ್ನು ಅತಿಕ್ರಮಿಸುತ್ತಿರುವಾಗ ದೂರದಲ್ಲಿ ಎರಡು-ಮೂರು ಬೆಳಕುಗಳು ಕಂಡು ಬಂದವು. ಆ ದೊಂದಿ

ಗಳನ್ನು ನೋಡಿ, ವೀರರಾಜನಿಗೆ ಮನಸ್ಸಿನಲ್ಲಿ ಸ್ವಲ್ಪ ಭಯವೂ ವಿಸ್ಮಯವೂ ಉಂಟಾಯಿತ. ಅವರು ಒಂದುವೇಳೆ ಕಳ್ಳರಾಗಿದ್ದರೆ ಚಿಂತೆ ಇಲ್ಲ. ತಮ್ಮ ಪ್ರಯೂ ಆಯುಧ ಸಮೇತರಾದ ಹತ್ತಿಪ್ಪತ್ತು ಜನರಿದ್ದರು; ಆದರೆ ಅವರ ಸಂಖ್ಯೆಯು ಎಷ್ಟಿದೆಯೋ? ಎಂಬ ಯೋಚನೆಯು ವೀರರಾಜನಿಗೆ ಉಂಟಾಯಿತು ಬಹುಶಃ ಅವರು ಕಳ್ಳರಾಗಿರದೆ ಟಿಪ್ಪುಸುಲ್ತಾನನ ಗೂಢಚಾರರೇ ಎಂಬ ಸಂದೇಹವು ಆತನಿಗೆ ಉಂಟಾಯಿತು.

ಆದರೆ ವೀರರಾಜನು ರಣಭೀರುವಾಗಿರದೆ ವೀರ ಪುರುಷನಾಗಿದ್ದನು. ತನ್ನ ಪರಾಕ್ರಮವನ್ನು ತೋರಿಸಲು ಒಂದು ಸುಸಂದರ್ಭವು ದೊರಕಿತಲ್ಲಾ, ಎಂದು ಮನಸ್ಸಿನಲ್ಲಿ ಸಂತೋಷಪಟ್ಟನು; ಆದರೆ ತಾನು ಒಂದು ವೇಳೆ ಆ ಜಗಳದಲ್ಲಿ ಮೃತಿಯನ್ನು ಹೊಂದಿದರೆ, ತನ್ನ ಕುಟುಂಬದವರು ತಿರುಗಿ ಟಿಪ್ಪುವಿನ ಕೈಗೆ ಸಿಕ್ಕಿ ಕಷ್ಟಕ್ಕೆ ಗುರಿಯಾಗುವರಲ್ಲಾ! ಎಂಬ ಒಂದು ಚಿಂತೆಯು ಅವನನ್ನು ಬಾಧಿಸುತ್ತಿತ್ತು ಆದುದರಿಂದ ಆತನು ತನ್ನ ತಮ್ಮಂದಿರಾದ ಲಿಂಗರಾಜ ಮತ್ತು ಅಪ್ಪಾಜಿರಾಜರನ್ನು ಕರೆದು "ಅಪ್ಪಾಜಿ, ದೂರದಲ್ಲಿ ಬೆಳಕು ಕಾಣುತ್ತದೆ. ಅವರು ಒಂದು ವೇಳೆ ನಮ್ಮ ಶತ್ರುಗಳಾಗಿದ್ದರೆ ಅವರೊಡನೆ ಹೊಡೆದಾಡುವ ಪ್ರಸಂಗವು ನಮಗೆ ಬರಬಹುದು ಆಗ ನೀನು ನಮ್ಮ ಹೆಂಗಸರನ್ನೂ ಬೋಯಿಗಳನ್ನೂ, ಮಲ್ಲಪ್ಪ ಮೊದಲಾದವರನ್ನೂ ಕರೆದುಕೊಂಡು ಕಾಡು ನುಗ್ಗಿ ಪಾರಾಗಿ ಹೋಗು" ಎಂದು ಹೇಳಿದನು.

ಅಪ್ಪಾಜಿಯು "ಅಣ್ಣಾ, ನೀನೇ ಈಗ ಶತ್ರುಗಳೊಡನೆ ಯುದ್ಧ ಮಾಡುವುದು ಯೋಗ್ಯವಲ್ಲ. ನಿನ್ನ ದಾರಿಯನ್ನು ಕೊಡಗಿನ ಪ್ರಜೆಗಳೆಲ್ಲರೂ ನೋಡುತ್ತಿರುವರು ಟಿಪ್ಪುವಿನ ಕಿಲ್ಲೇದಾರರ ಹಿಂಸೆಯನ್ನು ತಾಳಲಾರದೆ ನಿನ್ನ ಪ್ರಜೆಗಳೆಲ್ಲರೂ ಗೋಳಾಡುತ್ತಿರುವರು. ಆದುದರಿಂದ ಅವರನ್ನು ರಕ್ಷಿಸುವದಕ್ಕೆ ನೀನು ಹೋಗು ನಾನೂ, ಹೊಂಬಾಳೆ ನಾಯಕನೂ, ಇಸ್ಮಾಯಿಲಖಾನನೂ ಇವರನ್ನು ಎದುರಿಸುವೆವು."

ವೀರರಾಜ:—'ಅದಾಗದು. ಅಪ್ಪಾಜಿ, ನಿನ್ನ ಪ್ರೀತಿಗೆ ಸಂತೋಷಪಟ್ಟೆನು; ಆದರೆ ಶತ್ರುಗಳೊಡನೆ ಯುದ್ಧ ಮಾಡುವದಕ್ಕೆ ನಿಮ್ಮನ್ನು ಬಿಟ್ಟು ನಾನು ಓಡಿಹೋಗುವದು ವೀರಧರ್ಮವಲ್ಲ ಅದು ನನ್ನಿಂದಾಗದು. ಎಲ್ಲರೂ ಒಟ್ಟಾಗಿ ಎದುರಿಸೋಣ' ಎಂದನು ಇಷ್ಟರಲ್ಲಿ ದೂರದಲ್ಲಿ ಕಾಣುತ್ತಿದ್ದ ಬೆಳಕುಗಳು ಹತ್ತಿರಕ್ಕೆ ಬಂದವು. ಆ ಗುಂಪಿನಲ್ಲಿ ಇಪ್ಪತ್ತು ಜನರಿದ್ದರು.

ಅವರ ಯಜಮಾನನು ಮೈಗೆ ಒಂದು ಕಪ್ಪು ಕಂಬಳಿಯನ್ನು ಸುತ್ತಿಕೊಂಡಿದ್ದನು. ಮುಖವು ಭಯಂಕರವಾಗಿ ತೋರುತ್ತಿತ್ತು. ಇಂಥ ಅವನು:— 'ನೀವು ಯಾರು?' ಎಂದು ಕೇಳಿದನು.

'ನಾವು ದಾರಿ ಹೋಗುವವರು.'

ಕಳ್ಳರ ಯಜಮಾನ: 'ಈ ರಾತ್ರಿ ಹೊತ್ತಿನಲ್ಲಿ ಎಲ್ಲಿಗೆ ಹೋಗುತ್ತಿರುವಿರಿ?'

'ಜಾಫರಾಬಾದಿಗೆ ಹೋಗುತ್ತಿರುವೆವು.'

'ನೀವು ದೊಡ್ಡ ಮನುಷ್ಯರ ಹಾಗೆ ಕಾಣುತ್ತೀರಿ. ನಿಮ್ಮ ಮೈಮೇಲಿನ ಒಡವೆಗಳನ್ನು ಮತ್ತು ಹಣವನ್ನು ತೆಗೆದಿಟ್ಟು ಮುಂದಕ್ಕೆ ಕಾಲಿಡಿರಿ' ಎಂದನು.

ಆಗ ಹೊಂಬಾಳೆ ನಾಯಕನು:—'ನಮ್ಮಲ್ಲಿ ಏನೂ ಇಲ್ಲವಪ್ಪಾ! ನಮ್ಮ ದಾರಿ ತಡೆದು ನಿನಗೆ ಏನು ಸಿಕ್ಕುವದು? ನಮ್ಮನ್ನು ತಡೆಯಬೇಡ' ಎಂದನು

ಕಳ್ಳರ ಯಜಮಾನನು:—'ಮಾತು ಸಾಕು ಒಳ್ಳೆಯ ಮಾತಿನಿಂದ ಹಣವನ್ನೆಲ್ಲ ಕೊಡುವಿರೋ ಇಲ್ಲವೋ? ಇಲ್ಲವಾದರೆ ನಿಮ್ಮನ್ನು ಈ ಕಾಡಿನಿಂದ ಹೊರಗೆ ಬಿಡುವುದಿಲ್ಲ' ಎಂದು ಹೇಳಿ, ಸಿಳ್ಳು ಹಾಕಿದನು ಕೂಡಲೆ ಅವನ ಕಡೆಯ ಹತ್ತಿಪ್ಪತ್ತು ಜನರು ದೊಣ್ಣೆ ಕತ್ತಿಗಳನ್ನು ಹಿಡಿದುಕೊಂಡು ಮುಂದೆ ಬಂದರು. ಆಗ ವೀರರಾಜನು ತನ್ನ ಹೆಂಡತಿ ಮತ್ತು ಇತರರ ರಕ್ಷಣೆಗೆ ಅಪ್ಪಾಜಿಯನ್ನೂ ಮಲ್ಲಪ್ಪನನ್ನೂ ನಿಲ್ಲಿಸಿ, ತಾನು ಕತ್ತಿಯನ್ನೂ ಬರ್ಚಿಯನ್ನೂ ತೆಗೆದುಕೊಂಡು ಯುದ್ಧಸನ್ನದ್ಧನಾದನು. ಅವನ ಕಡೆಯವರೂ ಇಸ್ಮಾಯಿಲಖಾನನೂ ತಾವು ಬಚ್ಚಿಟ್ಟಿದ್ದ ತಮ್ಮ ಆಯುಧಗಳನ್ನು ಹೊರ ತೆಗೆದರು. ವೀರರಾಜನು ನೆಟ್ಟಗೆ ಕಳ್ಳರ ಯಜಮಾನನ ಮೇಲೆ ಏರಿ ಹೋದನು. ವೀರರಾಜನು ಯುದ್ಧವಿದ್ಯೆಯಲ್ಲಿ ನಿಪುಣನಾಗಿದ್ದನು. ಕತ್ತಿಯನ್ನು ತಿರುಗಿಸುವದರಲ್ಲಿಯೂ ಗುರಿಹೊಡೆಯುವದರಲ್ಲಿಯೂ ಆತನಿಗೆ ಸರಿಸಮಾನರಿರಲಿಲ್ಲ. ಹಾಗೆಯೇ ಆತನ ಪರಿವಾರದವರು ಯುದ್ಧವಿದ್ಯೆಯಲ್ಲಿ ನುರಿತವರಾಗಿದ್ದರು. ಒಡನೆಯೇ ಎರಡು ಕಡೆಯವರಿಗೂ ಸ್ವಲ್ಪ ಕಾಲ ಯುದ್ಧವು ಜೋರಾಗಿ ನಡೆಯಿತು ವೀರರಾಜನು ತನ್ನ ಕತ್ತಿಯಿಂದ ಕಳ್ಳರಲ್ಲಿಯ ಐದಾರು ಜನರನ್ನು ತುಂಡರಿಸಿದನು ಅವನ ಕಡೆಯವರು ನಾಲ್ಕೈದು ಜನರನ್ನು ನೆಲಕ್ಕೆ ಬೀಳಿಸಿದರು ಆಗ ಕಳ್ಳರ ಯಜಮಾನನು ಇವರು ಯಾರೋ ವೀರಪುರುಷರೆಂದು ತಿಳಿದು, ತನ್ನ ಕಡೆಯವರನ್ನು

ಒಂದಕ್ಕೆ ಕರೆದನು. ನಂತರ ವೀರರಾಜನಿಗೆ ನಮಸ್ಕಾರ ಮಾಡಿ:— 'ಪ್ರಭೂ, ನಮ್ಮ ಅಪರಾಧವನ್ನು ಕ್ಷಮಿಸಬೇಕು. ತಾವು ಸಾಧಾರಣ ಪುರುಷರೆಂದು ತಿಳಿದು ತಮ್ಮ ದಾರಿಯನ್ನು ತಡೆದೆನು. ತಾವು ಯಾರೆಂದು ದಯವಿಟ್ಟು ಹೇಳಬೇಕು'' ಎಂದು ಕೇಳಲು, ವೀರರಾಜನು:—''ನಾನು ಕೊಡಗಿನ ಒಬ್ಬ ರೈತನು'' ಎಂದನು ಆಗ ಕಳ್ಳರ ಯಜಮಾನನು:— ''ನೀವು ನಿಜವನ್ನು ಮರೆಮಾಚುವಿರಿ. ನೀವು ಬಹುಶಃ ಕೊಡಗಿನ ಲಿಂಗಾಯತ ರಾಜಮನೆತನದವರಲ್ಲಿಯ ಒಬ್ಬರಾಗಿರಬೇಕು'' ಎಂದನು.

ಆಗ ಹೊಂಬಾಳೆ ನಾಯಕನು:—''ಅಯ್ಯಾ, ಅವರು ಯಾರಾದರೂ ನಿನಗೇನು? ನೀನು ನಮಗೆ ಈ ಕಾಡಿನಿಂದ ಕೊಡಗಿಗೆ ದಾರಿಯನ್ನು ತೋರಿಸುವೆಯಾ? ನಿನಗೆ ಇನಾಮನ್ನು ಕೊಡುವೆವು'' ಎಂದು ಕೇಳಿದನು ಕಳ್ಳರ ಯಜಮಾನನು: -''ನೀವು ಇನಾಮನ್ನು ಕೊಡುವದು ಬೇಡ. ಸ್ವಾಮೀ, ನನ್ನನ್ನೂ ನನ್ನ ಜೊತೆಯವರನ್ನೂ ನಿಮ್ಮ ಆಶ್ರಿತರನ್ನಾಗಿ ಮಾಡಿಕೊಳ್ಳಿರಿ ನೀವು ಕೊಡಗಿನ ರಾಜಕುಮಾರರೆಂದು ನನಗೆ ಖಂಡಿತವಾಗಿದೆ'' ಎಂದು ಹೇಳಿ, ವೀರರಾಜನ ಕಾಲಿಗೆ ಬಿದ್ದನು. ಆಗ ವೀರರಾಜನು:— ''ಅಪ್ಪಾ, ಏಳು. ನನಗೆ ಸ್ವಲ್ಪ ಕಾಲುದಾರಿಗಾಗಿ ಕೊಡಗಿನ ಮರೆನಾಡಿಗೆ ದಾರಿತೋರಿಸಿ ಕರೆದುಕೊಂಡು ಹೋಗು. ನಿನಗೆ ಕೇಳಿದಷ್ಟು ಭೂಮಿಯನ್ನೂ ಹಣವನ್ನೂ ಕೊಡುವೆನು'' ಎಂದು ಹೇಳಿದನು.

ಆನಂತರ ಕಳ್ಳರ ಯಜಮಾನನು ವೀರರಾಜನನ್ನೂ ಅವನ ಪರಿವಾರದವರನ್ನೂ ಕರೆದುಕೊಂಡು ಬೆಳಗಾಗುವಷ್ಟರಲ್ಲಿ ಸುಮಾರು ಮೈಸೂರು-ಕೊಡಗುಗಳ ಸರಹದ್ದಿಗೆ ಬಂದನು. ಆ ಕಾಡಿನಲ್ಲಿ ಪಲ್ಲಕ್ಕಿಗಳನ್ನು ಹೊತ್ತುಕೊಂಡು ಬರುವದು ಬೋಯಿಗಳಿಗೆ ಬಹಳ ಕಷ್ಟವಾಯಿತು ವೀರರಾಜನು ಪಲ್ಲಕ್ಕಿಯಿಂದಿಳಿದು ನಡೆಯತೊಡಗಿದನು; ಆದರೆ ನಂಜಮ್ಮಾಜಿಯು ಮಾತ್ರ ಪಲ್ಲಕ್ಕಿಯಲ್ಲೇ ಕುಳಿತುಕೊಂಡಿದ್ದಳು ಸುಮಾರು ಕೊಡಗಿನ ಸರಹದ್ದಿಗೆ ತಲುಪುವಷ್ಟರಲ್ಲಿ ಇವಳ ಮೊಲೆಯಲ್ಲಿ ಹಾಲು ತುಂಬಿ ಮೊಲೆಯು ಸಿಡಿಯುವದಕ್ಕೆ ಪ್ರಾರಂಭವಾಯಿತು. ವೀರರಾಜನು ಮಗುವನ್ನು ಕತ್ತರಿಸಿ ಹಾಕುವದಕ್ಕೆ ಇಸ್ಮಾಯಿಲಖಾನನಿಗೆ ಆಜ್ಞೆ ಮಾಡಿದ್ದು ಅವಳಿಗೆ ಮೊದಲೇ ಬಹಳ ದುಃಖವನ್ನುಂಟುಮಾಡಿತ್ತು; ಆದರೆ ಆಗ ತಾನು ಅಡ್ಡ ಬಂದರೆ ತಾವು ದೈವವಶಾತ್ ಪಡೆದ ಸ್ವಾತಂತ್ರ್ಯವನ್ನು ಕಳೆದುಕೊಂಡು, ಮೊದಲಿಗಿಂತ ಕಠಿಣ

ಸೆರೆಮನೆಯ ವಾಸವನ್ನು ಅನುಭವಿಸಬೇಕಾದೀತೆಂದು ಆಕೆಯು ಮಾತನಾಡದೆ ಸುಮ್ಮನಿದ್ದಳು; ಆದರೆ ಈಗ ಅವಳಿಗೆ ಆ ಸಾಯುವ ಭಯವು ಕಡಿಮೆಯಾಗುತ್ತ ಬಂದ ಹಾಗೆಲ್ಲ ಮಗುವು ಇಲ್ಲದಿರುವ ದುಃಖವು ಹೆಚ್ಚೆಚ್ಚಾಗುತ್ತ ಬಂತು. ಆ ದುಃಖದ ಭರದಲ್ಲಿ ಆಕೆಯು ತನ್ನ ಪತಿಯೊಡನೆ, 'ನನ್ನ ಮುದ್ದು ಮಗು ವನ್ನು ಕೊಲ್ಲಿಸಿ ಬಿಟ್ಟಿರಲ್ಲಾ! ಅವಳಿಲ್ಲದಿದ್ದರೆ ನನಗೂ ಈ ಪ್ರಾಣವು ಬೇಡ. ನನಗೆ ಅವಳ ಮೃತಶರೀರವನ್ನಾದರೂ ತೋರಿಸಿ'' ಎಂದು ಅಳತೊಡಗಿದಳು. ಆಗ ವೀರರಾಜನು ಆಕೆಯ ದುಃಖವನ್ನು ನೋಡಲಾರದೆ ಹೊಂಬಾಳೆ ನಾಯಕನನ್ನೂ ಇಸ್ಮಾಯಿಲಖಾನನನ್ನೂ ಕರೆದು, ''ಏನಪ್ಪಾ, ನಮ್ಮ ಮಗು ವನ್ನು ಎಲ್ಲಿ ಕತ್ತರಿಸಿ ಹಾಕಿದಿರಿ? ಅವಳ ಶರೀರವನು ತರುವದಕ್ಕಾಗು ತ್ತದೋ? ಏನು ಮಾಡುವದು? ಅಮ್ಮನವರ ಸಂಕಟ ನೋಡುವದಕ್ಕಾಗುವ ದಿಲ್ಲ.'' ಎಂದನು. ಆಗ ಹೊಂಬಾಳೆನಾಯಕನು ''ಒಡೆಯರೇ, ನಮ್ಮನ್ನು ಕ್ಷಮಿಸಬೇಕು ನಾವು ನಿಮ್ಮ ಅಪ್ಪಣೆಯನ್ನು ಪಾಲಿಸಲಿಲ್ಲ.''

ಆಶ್ಚರ್ಯದಿಂದ ವೀರರಾಜನು: 'ಹಾಗಾದರೆ ಮಗುವನ್ನು ಏನು ಮಾಡಿದಿರಿ? ಮಗು ಜೀವದಿಂದಿದೆಯೆ?'

ಇಸ್ಮಾಯಿಲಖಾನ:---'ಖಾವಂದ, ಸಿಟ್ಟು ಮಾಡಬೇಡಿರಿ. ಹೊಂಬಾಳೆ ನಾಯಕನೂ ನಾನೂ ಯೋಚನೆ ಮಾಡಿ, ಅದಕ್ಕೆ ಸ್ವಲ್ಪ ಅಫೀಮು ಕೊಟ್ಟು ಮಂಕು ಬರಿಸಿ ನಿದ್ದೆ ಮಾಡಿಸಿದೆವು; ಮತ್ತು ಅದನ್ನು ಬಿಗಿಯಾಗಿ ಬೆನ್ನಿಗೆ ಕಟ್ಟಿಕೊಂಡೆನು.'

ವೀರರಾಜ:--'ಇಸ್ಮಾಯಿಲಖಾನ, ಹಾಗಾದರೆ ಮಗುವು ಸುರಕ್ಷಿತ ವಾಗಿ ಇಲ್ಲೇ ಇದೆ. ಎಲ್ಲಿ, ಆ ಮಗುವನ್ನು ತೆಗೆದುಕೊಂಡು ಬಾ.

ಇಸ್ಮಾಯಿಲಖಾನನು ತನ್ನ ಬೆನ್ನಿನಲ್ಲಿ ಕಟ್ಟಿದ್ದ ಕೂಸನ್ನು ಬಿಚ್ಚಿ, ಅದರ ಮುಖಕ್ಕೆ ಸ್ವಲ್ಪ ಒದ್ದೆಯಾದ ಬಟ್ಟೆಯಿಂದ ಒರಿಸಿದನು; ಮತ್ತು ಅದರ ಕೈಕಾಲುಗಳನ್ನು ಮೆಲ್ಲನೆ ಉಜ್ಜಿದನು. ಆಗ ಆ ಮಗುವು ನಿದಾನವಾಗಿ ಕಣ್ದೆರೆಯಿತು. ಈ ಸಮಯದಲ್ಲಿ ನಂಜಮ್ಮಾಜಿಯು ತಾನು ಯಾವಾಗ ಮಗುವನ್ನು ಕಂಡೇನು? ಮುದ್ದು ಕೊಟ್ಟೇನು? ಮತ್ತು ಹಾಲು ಉಣಿಸೇನು? ಎಂದು ಚಡಪಡಿಸುತ್ತಿದ್ದಳು ಮಗುವು ಕಣ್ಣು ತೆರೆದ ಕೂಡಲೆ ವೀರರಾಜನು ಅದನ್ನು ತನ್ನ ಹೆಂಡತಿಯ ಕೈಯಲ್ಲಿ ಕೊಟ್ಟು, ಅನಂತರ ಇಸ್ಮಾಯಿಲಖಾನ ನನ್ನು ಆಲಿಂಗಿಸಿ: —ಇಸ್ಮಾಯಿಲಖಾನ, ಇವತ್ತು ನೀನು ನನಗೆ ಬಹು ದೊಡ್ಡ

ಉಪಕಾರವನ್ನು ಮಾಡಿದೆ. ಸಿಟ್ಟಿನ ಭರದಲ್ಲಿ ನಾನು ಆ ಮಗುವನ್ನು ಕೊಂದುಬಿಡು ಎಂದು ಹೇಳಿದೆನು; ಆದರೆ ನಿಮ್ಮ ಬುದ್ಧಿವಂತಿಕೆಯನ್ನುಪಯೋಗಿಸಿ ನೀವು ಮಗುವನ್ನು ಉಳಿಸಿದ್ದು ನನ್ನ ಪ್ರಾಣವನ್ನುಳಿಸಿದಂತಾಯಿತು. ಮಹಾದೇವನ ದಯೆಯಿದ್ದರೆ ನಾನು ಈ ಉಪಕಾರಕ್ಕೆ ಹತ್ತುಪಾಲು ಪ್ರತ್ಯುಪಕಾರ ಮಾಡುವೆನು. ನೀವಿಬ್ಬರೂ ಮಾಡಿದ ಒಳ್ಳೆಯ ಕೆಲಸಕ್ಕೆ ನಾನು ನಿಮಗೆಷ್ಟು ಕೃತಜ್ಞನಾಗಿದ್ದರೂ ಸಾಲದು.'

ಹೊಂಬಾಳೆನಾಯಕ:—'ಒಡೆಯರೇ, ನಿಮ್ಮ ದಯೆ ನಮ್ಮ ಮೇಲಿದ್ದರೆ ಸಾಕು ನಮಗೆ ಇನ್ನೇನೂ ಬೇಕಾಗಿಲ್ಲ.' ಎಂದನು.

ವೀರರಾಜನು ತನ್ನ ಹೆಂಡತಿಯ ಕೈಯಲ್ಲಿದ್ದ ಮಗುವನ್ನು ಎತ್ತಿ:—'ಅಮ್ಮಾ, ನಿನ್ನನ್ನು ಕತ್ತರಿಸಿ ಹಾಕುವದಕ್ಕೆ ಅಪ್ಪಣೆಯನ್ನು ಕೊಟ್ಟೆನಲ್ಲಾ! ನಾನೆಂಥಾ ಕ್ರೂರಿಯಿರಬಹುದು?' ಎನ್ನುತ್ತ ತಾನು ಮುದ್ದಾಡಿಸಿದನು. ಅನಂತರ ಅವರು ವೇಗವಾಗಿ ನಡೆದು, ಕೊಡಗಿನಲ್ಲಿ ರಾಜನ ಸ್ವಂತ ಭೂಮಿ ಅಥವಾ ಪನ್ನಗಳಲ್ಲಿ ಒಂದಾದ ಮತ್ತು ಮೈಸೂರು-ವೈನಾಡು ಸರಹದ್ದಿಗೆ ಸಮೀಪವಾದ ಕುರ್ಚಿ ಪನ್ನಕ್ಕೆ ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ತಲುಪಿದರು.

## ದಳ :: ೧೮

ಇತ್ತಲಾಗಿ ಕೊಡಗಿನಲ್ಲಿ ಟಿಪ್ಪುವಿನ ಸೈನಿಕರ ಅವಾಂತರವು ಹೆಚ್ಚಾಗುತ್ತ ಇದ್ದಿತು ಅವರು ದೇವಸ್ಥಾನಗಳನ್ನು ಹಾಳು ಮಾಡಿ ಅವುಗಳಲ್ಲಿದ್ದ ನಗ-ನಾಣ್ಯಗಳನ್ನು ದೋಚಿಕೊಂಡು ಹೋಗುತ್ತಿದ್ದರು. ಟಿಪ್ಪುಸುಲ್ತಾನನು ಕೊಡಗಿನಲ್ಲಿ ಮಡಿಕೇರಿ, ಕುಶಾಲ್ ನಗರ, ಬೆಪ್ಪುನಾಡು ಮತ್ತು ಭಾಗಮಂಡಲವೆಂಬ ನಾಲ್ಕು ಸ್ಥಳಗಳಲ್ಲಿ ಕೋಟೆಗಳನ್ನು ಕಟ್ಟಿಕೊಂಡು ಅಲ್ಲಿ ಸೈನ್ಯಗಳನ್ನಿಟ್ಟಿದ್ದನು. ಈ ಸೈನಿಕರು ಬಿಸಿಲು ಕಾಲದಲ್ಲಿ ತಮ್ಮ ತಮ್ಮ ಕೋಟೆಗಳ ಸಮೀಪದ ಹಳ್ಳಿಗಳನ್ನು ಕೊಳ್ಳೆ ಹೊಡೆಯುತ್ತಲೂ, ಜನರ ಪ್ರಾಣ ಮತ್ತು ಮಾನ ಹರಣ ಮಾಡುತ್ತಲೂ ಇರುತ್ತಿದ್ದರು. ಹೀಗಾಗಿ ಅಲ್ಲಿಯ ಜನರೆಲ್ಲರೂ ಓಡಿ ಹೋಗಿ ಗುಡ್ಡಗಾಡುಗಳಲ್ಲಿ ಕಷ್ಟದಿಂದ ಜೀವಿಸುತ್ತಿದ್ದರು. ಈ ಮಧ್ಯೆ ನಮ್ಮ ಪೂರ್ವಪರಿಚಿತರಾದ ಮಾದಪ್ಪ, ಆತನ ತಾಯಿ, ತಮ್ಮ ಮತ್ತು ತಂಗಿಯರ ಸ್ಥಿತಿಯು ಇನ್ನೂ ಕೆಟ್ಟು ಹೋಗಿದ್ದಿತು. ಅವರು ತಮ್ಮ ಭೂಮಿ

ಯನ್ನು ವ್ಯವಸಾಯ ಮಾಡಿದರೆ, ಫಸಲು ಬರುವ ವೇಳೆಯಲ್ಲಿ ಟಿಪ್ಪುವಿನ ಸೈನಿಕರು ಅದನ್ನು ದೋಚಿಕೊಂಡು ಹೋಗುತ್ತಿದ್ದರು. ಆದರಿಂದ ಆತನ ತಾಯಿಯು ಬೇಸತ್ತು, ರಾಜನು ಕೊಡಗಿಗೆ ತಿರುಗಿ ಬರುವುದಾವಾಗಲೋ, ನಮಗೆ ಸುಖಸಿಕ್ಕುವುದೆಂದೋ, ಎಂದು ಯೋಚಿಸುತ್ತಾ, ಆದಷ್ಟು ಬೇಗನೆ ತನ್ನ ಮಗಳು ಪೂವಿಯನ್ನು ವಿವಾಹ ಮಾಡಿಕೊಡಬೇಕೆಂದು ಹಂಬಲಿಸುತ್ತಿದ್ದಳು; ಆದರೆ ಆಕೆಯು ಮಾಚುವಿಗೆ ತನ್ನ ಮಗಳನ್ನು ಮದುವೆಯಾಗೆಂದು ಮೊದಲು ಕೇಳಿದ್ದು ನಮ್ಮ ವಾಚಕರಿಗೆ ನೆನಪಿರಬಹುದು ಈತ ಮಳೆಗಾಲ ಕಳೆದರೂ ಮಾಚುವಿನ ಮತ್ತು ಐಯ್ಯಪ್ಪನ ವರ್ತಮಾನವೇ ಇರಲಿಲ್ಲ ಆದ್ದರಿಂದ ಆ ವೃದ್ಧ ಮಾತೆಗೆ ಪೂವಮ್ಮನನ್ನು ತಾನು ಸಾಯುವ ಮೊದಲೇ ಇನ್ಯಾರಿಗಾದರೂ ಲಗ್ನಮಾಡಿ ಬಿಡಬೇಕೆಂದು ಯೋಚನೆಯುಂಟಾಯಿತು. ಮಾದಪ್ಪನು ಇದಕ್ಕೆ ಮೊದಲು ಒಡಂಬಡಲಿಲ್ಲ. ಮಾದಪ್ಪನು ಮಾಚುವನ್ನು ಬಹಳ ಸ್ವಲ್ಪ ಕಾಲ ನೋಡಿದ್ದರೂ ಆತನಿಗೆ ಮಾಚುವಿನಲ್ಲಿ ವಿಶೇಷವಾದ ಆತ್ಮೀಯತೆಯುಂಟಾಗಿದ್ದಿತು. ಇದಲ್ಲದೆ ಪೂವಮ್ಮನಿಗೂ ಮಾಚುವಿನಲ್ಲಿ ಪ್ರೇಮಾಂಕುರಿಸಿದುದೂ, ಆಕೆಯು ಆತನನ್ನೇ ತಾನು ವಿವಾಹವಾಗಬೇಕೆಂದು ತನ್ನ ಇಂಗಿತವನ್ನು ತೋರಿಸಿದುದೂ ಆತನಿಗೆ ತಿಳಿದಿದ್ದಿತು; ಆದರೆ ಈಗ ಮಾದಪ್ಪನು ಮಾಡುವುದಾದರೂ ಏನು? ಮಾಚು ಮತ್ತು ಐಯ್ಯಪ್ಪನ ಸುಳಿವೇ ಇರಲಿಲ್ಲ. ಇತ್ತಲಾಗಿ ಪೂವಿಯನ್ನು ಯಾರಾದರೊಬ್ಬ ಯೋಗ್ಯವರನಿಗೆ ವಿವಾಹ ಮಾಡಿಕೊಡೆಂದು ಆತನ ತಾಯಿಯು ಹಟ ಮಾಡುತ್ತಿದ್ದಳು. ಕೊನೆಗೆ ಮಾದಪ್ಪನು ತಾಯಿಯ ಹಟಕ್ಕೋಸ್ಕರ ಪೂವಿಯ ವಿವಾಹಕ್ಕೆ ಒಪ್ಪಿದನು ಮಾಚುವೂ, ಐಯ್ಯಪ್ಪನೂ ಹೇಳಿದ ಹಾಗೆ ಮಾದಪ್ಪನು ಅನೇಕ ತರುಣರನ್ನು ಒಟ್ಟುಗೂಡಿಸಿ ಅವರಿಗೆ ಗುಟ್ಟಾಗಿ ಗುರಿ ಹೊಡೆಯುವುದಕ್ಕೂ ಯುದ್ಧ ಮಾಡುವುದಕ್ಕೂ ಕಲಿಸುತ್ತಿದ್ದನು. ಇದರಿಂದಅವನು ತನ್ನ ಅನೇಕ ಜನ ಸ್ನೇಹಿತರಲ್ಲಿ ಯಾರಾದರೊಬ್ಬನಿಗೆ ಪೂವಿಯನ್ನು ಕೊಟ್ಟು ವಿವಾಹ ಮಾಡಬೇಕೆಂದಿದ್ದನು. ಆದರೆ ಆತನ ತಾಯಿಗೆ ತನ್ನ ಬಲಅಣ್ಣ ಬೆಳ್ಳ್ಯಪ್ಪನೆಂಬವನ ಮಗನಿಗೆ ತನ್ನ ಮಗಳನ್ನು ಕೊಡಬೇಕೆಂದಿದ್ದಿತು. ಬೆಳ್ಳ್ಯಪ್ಪನಿಗೆ ಮಧ್ಯವಯಸ್ಸಾಗಿದ್ದಿತು; ಮತ್ತು ಮೊದಲು ವಿವಾಹವಾಗಿ ಹೆಂಡತಿಯು ಗತಿಸಿ ಹೋಗಿದ್ದಳು. ಆತನಿಗೆ ಆಕೆಯಲ್ಲಿ ಜನಿಸಿದ ಮೂರು ಜನ ಮಕ್ಕಳೂ ಇದ್ದರು. ಜಮೀನುಗಳು ತುಂಬಾ ಇದ್ದುವು; ಆದರೆ ಆತನಿಗೆ ಸ್ತ್ರೀಯರಿಗೆ

ಆಕರ್ಷಣವಾದ ರೂಪವಾಗಲೀ, ಯೌವನವಾಗಲೀ ಇರಲಿಲ್ಲ ಆದ್ದರಿಂದ ಪೂವಿಗೆ ಆತನೊಡನೆ ತನ್ನ ವಿವಾಹವನ್ನು ಮಾಡಬೇಕೆಂದು ತನ್ನ ತಾಯಿಯು ಇಷ್ಟಪಟ್ಟಿದ್ದ ತಿಳಿಯಲು, ಅವಳಿಗೆ ಸಿಡಿಲು ಒಡೆದಂತಾಯಿತು; ಆದರೆ ಅವಳ ತಾಯಿಯು ತನ್ನ ಮಗಳ ಇಷ್ಟದ ಕಡೆಗೆ ಗಮನ ಕೊಡದೆ, ತಾನು ತನ್ನ ಬಲಗಣ್ಣನನ್ನು ಕರೆದು ತನ್ನ ಮಗಳನ್ನು ಆತನ ಮಗನಿಗೆ ತೆಗೆದು ಕೊಂಡು ಹೋಗುವಂತೆ ಹೇಳಿದಳು. ಆತನು ಈ ಸಂಬಂಧಕ್ಕೊಪ್ಪಿ ವಿವಾಹದ ಪೂರ್ವಸಿದ್ಧತೆಗಳನ್ನು ಮಾಡುವುದಕ್ಕೆ ತೊಡಗಿದನು. ಮಾದಪ್ಪನಿಗೆ ಈ ಸಂಬಂಧವು ಮನಸ್ಸಿಗೊಪ್ಪದಿದ್ದರೂ ತನ್ನ ತಾಯಿ ಮತ್ತು ಇತರ ಬಂಧು ವರ್ಗದವರ ಮಾತುಗಳಿಗೆ ಪ್ರತಿ ಹೇಳದೆ ಸುಮ್ಮನಿದ್ದನು. ಆತನಿಗೆ ತನ್ನ ತಂಗಿ ಪೂವಮ್ಮನು ಈ ಸಂಬಂಧವನ್ನು ಎಳ್ಳಷ್ಟೂ ಇಷ್ಟಪಡುವುದಿಲ್ಲವೆಂದು ಗೊತ್ತಿದ್ದಿತು. ಪೂವಮ್ಮನು ಮಾಚುವನ್ನು ನೆನೆಸಿ ದಿನೇದಿನೇ ಕೃಶಳಾಗುತ್ತಾ ಬರುತ್ತಿದ್ದಳು. ಅವಳಿಗೆ ಮಾಚುವಿನಲ್ಲಿ ಅಂಕುರಿಸಿದ ಪ್ರೇಮವು ಬೆಳೆಯುತ್ತಾ ವೃಕ್ಷವಾಗುತ್ತಾ ಬರುತ್ತಲಿದ್ದಿತು. ಮಾಚುವು ಬೇಗನೆ ಬಂದರೆ ತನ್ನ ತಾಯಿಯು ತನ್ನನ್ನು ಬೇರೆಯವರಿಗೆ ವಿವಾಹಮಾಡುವ ಆಲೋಚನೆಯನ್ನು ಬಿಟ್ಟು ಬಿಡಬಹುದು, ಎಂಬ ಆಶೆಯಲ್ಲಿದ್ದಳು; ಆದರೆ ಅವಳ ಆಶೆಯು ದಿನದಿನಕ್ಕೆ ಕಡಿಮೆಯಾಗುತ್ತಾ ಬಂದು, ಕ್ರಮೇಣ ಅವಳು ದುಃಖದಿಂದ ಹಾಸಿಗೆ ಹಿಡಿದಳು.

ಇದನ್ನು ನೋಡಿ ಅವಳ ತಾಯಿಗೆ ಬಹಳ ಭಯವುಂಟಾಯಿತು. ತನ್ನ ಮಗಳ ರೋಗವು ವಾಸಿಯಾಗಲೆಂದು ಆಕೆಯು ದೇವರಿಗೆ ಹರಕೆ-ಹಾಡು ಗಳನ್ನು ಹೊತ್ತಳು. ದೆವ್ವಗಳಿಗೂ ಭೂತಗಳಿಗೂ ಕೋಳಿಗಳನ್ನು ಕೊಯ್ದು ಆಹುತಿ ಕೊಟ್ಟಳು. ಕೊನೆಗೊಬ್ಬ ಕಣಿಯನನ್ನು (ಮಲೆಯಾಳದಲ್ಲಿ ಜ್ಯೋತಿಷ ನೋಡುವವನು) ಕರೆದು ರಾಶಿಯಿಡಿಸಿದಳು. ಅವನು ರಾಶಿಯಿಟ್ಟು 'ರೋಗಿಗೊಂದು ಯಕ್ಷಿಣಿ ಹಿಡಿದಿದೆ. ಅವಳನ್ನು ಬೇಗನೆ ವಿವಾಹ ಮಾಡಿ ಕೊಟ್ಟರೆ ಆ ಯಕ್ಷಿಣಿಯು ಹೋಗುವದೆ'ಂದು ಹೇಳಿದನು. ಇದನ್ನು ಕೇಳಿ ಪೂವಮ್ಮನ ತಾಯಿಯು ವಿವಾಹದ ಸಿದ್ಧತೆಯನ್ನು ಭರದಿಂದ ಮಾಡಿ, ಬೇಗನೆ ಒಂದು ದಿವಸವನ್ನು ವಿವಾಹಕ್ಕೆ ನಿಶ್ಚಯಿಸಿದಳು. ಇದನ್ನು ತಿಳಿದು ಪೂವಿಗೆ ಜೀವವು ಹಾರಿ ಹೋದಂತಾಯಿತು. ಅವಳು ತಾನು ತನ್ನ ತಾಯಿಯು ಗೊತ್ತುಮಾಡಲ್ಪಟ್ಟ ವರನನ್ನು ಏನಾದರೂ ವರಿಸುವೆಯಾಗಲೊಲ್ಲೆನೆಂದು ಹಟ

ತೊಟ್ಟಳು. ಕೊನೆಗೆ ವಿವಾಹದ ದಿವಸವು ಬಂದಿತು. ಮಂಗಳಸ್ನಾನ ಮಾಡಿಸಲಿಕ್ಕೆಂದು ಸ್ನಾನದ ಮನೆಗೆ ಹುಡುಗಿಯನ್ನು ಕರೆದುಕೊಂಡು ಹೋಗುವದಕ್ಕೋಸ್ಕರ ಅವಳ ಜೊತೆಗಾರ್ತಿಯರು ಬಂದರು; ಆದರೆ ಹುಡುಗಿಯು ಅವಳ ಕೋಣೆಯಲ್ಲಿ ಕಾಣಬರಲಿಲ್ಲ. ಮನೆಯನ್ನೆಲ್ಲ ಹುಡುಕಿದರು; ಹೆಸರುಗೊಂಡು ಕರೆದರು. ಏನೂ ಪ್ರಯೋಜನವಾಗಲಿಲ್ಲ. ಆಗ ಎಲ್ಲರಿಗೂ ಗಾಬರಿಯಾಯಿತು. ಕೂಡಲೆ ಎಲ್ಲರೂ ಹತ್ತಿರವಲ್ಲಿದ್ದ ಕಾಡು-ಗುಡ್ಡಗಳನ್ನು ಹುಡುಕ ಹತ್ತಿದರು. ಆ ಸಮಯದಲ್ಲಿ ಒಬ್ಬ ದನ ಕಾಯುವ ಹುಡುಗನು ಓಡಿ ಬಂದು, 'ಯಾವಳೋ ಒಬ್ಬ ಹೆಂಗಸು ಈಗ ತಾನೆ ಕಾವೇರಿ ನದಿಯ ಆಳವಾದ ಮಡುವಿನಲ್ಲಿ ದುಮುಕಿದಳೆ'ಂದು ಹೇಳಿದನು. ಆಗ ಮನೆಯವರೂ, ಬಂದ ನೆಂಟರಿಷ್ಟರೂ ಆ ಹುಡುಗನು ಹೇಳಿದ ಸ್ಥಳಕ್ಕೋಡಿದರು. ಆದರೆ ಅವರೊಳಗೆ ಆ ಮಡುವಿಗೆ ದುಮುಕಿ ಪೂವಿಯನ್ನು ನೀರಿನೊಳಗಿಂದೆತ್ತಲು ಒಬ್ಬನಿಗೂ ಧೈರ್ಯವುಂಟಾಗಲಿಲ್ಲ. ಪೂವಿಯ ತಾಯಿಯು ಅಳುತ್ತಾ: 'ಅಪ್ಪಾ, ಯಾರಾದರೂ ನನ್ನ ಪೂವಿಯನ್ನು ಒದುಕಿಸಿರಿ ನಿಮಗೆ ದೇವರೊಳ್ಳೆಯದನ್ನು ಮಾಡುವನು' ಎಂದು ಹೇಳಿದಳು. ಮಾದಪ್ಪನು ತಾನೇ ನೀರಿಗಿಳಿದನು. ಆತನಿಗೆ ಈಜುವುದರಲ್ಲಿ ಹೆಚ್ಚು ಅಭ್ಯಾಸವಿರಲಿಲ್ಲ. ನೀರಿನಲ್ಲಿ ಆಳಕ್ಕೆ ಹೋಗುತ್ತಲೇ ಆತನು ನೀರು ಕುಡಿದು ಮುಳುಗುವುದಕ್ಕಾದನು. ಆಗ ಅಲ್ಲಿ ನೆರೆದಿದ್ದವರಲ್ಲಿ ಹಾಹಾಕಾರವುಂಟಾಯಿತು. ಪೂವಿಯ ತಾಯಿಯು ತನ್ನ ಮಗನೂ ಮುಳುಗಿದುದನ್ನು ನೋಡಿ, ಎದೆಎದೆ ಒಡಿದುಕೊಂಡು 'ಅಯ್ಯೋ, ಮಾದೂ, ನೀನು ಯಾಕೆ ನೀರಿನಲ್ಲಿಳಿದೆ? ನೀನೂ ಹೋದೆಯಾ?' ಎಂದು ಅಳ ಹತ್ತಿದ್ದಳು. ಈ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಆಗಂತುಕರಿಬ್ಬರು ಬಂದರು. ಅವರು ಮುಸಲ್ಮಾನರಂತೆ ಉಡುಪನ್ನು ತೊಟ್ಟಿದ್ದರು. ಇವರು ಬರುವುದನ್ನು ದೂರದಿಂದಲೇ ನೋಡಿ ಕೆಲವು ಜನ ಗಂಡಸರೂ, ಹೆಂಗಸರೂ, ಮಕ್ಕಳೂ ದೂರ ಸರಿದು. ಕಾಡಿನ ಅಂಚಿಗೆ ಹೋಗಿ ನಿಂತರು. ಕೆಲವರು ಮಾತ್ರ ಆದದ್ದಾಗಲೆಂದು ಅಲ್ಲಿಯೇ ಧೈರ್ಯ ಮಾಡಿ ನಿಂತರು. ಅಷ್ಟರಲ್ಲಿ ಅವರು ಅಲ್ಲಿಗೆ ಬಂದು, ಅಲ್ಲಿನ ಭಯಂಕರ ಘಟನೆಯನ್ನು ಕೇಳಿ ತಿಳಿದುಕೊಂಡರು. ಅದನ್ನು ಕೇಳಿ ಆಗಂತುಕರಲ್ಲೊಬ್ಬನ ಮುಖವು ಖಿನ್ನವಾಯಿತು. ಆತನು ಮರುಕ್ಷಣದಲ್ಲಿಯೇ ನೀರಿಗೆ ದುಮುಕಿ, ಒಂದೆರಡು ಬಾರಿ ಮಡುವಿನ ತಳಕ್ಕೆ ಹೋಗಿ, ಮಾದಪ್ಪನನ್ನು ಎಳೆದು ತಂದು ಆ ನದಿಯ ದಡಕ್ಕೆ ಹಾಕಿದನು. ಅವನ

ಜೊತೆಯುವನು ಜ್ಞಾನಶೂನ್ಯನಾಗಿದ್ದ ಮಾದಪ್ಪನನ್ನು ತಲೆಕೆಳಗಾಗಿ ಹಿಡಿದು ಅವನ ಹೊಟ್ಟೆಯಲ್ಲಿದ್ದ ನೀರನ್ನು ಹೊರಗೆ ತೆಗೆಯಲು ಯತ್ನಿಸಿದನು ಸ್ವಲ್ಪ ಹೊತ್ತಿನಲ್ಲಿ ಮಾದಪ್ಪನನ್ನು ಮೇಲಕ್ಕೆ ತಂದವನು ಪೂವಿಯನ್ನೂ ಮೇಲಕ್ಕೆ ತಂದು ನದಿಯ ದಡದಲ್ಲಿ ಮಲಗಿಸಿದನು ಆಕೆಯು ನೀರಿಗೆ ಬಿದ್ದು ಸುಮಾರು ಅರ್ಧ ಘಂಟೆಯ ಮೇಲಾಗಿದ್ದಿತು ಆದುದರಿಂದಾಕೆಯು ಬಹಳ ನೀರನ್ನು ಕುಡಿದಿದ್ದಳು. ಆಕೆಯ ಶರೀರದಲ್ಲಿ ಉಚ್ಛ್ವಾಸ-ನಿಶ್ವಾಸಗಳೇನೂ ನಡೆಯುವಂತೆ ತೋರುತ್ತಿರಲಿಲ್ಲ ಆಗಂತುಕನು ಅವಳನ್ನೂ ದಂಡೆಗೆ ತಂದು ಮಲಗಿಸಿದನು. ಆ ಹೊತ್ತಿಗೆ ಮಾದಪ್ಪನ ಹೊಟ್ಟೆಯಲ್ಲಿದ್ದ ನೀರೆಲ್ಲ ಹೊರಗೆ ಬಂದಿದ್ದಿತು ಆತನು ಜ್ಞಾನಹೊಂದಿ, ಸ್ವಲ್ಪ ಕಣ್ಣುತೆರೆದಿದ್ದನು. ಪೂವಮ್ಮನನ್ನು ನೀರಿನಿಂದ ಮೇಲೆ ತಂದ ಕೂಡಲೇ ಅವಳ ತಾಯಿಯು ಅವಳನ್ನು ಮಲಗಿಸಿದಲ್ಲಿಗೆ ಓಡಿ ಬಂದು, ಸತ್ತಂತೆ ಬಿದ್ದಿದ್ದ ಪೂವಿಯನ್ನು ನೋಡಿ, 'ಪೂವೀ, ಸತ್ತು ಹೋದೆಯಾ? ನನ್ನ ಕಂದ! ನೀನು ಹೀಗೆ ಪ್ರಾಣ ಕಳೆದುಕೊಳ್ಳುತ್ತೀಯೆಂದು ನನಗೆ ತಿಳಿದಿದ್ದರೆ ನಾನು ನಿನ್ನ ಮದುವೆಯ ಆಲೋಚನೆಯನ್ನೇ ಮಾಡುತ್ತಿರಲಿಲ್ಲ. ಪೂವೀ, ನನ್ನಲ್ಲಿ ಮಾತನಾಡು. ನಾನು ನಿನ್ನಿಷ್ಟಕ್ಕೆ ವಿರೋಧವಾಗಿ ಯಾರಿಗೂ ವಿವಾಹ ಮಾಡಿಕೊಡುವುದಿಲ್ಲ'ವೆಂದು ಅಳುತ್ತಾ ಅವಳ ಮೇಲೆ ಬಿದ್ದಳು. ಆಗ ಆ ಆಗಂತುಕನು, 'ತಾಯೀ, ಅಳಬೇಡಿ. ಸಮಾಧಾನ ಮಾಡಿಕೊಳ್ಳಿರಿ. ದೇವರ ದಯೆಯಿದ್ದರೆ ನಿಮ್ಮ ಮಗಳು ಸಾಯಲಿಕ್ಕಿಲ್ಲ' ಎಂದು ಹೇಳಿ, ಅಲ್ಲಿದ್ದ ಇತರ ಹೆಂಗಸರೊಡನೆ, ಪೂವಿಯ ಒದ್ದೆಬಟ್ಟೆಯನ್ನು ಬಿಚ್ಚಿ, ಬೆಚ್ಚಗಿರುವ ಬಟ್ಟೆಗಳನ್ನು ತೊಡಿಸಹೇಳಿದನು. ಅನಂತರ ಅವಳನ್ನು ಬೆನ್ನು ಮೇಲಾಗಿ ಮಲಗಿಸಿ, ಬೆನ್ನನ್ನು ಒತ್ತಿ ಆಕೆಯ ಹೊಟ್ಟೆಯೊಳಗೆ ಹೋಗಿದ್ದ ನೀರನ್ನು ಹೊರಗೆಡಹಿ, ಅಲ್ಲಿದ್ದ ಹೆಂಗಸರಿಗೆ ಅವಳ ಮೈಯ ಸಂದುಗಳಿಗೆಲ್ಲಾ ಬೇವಿನೆಣ್ಣೆಯನ್ನು ಹಾಕಿ ತಿಕ್ಕುವುದಕ್ಕೂ, ಬಟ್ಟೆಯಿಂದ ಶಾಖವನ್ನು ಕೊಡುವುದಕ್ಕೂ ಹೇಳಿದನು

ಆ ಹೆಂಗಸರು ಹಾಗೆಯೇ ಮಾಡಿದರು. ಅಲ್ಲಿ ನೆರೆದಿದ್ದವರೆಲ್ಲರಿಗೂ ಆ ಆಗಂತುಕರ ಕೆಲಸಗಳನ್ನು ನೋಡಿ ಆಶ್ಚರ್ಯವೂ ಅಭಿಮಾನವೂ ಉಂಟಾಯಿತು. ಆ ಆಗಂತುಕರು ನೋಡಲಿಕ್ಕೆ ಮುಸಲ್ಮಾನರಂತಿದ್ದರೂ ಕೊಡಗು ಮಾತನ್ನು ಏನೂ ತೊಡಕಿಲ್ಲದೆ ಮಾತನಾಡುತ್ತಿದ್ದರು. ಇವರ ಮಾತನ್ನು ಕೇಳಿ ಮತ್ತು ಇವರ ಆಕಾರವನ್ನು ನೋಡಿ ಪೂವಮ್ಮನ ತಾಯಿಗೆ

ತಾನು ಇವರನ್ನು ಮೊದಲೆಲ್ಲಿಯೋ ನೋಡಿದ ಜ್ಞಾಪಕವುಂಟಾಯಿತು. ಈ ಸಮಯದಲ್ಲಿ ಪೂವಿಯು ಮೆಲ್ಲನೆ ಉಸಿರಾಡಿಸತೊಡಗಿದಳು ಬಳಿಕ ಸ್ವಲ್ಪ ಹೊತ್ತಿನಲ್ಲಿ ಮೆಲ್ಲನೆ ಕಣ್ತೆರೆದು ಸುತ್ತಲೂ ನೋಡಿದಳು. ಆಗ ಅವಳ ತಾಯಿಯು ಅವಳ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು:— 'ಪೂವೀ, ನೀನು ಏಕೆ ನೀರಿಗೆ ಬಿದ್ದೆ? ನಾನು ನಿನ್ನನ್ನು ಮಾಚುವಿಗೇ ಮದುವೆ ಮಾಡಿ ಕೊಡುವೆನು' ಎಂದು ಹೇಳಿ, ಅವಳ ಮುಖವನ್ನು ತನ್ನ ಕೈಗಳಿಂ ದೊರೆಸಿದಳು ಅನಂತರ ಅವಳು ಆಗಂತುಕರನ್ನು ನೋಡಿ, 'ಅಪ್ಪಾ, ನೀವು ಯಾರು? ನೋಡುವದಕ್ಕೆ ಮಹಮ್ಮದೀಯರಂತೆ ಕಾಣುತ್ತಿರುವಿರಿ; ಆದರೆ ಮೊದಲು ನಿಮ್ಮನ್ನೆಲ್ಲಿಯೋ ನೋಡಿದಂತೆ ತೋರುತ್ತಿದೆ ನೀವು ನನ್ನ ಮಗಳನ್ನೂ ಮಗನನ್ನೂ ಬದುಕಿಸಿ, ನನ್ನ ಪ್ರಾಣವನ್ನು ಬದುಕಿಸಿದಿರಿ' ಎಂದಳು.

ಆಗ ಮಾದಪ್ಪನು ಎರಡನೆಯ ಆಗಂತುಕನೊಡನೆ ಬಂದು: 'ಅಮ್ಮಾ, ಇವರ್ಯಾರೆಂದು ಯೋಚಿಸುವೆ? ಇವರೇ ನಮ್ಮ ಪೂವಿಯನ್ನು ತುರುಕರ ಕೈಯಿಂದ ಬಿಡಿಸಿದ್ದ ಐಯಪ್ಪಣ್ಣ ಮತ್ತು ಮಾಚಣ್ಣನವರು' ಎಂದು ಹೇಳಿದನು. ಜಾಣಾಕ್ಷನಾದ ನಮ್ಮ ವಾಚಕರು ಈ ಮೊದಲೇ ಈ ಆಗಂತುಕರನ್ನು ಯಾರೆಂದೂಹಿಸಿರಬಹುದು. ಮಾದಪ್ಪನು ಅವನ ತಾಯಿಗೆ ಪರಿಚಯ ಮಾಡಿಕೊಟ್ಟ ಕೂಡಲೆ ಇವರಿಬ್ಬರೂ ಆ ಮುದುಕಿಯ ಪಾದಗಳನ್ನು ಹಿಡಿದರು ಆಗ ಮುದುಕಿಯು ಇವರನ್ನು ನೋಡಿ:—'ಅಯ್ಯಾ, ನೀವು ನಮ್ಮ ಭಾಗ್ಯದ ದೇವರೇ ಸರಿ ನಮ್ಮನ್ನು ಈಗ ಬಂದೊದಗಿದ ವಿಪತ್ತಿನಿಂದ ಪಾರು ಮಾಡಿದಿರಿ; ಆದರೆ ನಾನು ನಿಮ್ಮ ಮಾಚುವಿಗೆ ಬಹಳ ದೊಡ್ಡ ಅನ್ಯಾಯವನ್ನು ಮಾಡಬೇಕೆಂದಿದ್ದೆನು ಪೂವಿಯನ್ನು ನನ್ನ ಬಲ ಅಣ್ಣನ ಮಗನಿಗೆ ಕೊಟ್ಟು ವಿವಾಹವನ್ನು ಮಾಡಬೇಕೆಂದಿದ್ದೆನು ಅದಕ್ಕಿಷ್ಟಪಡದೆ ಪೂವಿಯು ಹೊಳೆಗೆ ಹಾರಿಬಿಟ್ಟಳು.' ಹೀಗೆಂದು ಹೇಳಿ ನಡೆದ ಆ ದುರ್ಘಟನೆಯ ಪೂರ್ವ ಚರಿತ್ರೆಯನ್ನೆಲ್ಲ ಹೇಳಿದಳು ಇದನ್ನು ಕೇಳಿ ಮಾಚುವಿನ ಮುಖವು ಸಂತೋಷದಿಂದ ಅರಳಿತು ಆ ಮುದುಕಿಯು ಮಾಚುವಿನ ಕಡೆಗೆ ನೋಡಿ: 'ನಿಮಗೆ ಪೂವಿಯನ್ನು ಕೊಡುವೆನು ನೀವೇ ಅವಳನ್ನು ವಿವಾಹವಾಗಬೇಕು.' ಎಂದು ಕೇಳಿಕೊಳ್ಳಲು, ಮಾಚುವು ಅದಕ್ಕೆ ಸಂತೋಷದಿಂದ ಸಮ್ಮತಿಸಿದನು.

ನಂತರ ಅಲ್ಲಿ ನೆರೆದಿದ್ದವರ ಸಹಾಯದಿಂದ ಪೂವಮ್ಮನನ್ನು ಮನೆಗೆ ಕರೆದುಕೊಂಡು ಹೋದರು. ಮಾದಪ್ಪನು ಅಯ್ಯಪ್ಪನ ಕೈಯನ್ನು ಹಿಡಿದುಕೊಂಡು ಮೆಲ್ಲನೆ ನಡೆದನು. ಪೂವಮ್ಮನಿಗಿನ್ನೂ ಬಾಹ್ಯಪ್ರಪಂಚದ ಅರಿವು ಉಂಟಾಗಲಿಲ್ಲ. ಆ ದಿವಸ ರಾತ್ರಿ ಆಕೆಗೆ ಕಠಿಣವಾದ ಜ್ವರವು ಬಂದಿತು. ಹುಚ್ಚುಚ್ಚಾಗಿ ಮಾತನಾಡಲಾರಂಭಿಸಿದಳು. ಆ ಹುಚ್ಚಿನಲ್ಲಿ ಆಕೆಯು:—'ನನಗೆ ಈ ಮದುವೆ ಬೇಡ. ನನ್ನ ಮಾಚುವು ಬರದೇ ಹೋದರೆ ನನ್ನ ಪ್ರಾಣವನ್ನು ಕಳೆದುಕೊಳ್ಳುವೆನು. ಅಪ್ಪಾ, ನನಗೆ ಈ ಮದುವೆ ಮಾಡಿಸಬೇಡ' ಎಂದು ಆಗಾಗ್ಗೆ ಗಟ್ಟಿಯಾಗಿ ಕೂಗುತ್ತಿದ್ದಳು. ಅವಳನ್ನು ನೋಡಿ ಮಾಚುವಿಗೆ ಬಹಳ ವ್ಯಸನವಾಯಿತು; ಆದರೆ ಐಯಪ್ಪನು ತುಂಬಾ ಲೋಕಾನುಭವವುಳ್ಳವನೂ ಹೆಚ್ಚು ವಯಸ್ಸಿನವನೂ ಆಗಿದ್ದನು. ಆತನಿಗೆ ಹಳ್ಳಿಯ ನಾರು-ಬೇರುಗಳ ಔಷಧಿಯನ್ನು ಮಾಡುವದಕ್ಕೆ ತಿಳಿದಿದ್ದಿತು. ಆತನು ಒಂದು ಕಾಡು ಮೂಲಿಕೆಯನ್ನು ತಂದು, ಅದನ್ನು ಜಜ್ಜಿ ಅದರ ರಸವನ್ನು ಪೂವಮ್ಮನಿಗೆ ಕುಡಿಸಿದನು. ಇನ್ನೊಂದು ಮೂಲಿಕೆಯ ರಸವನ್ನು ಅವಳ ಅಂಗಾಂಗಗಳಿಗೂ ಹಚ್ಚಿಸಿದನು. ಬೆಳಗಾಗುವಷ್ಟರಲ್ಲಿ ಅವಳ ಜ್ವರವು ಕಡಿಮೆಯಾಯಿತು. ಆಗ ಅವಳು ನಿದ್ರೆಯಿಂದ ಎಚ್ಚತ್ತವಳ ಹಾಗೆ ಕಣ್ತೆರೆದು ತನ್ನ ಸುತ್ತಲೂ ನೋಡಿದಳು. ಆಗ ಮಂಚದ ಒಂದು ಬದಿಯಲ್ಲಿ ಕುಳಿತಿದ್ದ ಮಾಚುವು ಅವಳ ದೃಷ್ಟಿಗೆ ಬಿದ್ದನು. ಒಂದು ಕ್ಷಣಕಾಲ ಅವಳು ಅವನನ್ನೇ ಎವೆಯಿಕ್ಕದೆ ನೋಡಿದಳು. ಅವಳ ಮುಖವು ಸಂತೋಷದಿಂದೊಮ್ಮೆ ವಿಕಸಿತವಾಗಿ ತಿರುಗಿ ಖಿನ್ನವಾಯಿತು. ಆಗ ಮಾದಪ್ಪನು:—'ಪೂವೀ, ಇನ್ನು ಬೇಸರಪಡಬೇಡ. ಇವರೇ ನಿನ್ನ ಪ್ರೀತಿಯ ಭಾವೀ ಪತಿಗಳು; ಇವರಿಗೇ ನಿನ್ನನ್ನು ಕೊಟ್ಟು ವಿವಾಹ ಮಾಡುವೆವು' ಎಂದು ಹೇಳಿದನು. ಪೂವಿಯು ಮಾಚುವಿನ ಕಡೆಗೆ ನೋಡಿ ಲಜ್ಜೆಯಿಂದ ಕಣ್ಣನ್ನು ಮುಚ್ಚಿಕೊಂಡಳು. ಆಗ ಅವರಿಬ್ಬರಲ್ಲುಂಟಾದ ಆನಂದವನ್ನು ಅನುಭವದಿಂದ ತಿಳಿಯಬೇಕಲ್ಲದೆ, ವರ್ಣಿಸಲಸಾಧ್ಯವಾಗಿರುವದು.



## ದಳ :: ೧೯

ಇತ್ತಲಾಗಿ ಪೂವಮ್ಮನು ತನ್ನ ಮಗನನ್ನು ವಿವಾಹವಾಗಲು ಇಷ್ಟವಿಲ್ಲದೆ ಪ್ರಾಣತ್ಯಾಗ ಮಾಡಲು ನದಿಯಲ್ಲಿ ಮುಳುಕಿದಳೆಂಬ ವರ್ತಮಾನವು ಪೂವಮ್ಮನ ತಾಯಿಯು ಬಲ ಅಣ್ಣನಾದ ಬೆಳ್ಯಪ್ಪನಿಗೂ ಅವನ ನೆಂಟರಿಷ್ಟರಿಗೂ ತಿಳಿಯಿತು. ಈ ಸಂದರ್ಭದಲ್ಲಿ ಕೊಡಗಿನ ಮುಖ್ಯ ಜನಾಂಗವಾದ ಕೊಡಗರ ವಿಚಿತ್ರ ವಿವಾಹ ಪದ್ಧತಿಗಳನ್ನು ವಿವರಿಸದಿದ್ದರೆ ಈ ಸನ್ನಿವೇಶವು ವಾಚಕರಿಗೆ ತಿಳಿಯಲಾರದು; ಯಾತಕ್ಕೆಂದರೆ, ಆ ವಿವಾಹಕ್ಕೆ ಸಂಬಂಧಿಸಿದ ಪಾತ್ರಗಳು ಕೊಡಗರಾಗಿರುವರು.

ಕೊಡಗರ ವಿವಾಹಪದ್ಧತಿಯು ಇತರ ಹಿಂದುಗಳ ವಿವಾಹಪದ್ಧತಿಗಿಂತ ತೀರ ಭಿನ್ನವಾಗಿದೆ. ವಿವಾಹದ ಮುಖ್ಯ ದಿವಸದಲ್ಲಿ ಅಂದರೆ ವಿವಾಹ ಶುಭ ಮುಹೂರ್ತದ ದಿವಸದಲ್ಲಿ ವರನೂ ವಧುವೂ ತಮ್ಮ ತಮ್ಮ ಮನೆಗಳಲ್ಲಿಯೇ ಇರುವರು ಆ ದಿವಸ ವರನ ಆಪ್ತ-ಬಂಧುಗಳೂ ಸ್ನೇಹಿತರೂ ವರನ ಮನೆಗೆ ಹೋಗುವರು. ಹಾಗೆಯೇ ವಧುವಿನ ಮನೆಯವರ ಬಂಧುಗಳೂ ಸ್ನೇಹಿತರೂ ವಧುವಿನ ಮನೆಗೆ ಹೋಗುವರು ನಿಶ್ಚಿತ ಮುಹೂರ್ತ ಕಾಲಕ್ಕೆ ಸರಿಯಾಗಿ ವಧೂ-ವರರು ತಮ್ಮ ತಮ್ಮ ಗೃಹಗಳಲ್ಲಿ ಮಂಗಳ ಸ್ನಾನ ಮಾಡಿ ಬಂದು ಮನೆಯ ಮುಂಭಾಗದ ಚಪ್ಪರದಲ್ಲಿರುವ ವಿವಾಹ ಮಂಟಪದಲ್ಲಿ ಮೂರು ಕಾಲುಗಳುಳ್ಳ ಒಂದು ಮಣೆಯ ಮೇಲೆ ಕುಳಿತು ಕೊಳ್ಳುವರು. ಅನಂತರ ಅಲ್ಲಿ ನೆರೆದಿದ್ದವರೆಲ್ಲರೂ ವಧೂ ಅಥವಾ ವರನ ತಲೆಗೆ ಸ್ವಲ್ಪ ಅಕ್ಕಿಯನ್ನು ಹಾಕಿ, ಸ್ವಲ್ಪ ಹಾಲನ್ನು ಕುಡಿಸಿ, ತಾವು ಕೊಡುವ ಉಡುಗೊರೆಯ ಹಣವನ್ನು ಕೊಡುವರು. ಮನೆಯವರಾದಿಯಾಗಿ ಎಲ್ಲರೂ ಹಣವನ್ನು ಕೊಟ್ಟನಂತರ ಮನೆಯವರೂ ಬಂದ ನೆಂಟರಿಷ್ಟರೂ ಊಟಕ್ಕೇಳುವರು ಊಟವಾದ ನಂತರ ಬಹಳ ಸಮೀಪದ ಬಂಧುಗಳ ಹೊರತು ಉಳಿದವರು ತಮ್ಮ ತಮ್ಮ ಮನೆಗೆ ಹೋಗುವರು. ಇದೇ ರೀತಿಯಲ್ಲಿ ವಧುವಿನ ಮನೆಯಲ್ಲಿಯೂ ನಡೆಯುವದು. ಮಾರನೇ ದಿವಸ ಸೂರ್ಯೋದಯಕ್ಕೆ ಸ್ವಲ್ಪ ಮುಚಿತವಾಗಿ ವಧುವಿನ ಮನೆಗೆ ವರನೂ ಆತನ ಸಮೀಪದ ಬಂಧುಗಳೂ ಹೋಗುವರು. ವಧು-ವರರ ಮನೆಗಳು ಕೆಲವು ಸಾರೆ ಇಪ್ಪತ್ತು-ಮೂವತ್ತು ಮೈಲುಗಳ ದೂರದಲ್ಲೂ ಇರುವದುಂಟು. ವರನೂ ಆತನ ಸಮೀಪದ ಬಂಧುಗಳೂ ಹಿಂದಿನ ಕಾಲದಲ್ಲಿ ನಡೆದುಕೊಂಡು

ಹೋಗುತ್ತಿದ್ದರು; ಆದರೆ ಆಗ ವಧೂ-ವರರ ಮನೆಗಳೊಂದೊಕ್ಕೊಂದು ಎಂಟು-ಹತ್ತು ಮೈಲುಗಳಿಗಿಂತ ಹೆಚ್ಚು ದೂರದಲ್ಲಿರುತ್ತಿರಲಿಲ್ಲ. ಈಗ ವಾಹನಗಳ ಸೌಕರ್ಯವಿರುವದರಿಂದ ವರನು ತನ್ನ ಬಂಧುಗಳೊಡನೆ ದೂರ ದಲ್ಲಿರುವ ವಧುವಿನ ಮನೆಗೆ ಮೋಟರಗಾಡಿಗಳಲ್ಲಿ ಹೋಗುವನು.

ವರನು ವಧುವಿನ ಮನೆಗೆ ಸೂರ್ಯೋದಯಕ್ಕೆ ಮುಂಚಿತವಾಗಿ ತಲುಪಿ, ಅಲ್ಲಿ ನೆಟ್ಟಿರುವ ಬಾಳೇಮರದ ತುಂಡುಗಳನ್ನು ತನ್ನ ಸೊಂಟದಲ್ಲಿ ರುವ ಕತ್ತಿಯಿಂದ ಕತ್ತರಿಸಿ, ಅನಂತರ ವಧುವಿನ ಮನೆಯಲ್ಲಿ ಒಂದು ಮದುವೆಯೂಟ ಮಾಡಿ, ಅದೇ ದಿವಸ ವಧುವಿನೊಡನೆ ತನ್ನ ಮನೆಗೆ ಹಿಂತಿರುಗುವನು. ಇದೇ ಕೊಡಗರಲ್ಲಿರುವ ವಿವಾಹಪದ್ಧತಿಯು.

ಹೀಗಾಗಿ ನಾವು ಹಿಂದೆ ಹೇಳಿದಂತೆ ಪೂವಮ್ಮನ ವಿವಾಹದ ಮುಹೂರ್ತದ ದಿವಸವೇ ಆಕೆಗೆ ನಿಶ್ಚಯಿಸಿದ್ದ ವರನ ಮದುವೆಯಲ್ಲಿಯೂ ಆತನಿಗೆ ಮಂಗಳಸ್ನಾನ. ಉಡುಗೋರೆ ಮೊದಲಾದವು ನಡೆದವು ಆತನ ಬಂಧುಗಳೂ ಸ್ನೇಹಿತರೂ ಆತನ ಮನೆಗೆ ಬಂದಿದ್ದರು; ಆದರೆ ಆ ದಿವಸ ಸಾಯಂಕಾಲದ ಹೊತ್ತಿನಲ್ಲಿ ಪೂವಮ್ಮನು ವಿವಾಹ ಮಾಡಿಕೊಳ್ಳುವದಕ್ಕೊಡಂಬಡದೆ, ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಪ್ರಯತ್ನಿಸಿದುದು ಅವರಿಗೆ ತಿಳಿಯು ಬಂದಿತು. ಇದರಿಂದ ಅವರೆಲ್ಲರಿಗೂ ಬಹಳ ಅವಮಾನವಾಯಿತು ವಧುವು ತಪ್ಪಿಹೋದುದಕ್ಕಾಗಿ ದುಃಖವೂ ಆಯಿತು. ವಧುವೇ ತಮ್ಮ ಕಡೆಯುವರನ್ನು ತಿರಸ್ಕರಿಸಿದುದಕ್ಕೆ ವರನಿಗೂ ಅವನ ತಂದೆ ಬೆಳ್ಯಪ್ಪನಿಗೂ ಸೋದರಮಾವ ಪೊನ್ನಪ್ಪನೆಂಬವನಿಗೂ ಬಹಳ ಸಿಟ್ಟು ಬಂತು. 'ಆ ಜಂಭದ ಹುಡುಗಿಗೂ ಅವಳ ಮನೆಯುವರಿಗೂ ಬುದ್ಧಿಕಲಿಸಬೇಕು' ಎಂದು ಅವರು ನಿಶ್ಚೈಸಿದರು. ಇಷ್ಟರಲ್ಲಿ ಮೂರನೇ ದಿವಸ ಬೆಳಿಗ್ಗೆ ಮಾಚು ಮತ್ತು ಅಯ್ಯಪ್ಪನು ಬಂದು ಪೂವಮ್ಮನನ್ನೂ ಆಕೆಯ ಅಣ್ಣನನ್ನೂ ಸೀರಿನಿಂದೆತ್ತಿ ಬದುಕಿಸಿದ ವರ್ತಮಾನವೂ ತಿಳಿಯಿತು. ಪೂವಮ್ಮನು ಮಾಚುವನ್ನು ಪ್ರೀತಿಸುವದೂ, ಪೂವಮ್ಮನನ್ನು ಮಾಚುವಿಗೆ ವಿವಾಹ ಮಾಡಿಕೊಡುವುದಾಗಿ ಪೂವಮ್ಮನ ತಾಯಿಯು ಮೊದಲು ಮಾತು ಕೊಟ್ಟಿದ್ದೂ ಅವರಿಗೆ ಗೊತ್ತಿದ್ದಿತು. ಈಗ ಮಾಚುವು ತಿರುಗಿ ಬಂದಿರುವನೆಂದು ತಿಳಿಯಲು ಅವರಿಗೆ ಆತನ ಮೇಲೆ ಕೋಪವೂ ಪೂವಮ್ಮನನ್ನು ಆತನು ವಿವಾಹವಾಗುವನೆಂದು ಆತನಲ್ಲಿ ಅಸೂಯೆಯೂ ತಲೆದೋರಿದವು. ಹೇಗಾದರೂ ಮಾಡಿ ಪೂವಮ್ಮ

ನನ್ನು ಮಾಚುವು ಮದುವೆಯಾಗದಂತೆ ಮಾಡಿ, ಪೂವನು ನನ್ನು ಬಲಾತ್ಕಾರದಿಂದ ತನ್ನ ಮಗನಿಗೆ ಮದುವೆ ಮಾಡಿಸಿ ಅವಳ ಗರ್ವವನ್ನು ಮುರಿಯಬೇಕೆಂದು ಬೆಳ್ಯಪ್ಪನು ಹಟತೊಟ್ಟನು. ಆತನ ಈ ಉದ್ದೇಶ ಸಾಧನೆಗೆ ತಾನೂ ಸಹಾಯಮಾಡುವುದಾಗಿ ಆತನ ಹೆಂಡತಿಯ ತಮ್ಮ ಪೊನ್ನಪ್ಪನು ಮುಂದೆ ಬಂದನು. ಇವರಿಬ್ಬರೂ ಬೆಳ್ಯಪ್ಪನ ಮಗನೂ ತಮಗಾದ ಅವಮಾನಕ್ಕೆ ಪ್ರತೀಕಾರವನ್ನೇನು ಮಾಡುವುದೆಂದು ಬಹಳವಾಗಿ ಆಲೋಚಿಸಿದರು. ಪೂವಮ್ಮನನ್ನು ಅವಳ ಮನೆಯಿಂದ ಬಲಾತ್ಕಾರದಿಂದ ಹಿಡಿದು ತರೋಣವೆಂದರೆ ಆಕೆಯ ಮನೆಯು ನೆರೆಹೊರೆಯವರೆಲ್ಲರೂ ಅವರಿಗೆ (ಪೂವಮ್ಮನ ಮನೆಯವರಿಗೆ) ಸಹಾಯ ಮಾಡುವವರಾಗಿದ್ದರು. ಆದುದರಿಂದ ಅದು ಅಸಾಧ್ಯವಾದ ಮಾತು ಕೊನೆಗೆ ಅವರು ಆಲೋಚಿಸಿ ಮಡಿಕೇರಿಯ ಟಿಪ್ಪುಸುಲ್ತಾನನ ಕಿಲ್ಲೆದಾರನಿಗೆ "ಮಾದಪ್ಪನೂ, ಮಾಚುವೂ, ಆತನ ಸ್ನೇಹಿತರೂ ನೂರಂಬಾಡಿನಲ್ಲಿ ಸುಲ್ತಾನನಿಗೆ ವಿರೋಧವಾಗಿ ಒಳಸಂಚು ಮಾಡುತ್ತಿರುವರೆ"ಂದು ಹೇಳಿ, ಅವನ ಸೈನಿಕರನ್ನು ಗುಟ್ಟಾಗಿ ಕರೆದುಕೊಂಡು ಬಂದು ಇವರನ್ನೆಲ್ಲ ಅವರಿಂದ ಸೆರೆ ಹಿಡಿಸಬೇಕೆಂದು ನಿಶ್ಚಯ ಮಾಡಿದರು. ಆ ಕ್ಷಣವೇ ಬೆಳ್ಯಪ್ಪನೂ ಆತನ ಭಾವನೂ ಮಡಿಕೇರಿಗೆ ಹೊರಟರು. ಆಗ ಮಡಿಕೇರಿಗೆ ನಡೆದೇ ಹೋಗಬೇಕಾಗಿತ್ತು. ಇವರ ಮನೆಯಿಂದ ಮಡಿಕೇರಿಗೆ ಹೋಗಬೇಕಾಗಿದ್ದರೆ ದಾರಿಯಲ್ಲಿ ಬಲಮುರಿಯಲ್ಲಿ ಕಾವೇರಿ ನದಿಯನ್ನು ದಾಟಬೇಕಾಗಿದ್ದಿತು. ಇವರು ದಾರಿ ನಡೆಯುತ್ತ ಕಾವೇರಿ ನದಿಯ ದಂಡೆಗೆ ಬಂದಾಗ ಹೊತ್ತು ಮಧ್ಯಾಹ್ನವಾಗಿದ್ದಿತು. ಆಗ ಅವರು ತಾವು ತಂದಿದ್ದ ಅನ್ನದ ಬುತ್ತಿಯನ್ನು ಬಿಚ್ಚಿ, ಅಲ್ಲಿಯೇ ಊಟ ಮಾಡುವದಕ್ಕೆ ಕುಳಿತುಕೊಂಡರು ಇವರು ಕುಳಿತುಕೊಂಡ ಸ್ಥಳದ ಹಿಂದುಗಡೆಗೆ ಕೆಲವು ಮರಗಳು ಒತ್ತಾಗಿ ದಟ್ಟವಾಗಿ ಬೆಳೆದಿದ್ದವು. ಇವರು ಊಟ ಮಾಡುತ್ತಿರುವಾಗ ಬೆಳ್ಯಪ್ಪನು 'ಮಡಿಕೇರಿಯಲ್ಲಿ ನಾವು ಕಿಲ್ಲೆದಾರನ ಹತ್ತರ ಹೇಗೆ ಹೋಗುವದು?' ಎಂದನು.

ಪೊನ್ನಪ್ಪ:-ನಾನೂ ಅದೇ ಆಲೋಚನೆಯನ್ನು ಮಾಡುತ್ತಿದ್ದೇನೆ ನಾನು ಮಡಿಕೇರಿಗೆ ಹೋಗದೆ ಬಹಳ ವರ್ಷಗಳಾದವು

ಬೆಳ್ಯಪ್ಪ:—ನಾವು ಮನೆಯಿಂದ ಹೊರಡುವಾಗ ಯೋಚಿಸಿದಷ್ಟು ಸಮ್ಮ ಆ ಕೆಲಸವು ಸುಲಭವಾಗಿಲ್ಲ.

ಪೊನ್ನಪ್ಪ:—ನೋಡುವ. ಕಗ್ಗೋಡಿನಲ್ಲಿರುವ ನನ್ನ ದೂರದ ದಾಯಾದಿಯೊಬ್ಬನು ಮುಸಲ್ಮಾನ ಜಾತಿಗೆ ಸೇರಿ, ಮಡಿಕೇರಿಯಲ್ಲಿ ಕೋಟೆ ಪಹರೆಯಲ್ಲಿದ್ದಾನೆಂದು ಕೇಳಿರುವೆನು. ಅವನನ್ನು ಕಂಡರೆ ನಮ್ಮ ಕೆಲಸವಾದೀತು.

ಬೆಳ್ಯಪ್ಪ:—ಅವನು ಅಲ್ಲಿ ಇದ್ದಾನೋ ಇಲ್ಲವೋ? ನಾವು ಮಾದನನ್ನೂ ಮಾಚುವನ್ನೂ ಮುಸಲ್ಮಾನರಿಂದ ಸೆರೆಹಿಡಿಸುತ್ತೇವೆಂದು ಹೊರಟು ಬಂದು ಏನೂ ಮಾಡದೆ ಹಿಂದಕ್ಕೆ ಹೋದರೆ ಎಲ್ಲರೂ ನಮ್ಮನ್ನು ನೋಡಿ ಹಾಸ್ಯ ಮಾಡಲಾರರೆ?

ಪೊನ್ನಪ್ಪ:—ಅದೇನೋ ನಿಜ. ಮಡಿಕೇರಿಯಲ್ಲಿ ನಮ್ಮ ಗುರುತಿನವರು ಯಾರಾದರೂ ಸಿಕ್ಕದಿದ್ದರೆ ನಾವೇ ಯಾವನಾದರೂ ಮುಸಲ್ಮಾನ ಸರದಾರನನ್ನು ಭೇಟಿಯಾಗಿ ಆತನ ಮೂಲಕ ಕಿಲ್ಲೆದಾರನನ್ನು ಕಾಣುವ.

ಬೆಳ್ಯಪ್ಪ:—ಹೇಗಾದರೂ ಆಗಲಿ ಆ ಸೂಳೇಮಗ ಮಾಚುವನ್ನೂ ಅವನ ಜೊತೆಯವನನ್ನೂ ಮಾದನನ್ನೂ ಸುಮ್ಮನೆ ಬಿಡಬಾರದು ಆ ಪೂವಿಯ ಗರ್ವವನ್ನಿಳಿಸಬೇಕು.

ಈ ಮಾತುಗಳಾಗುವಷ್ಟರಲ್ಲಿ ಅವರ ಊಟವಾಗಿ, ಅವರು ತಿರುಗಿ ತಮ್ಮ ಪಯಣವನ್ನು ಮುಂದರಿಸಿದರು. ಅವರು ಕಣ್ಮರೆಯಾದ ಕೂಡಲೆ ಅವರು ಕುಳಿತಿದ್ದ ಸ್ಥಳದ ಹಿಂದುಗಡೆಯ ಮರಗಳ ಗುಂಪಿನ ಕಡೆಯಿಂದ 'ದಡ್' ಎಂದು ಏನೋ ಬಿದ್ದ ಶಬ್ದವಾಯಿತು. ಒಂದೆರಡು ನಿಮಿಷಗಳಲ್ಲಿ ಅದೇ ಸ್ಥಳದಿಂದೊಬ್ಬ ಮನುಷ್ಯನು ಹೊರಟು ಬಂದನು. ಆತನು ಇನ್ನ್ಯಾರೂ ಆಗಿರದೆ, ನಮ್ಮ ಪರಿಚಿತನಾದ ಐಯಪ್ಪನಾಗಿದ್ದನು ಆತನು ನೂರಂಬಾಡ ನಾಡಿನಿಂದ ಹೊರಟು ಮೂರ್ನಾಡಿಗೆ ಹೋಗುತ್ತಿದ್ದನು. ಆಗ ಅವನಿಗೆ ಬೆಳ್ಯಪ್ಪ ಮತ್ತು ಆತನ ಭಾವನು ನದಿಯ ಬದಿಯಲ್ಲಿ ಕುಳಿತು ಬುತ್ತಿಯನ್ನು ಬಿಚ್ಚುವದು ಕಂಡು ಬಂತು. ಅವರ್ಯಾರು? ಎಲ್ಲಿಗೆ ಹೋಗುವವರು? ಎಂದು ತಿಳಿಯಬೇಕೆಂಬ ಕುತೂಹಲವುಂಟಾಗಿ ಅವರಿಗೆ ತಿಳಿಯದಂತೆ ಮರಗಳ ಗುಂಪಿನಲ್ಲಿ ಒಂದು ಮರವನ್ನೇರಿ ಎಲೆಗಳ ಮಧ್ಯದಲ್ಲಿ ಕುಳಿತು ಇವರಾಡುವ ಮಾತುಗಳನ್ನು ಕದ್ದು ಕೇಳುತ್ತಲಿದ್ದನು.

ಐಯಪ್ಪನಿಗೆ ಇವರ ಮಾತುಗಳನ್ನು ಕೇಳಿ 'ಈಗ ಒಂದು ಹೊಸ ಸಂಕಟವು ಪ್ರಾಪ್ತವಾಯಿತಲ್ಲ! ಇದನ್ನು ನಿವಾರಿಸುವ ಬಗೆ ಹೇಗೆ?' ಎಂದು ಚಿಂತೆಯುಂಟಾಯಿತು ಆದರೂ 'ಧೈರ್ಯಂ ಸರ್ವತ್ರ ಸಾಧನಂ' ಎಂಬಂತೆ ಆತನು

ಹೆದರವೆ ಇವರ ಆಲೋಚನೆಗಳನ್ನು ನಿಷ್ಫಲವಾಗುವಂತೆ ಮಾಡಿ, ಇವರಿಗೆ ಬುದ್ಧಿಯನ್ನು ಕಲಿಸಬೇಕೆಂದು ನಿರ್ಧರಿಸಿಕೊಂಡನು. ಹಾಗೆಯೇ ಯೋಚಿಸುತ್ತ ಆತನು ಅವರನ್ನು ಹಿಂಬಾಲಿಸುತ್ತ ನಡೆದನು ಬೆಳ್ಯಪ್ಪನೂ ಆತನ ಭಾವನೂ ಮಡಿಕೇರಿಯ ಗುಡ್ಡದ ಕೆಳಭಾಗವನ್ನು ಸೇರಿದರು. ಅಲ್ಲಿಂದ ಮಡಿಕೇರಿಗೆ ಹೋಗುವದಕ್ಕೆ ಒಂದೇಸವನೆ ಕಡಿದಾದ ಬೆಟ್ಟವನ್ನು ಹತ್ತಬೇಕಾಗಿದ್ದಿತು. ಆದುದರಿಂದ ಇವರಿಬ್ಬರೂ ಅಲ್ಲಿ ಒಂದು ಮರದ ಬುಡದಲ್ಲಿ ಸ್ವಲ್ಪ ವಿಶ್ರಮಿಸಿಕೊಳ್ಳುವದಕ್ಕೆ ಕುಳಿತುಕೊಂಡರು. ಐಯ್ಯಪ್ಪನು ಇವರನ್ನು ಹಿಂಬಾಲಿಸುತ್ತ ಬರುತ್ತಿದ್ದನಷ್ಟೆ? ಇವರು ಕುಳಿತದ್ದನ್ನು ನೋಡಿ, ತಾನು ಒಂದು ಮರದ ಮರೆಗೆ ಹೋಗಿ ತನ್ನ ಗಂಟನ್ನು ಬಿಚ್ಚಿ ಟಿಪ್ಪುವಿನ ಸಿಪಾಯಿಯಂತೆ ಉಡುಪು ಧರಿಸಿಕೊಂಡು ಇವರು ಕುಳಿತಿದ್ದಲ್ಲಿಗೆ ಬಂದನು. ಅವರು ಅವನನ್ನು ಅಲ್ಲಿ ಅನಿರೀಕ್ಷಿತವಾಗಿ ಕಂಡುದರಿಂದ ಅವರಿಗೆ ಭಯವೂ ಆಶ್ಚರ್ಯವೂ ಉಂಟಾದುವು ಆಗ ಐಯ್ಯಪ್ಪನು (ಕನ್ನಡ ಮಾತಿನಲ್ಲಿ) 'ಏನು ಗೌಡರೇ, ಎಲ್ಲಿಗೆ ಬಂದಿದ್ದೀರಿ? ಎಂದು ಕೇಳಿದನು

ಬೆಳ್ಯಪ್ಪ:— 'ನಾವು ಇಲ್ಲಿಯೊಂದು ನೆಂಟರ ಮನೆಗೆ ಹೊರಟಿದ್ದೇವೆ ಸಾಬರೇ!'

ಐಯ್ಯಪ್ಪ: - 'ಸುಮ್ಮನೆ ಯಾತಕ್ಕೆ ನನ್ನಲ್ಲಿ ಸುಳ್ಳು ಹೇಳುವಿರಿ? ಮಡಿಕೇರಿಯ ಬುಡಕ್ಕೆ ಈಗ ಬಂದಿರುವಿರಿ. ಇಲ್ಲಿ ಯಾವ ಕೊಡಗರ ಮನೆಯಿದೆ?' ಎಂದು ಹೇಳಿ, ತಿರುಗಿ (ಕೊಡಗು ಭಾಷೆಯಲ್ಲಿ) 'ನಾನು ನಿಮ್ಮ ಸ್ನೇಹಿತನೆಂದು ತಿಳಿದುಕೊಳ್ಳಿ; ನನ್ನಲ್ಲಿ ಮರೆಮಾಚದೆ ಎಲ್ಲ ವಿಷಯಗಳನ್ನು ಹೇಳಿರಿ'

ಪೊನ್ನಪ್ಪ: — ನೀವು ನೋಡಲಿಕ್ಕೆ ಮುಸಲ್ಮಾನರಂತಿದ್ದೀರಿ; ಆದರೆ ಕೊಡಗು ಮಾತನ್ನು ಹುಟ್ಟು ಕೊಡಗರ ಹಾಗೆ ಮಾತಾಡುತ್ತೀರಿ. ನೀವು ಜಾತಿಕೆಟ್ಟ ಕೊಡಗರೇನು?

ಐಯ್ಯಪ್ಪ:— ಹೌದು ನಾನು ದೇವಟುಪರಂಬಿನಿಂದ ತೆಗೆದುಕೊಂಡು ಹೋದವರಲ್ಲೊಬ್ಬನು. ನನ್ನನ್ನು ಪೆರಿಯಾ ಪಟ್ಟಣದಲ್ಲಿ ಬೇರೆಯವರೊಡನೆ ಜಾತಿಕೆಡಿಸಿ ಬಿಟ್ಟರು.

ಪೊನ್ನಪ್ಪ:—ಈಗ ನೀವೇನು ಮಾಡಿಕೊಂಡಿದ್ದೀರಿ?

ಐಯ್ಯಪ್ಪ:-ನಾನೀಗ ಮಡಿಕೇರಿಯಲ್ಲಿ ಪಹರೆಯುವನಾಗಿದ್ದೇನೆ ನಿಮಗೆ ನನ್ನಿಂದೇನಾದರೂ ಕೆಲಸವಾಗಬೇಕಾದರೆ ಹೇಳಿ. ನಾನು ಮಾಡಿಕೊಡುತ್ತೇನೆ.

ಪೊನ್ನಪ್ಪ:—ನಾವೊಂದು ವಿಶೇಷ ಕೆಲಸದ ಮೇಲೆ ಹೊರಟಿದ್ದೇವೆ. ಅದಕ್ಕಾ ನಾವು ಕಿಲ್ಲೆದಾರರನ್ನು ನೋಡಬೇಕಾಗಿದೆ.

ಅಯ್ಯಪ್ಪ:—ಕಿಲ್ಲೆದಾರರು ನನಗೆ ಚೆನ್ನಾಗಿ ಗೊತ್ತಿದೆ. ನಾನು ನಿಮ್ಮನ್ನು ಅವರ ಹತ್ತರ ಕರೆದುಕೊಂಡು ಹೋಗುವೆನು ವಿಶೇಷವೇ ನೆಂಬದನ್ನು ಮೊದಲು ತಿಳಿಸಿರಿ

ಪೊನ್ನಪ್ಪ:—ಸುಲ್ತಾನರ ವಿರೋಧದ ಒಳಸಂಚು ಮಾಡುವ ಪುಂಡರ ಒಂದು ಗುಂಪನ್ನು ನಾವು ಕಂಡುಹಿಡಿದಿದ್ದೇವೆ. ಕಿಲ್ಲೆದಾರರು ನಾಳೆಯೇ ಸೈನಿಕರನ್ನು ಕಳುಹಿ ಅವರನ್ನು ಹಿಡಿಸಿದರೆ ಸುಲ್ತಾನರ ಆಳ್ವಿಕೆಯು ಸುಗಮ ವಾಗುವದು; ಇಲ್ಲದಿದ್ದರೆ ದೇಶದಲ್ಲೆಲ್ಲ ದಂಗೆಯು ಹಬ್ಬುವುದು. ಇದನ್ನು ತಿಳಿಸುವದಕ್ಕೆಂದೇ ನಾವು ಬಂದೆವು.

ಐಯಪ್ಪ:-ಹಾಗೋ! ನೀವು ಎಷ್ಟು ರಾಜಭಕ್ತಿಯುಳ್ಳವರು! ನಮ್ಮನ್ನು ಒಂದು ದೊಡ್ಡ ಅಪಾಯದಿಂದ ರಕ್ಷಿಸಿದ ಹಾಗಾಯಿತು ಕಿಲ್ಲೆದಾರರಿಗೆ ಹೇಳಿ ನಿಮಗೆ ಇನಾಮು |ಕೊಡಿಸುವೆನು.

ಬೆಳ್ಯಪ್ಪ;—ನಮಗೆ ಇನಾಮುಗಳೇನು ಬೇಡ. ಕಿಲ್ಲೆದಾರರ ದಯೆ ಪೊಂದಿದ್ದರೆ ಸಾಕು.

ಹೀಗೆ ಮಾತಾಡಿ ಅವರು ಅಲ್ಲಿಂದ ಹೊರಟು ಸೂರ್ಯಾಸ್ತಕ್ಕೆ ಮೊದಲೇ ಮಡಿಕೇರಿಯನ್ನು ಸೇರಿದರು. ಅಲ್ಲಿ ಕೋಟೆಯ ಬಾಗಿಲಲ್ಲಿ ಕೆಲವು ಜನ ಮುಸಲ್ಮಾನ ಸೈನಿಕರು ಪಹರೆ ಮಾಡುತ್ತಿದ್ದರು ಐಯಪ್ಪನು ಹಿಂದು ಸ್ತಾನಿ ಮಾತನಾಡಲಿಕ್ಕೆ ಪೇಯಾಪಟ್ಟಣದಲ್ಲಿದ್ದಾಗ ಅಭ್ಯಾಸ ಮಾಡಿದ್ದನು. ಆತನು (ಹಿಂದುಸ್ತಾನಿಯಲ್ಲಿ) ಆ ಪಹರೆಯವರೊಡನೆ ತನಗೆ ಕಿಲ್ಲೆದಾರರನ್ನು ಕಂಡು ಅವರಿಗೆ ಒಂದು ರಹಸ್ಯವಾದ ವಿಷಯವನ್ನು ತಿಳಿಸುವದಿದೆ, ಎಂದು ಹೇಳಿದನು. ಅವರು ಈತನು ಮುಸಲ್ಮಾನರ ಉಡುಪಿನಲ್ಲಿರುವುದನ್ನೂ ಹಿಂದುಸ್ತಾನಿ ಭಾಷೆಯನ್ನು ಚೆನ್ನಾಗಿ ಆಡುವದನ್ನೂ ಕೇಳಿ, ತಮ್ಮ ಕಿಲ್ಲೆದಾರ ನಿಗೆ ಹೇಳಿದರು ಆತನು ಐಯಪ್ಪನನ್ನು ಕರೆಸಿ ಆತನೊಡನೆ ಹಿಂದುಸ್ತಾನಿ ಯಲ್ಲಿ:--ಏನು ವಿಶೇಷ? ನೀನೆಲ್ಲಿಂದ ಬಂದೆ? ಎಂದು ಕೇಳಿದನು.

ಐಯಪ್ಪ:--ಹುಜೂರ, ನಾನು ಬೆಪ್ಪುನಾಡಿನಿಂದ ಬರುತ್ತಿರುವಾಗ ಇಬ್ಬರು ಕೊಡಗರು ಕಾವೇರಿ ನದಿಯ ಬಳಿಯಲ್ಲಿ ಕುಳಿತುಕೊಂಡು ಮಾತ ನಾಡುತ್ತಲಿದ್ದರು. ನಾನು ಮರಗಳ ಹಿಂದೆ ನಿಂತು ಅವರಾಡುವ ಮಾತು

ಗಳನ್ನಾಲಿಸುತ್ತಿದ್ದೆನು. ಇವರು ತಮ್ಮಲ್ಲಿಗೆ ಬಂದು, ಸುಲ್ತಾನರ ಹಿತಚಿಂತಕರಂತೆ ನಟಿಸಿ, ಇಲ್ಲಿನ ಬಲಾಬಲಗಳನ್ನು ತಿಳಿಯಬೇಕೆಂದಿದ್ದಾರೆ. ಅವರು ವೀರರಾಜನ ಆಪ್ತ-ಸ್ನೇಹಿತರು; ಮತ್ತು ಗೂಢಚಾರರು ವೀರರಾಜರು ಇನ್ನು ಕೆಲವು ದಿವಸಗಳಲ್ಲಿ ಕೊಡಗಿಗೆ ಬರುವರೆಂದು ಅವರು ತಮ್ಮೊಳಗೆ ಮಾತನಾಡುತ್ತಿದ್ದರು. ಅವರು ಈಗ ನೂರಂಬಾಡದಲ್ಲಿ ಸುಲ್ತಾನರಿಗೆ ವಿರೋಧವಾಗಿ ಒಳಸಂಚು ನಡೆಯುತ್ತಿದೆಯೆಂದು ನಿಮಗೆ ಸುಳ್ಳು ಹೇಳಿ, ನಿಮ್ಮ ಸೈನ್ಯವನ್ನು ಅಲ್ಲಿಗೆ ಕರೆದುಕೊಂಡು ಹೋಗಿ ನಿಮ್ಮನ್ನೆಲ್ಲ ಮೋಸದಿಂದ ಕೊಲ್ಲಿಸಬೇಕೆಂದಿದ್ದಾರೆ ನಾನವರಿಗೆ ಬೇಕಾದವನ ಹಾಗೆ ನಟಿಸಿ, ಸುಲ್ತಾನರನ್ನು ಅವರೊಡನೆ ಒಯ್ದು, ಅವರ ಗುಟ್ಟುಗಳನ್ನೆಲ್ಲ ತಿಳಿದೆನು. ನೀವು ಅವರ ಮಾತುಗಳನ್ನು ನಂಬಬಾರದು.' ಎಂದನು

ಕಿಲ್ಲೆದಾರನು ಐಯಪ್ಪನ ಮಾತುಗಳನ್ನು ಕೇಳಿ ಬೆರಗಾದನು. ಆತನ ಮಾತುಗಳು ನಿಜವೋ-ಸುಳ್ಳೋ ಎಂದು ಕಿಲ್ಲೆದಾರನಿಗೆ ಸಂಶಯ ಉಂಟಾಯಿತು ಇದನ್ನು ತಿಳಿದು ಐಯಪ್ಪನು, 'ಖಾವಂದ, ನನ್ನ ಮಾತುಗಳಲ್ಲೂ ನಂಬಿಕೆಯನ್ನಿಡಬೇಡಿರಿ. ನಾನು ಕುರಾನಿನಾಣೆಯಾಗಿ ಹೇಳುತ್ತೇನೆ. ಅವರು ನಮ್ಮ ಶತ್ರುಗಳ ಕಡೆಯವರು' ಎಂದನು ಕಿಲ್ಲೆದಾರನು ತನ್ನ ಚಾಕರನಿಗೆ ಆಗಲೆ ಆ ಕೊಡಗರನ್ನು ಕರೆತರುವಂತೆ ಹೇಳಿ, ಅವರು ಬಂದೊಡನೆ: —'ನೀವು ಯಾರು? ಏತಕ್ಕೆ ಬಂದಿರಿ?' ಎಂದು ಜೋರಾಗಿ ಕೇಳಿದನು.

ಅವರು ತಾವು ಕೊಡಗರೆಂದೂ ನೂರಂಬಾಡದ ಒಳಸಂಚನ್ನು ತಿಳಿಸುವದಕ್ಕೆ ಬಂದವರೆಂದೂ ಹೇಳಿದರು ಆಗ ಐಯಪ್ಪನು ತನ್ನ ಕಣ್ಣು ಮಿಚುಕಿಸಿದನು. ಕಿಲ್ಲೆದಾರನು ಅವರನ್ನು ನೋಡಿ ಸಿಟ್ಟಿನಿಂದ, 'ನೀವು ಮೋಸಗಾರರು; ವೀರರಾಜನ ಗೂಢಚಾರರಿರುವಿರಿ. ಇಲ್ಲಿಗೆ ಬಂದು ನಮ್ಮ ಕಣ್ಣಿನಲ್ಲಿ ಮಣ್ಣು ಹಾಕುವದಕ್ಕೆ ನೋಡುತ್ತೀರಿ. ನಡೆಯಿರಿ, ಸೆರೆಮನೆಗೆ.' ಎಂದು ಹೇಳಿ, ತನ್ನ ಚಾಕರನಿಗೆ ಅವರನ್ನು ಸೆರೆಮನೆಯಲ್ಲಿಡುವಂತೆ ಆಜ್ಞೆ ಮಾಡಿದನು.

ಪೊನ್ನಪ್ಪನೂ ಬೆಳ್ಳಪ್ಪನೂ ಏನು ಬೊಬ್ಬೆ ಹೊಡೆದರೂ ಪ್ರಯೋಜನವಾಗಲಿಲ್ಲ ಅವರು ಹೋದ ಮೇಲೆ ಐಯಪ್ಪನು ಕಿಲ್ಲೆದಾರನಿಗೆ ಬೊಗ್ಗಿ ನಮಸ್ಕಾರ ಮಾಡಿ, ಮಾರನೆಯ ದಿವಸ ಆತನನ್ನು ಕಾಣುವೆನೆಂದು ಹೇಳಿ, ಕೋಟೆಯನ್ನೆಲ್ಲ ಒಂದು ಸಾರಿ ಸುತ್ತಿ ಬಂದು ಪರೀಕ್ಷಿಸಿ ನೋಡಿದನು.

ಅನಂತರ ಚೆನ್ನಾಗಿ ಕತ್ತಲಾಗುವ ವರೆಗೆ ಕಾದಿದ್ದು, ಕತ್ತಲೆಯಾದ ಮೇಲೆ ಕೋಟೆಯ ಗೋಡೆಯನ್ನೊಂದು ಮರದ ಕೊಂಬೆಯಿಂದ ಹತ್ತಿ, ಅಲ್ಲಿಂದ ಕೋಟೆಯ ಹೊರಗಡೆಗೆ ಹಾರಿ ಕತ್ತಲಲ್ಲಿ ಎಲ್ಲಿಯೋ ಅದೃಶ್ಯನಾದನು.

---

## ದಳ :: ೨೦

ವೀರರಾಜನು ಕುರ್ಚಿ ಪಸ್ಸ್ಯಕ್ಕೆ ತಲುಪಿದ ಕೂಡಲೆ ತಾನು ಮುಂದೇನು ಮಾಡಬೇಕೆಂದು ಆಲೋಚಿಸಿದನು. ಈ ಸಂದರ್ಭದಲ್ಲಿ ಕೊಡಗಿನ ಭೂಸ್ವರೂಪವನ್ನೂ ಟಿಪ್ಪುವಿನ ಆಧಳಿತದ ಸ್ಥಿತಿಯನ್ನೂ ಸ್ವಲ್ಪ ಮಟ್ಟಿಗೆ ವಿವರಿಸ ದಿದ್ದರೆ, ವಾಚಕರಿಗೆ ನಾವು ಮುಂದೆ ವಿವರಿಸುವ ವಿಷಯಗಳು ಚೆನ್ನಾಗಿ ತಿಳಿಯಲಾರವು.

ಕೊಡಗು ಬೆಟ್ಟ, ಗುಡ್ಡ ಮತ್ತು ಕಾಡುಗಳ ಸೀಮೆಯಾಗಿದೆ. ಅಲ್ಲಿ ನಾವು ವಿವರಿಸುವ ಸಮಯದಲ್ಲಿ ರಸ್ತೆಗಳೇ ಇರಲಿಲ್ಲ. ಜನರು ಅಗಲ ಕಿರಿದಾದ ಕಾಲು ದಾರಿಗಳಲ್ಲಿ ಹೋಗಬೇಕಾಗಿದ್ದಿತು ದಾರಿಯಲ್ಲಿ ಅಲ್ಲಲ್ಲಿ ಚಿಕ್ಕ ದೊಡ್ಡ ನದಿಗಳನ್ನೂ, ಹೊಳೆಗಳನ್ನೂ ದಾಟಬೇಕಾಗಿದ್ದಿತು. ಚಿಕ್ಕ ಚಿಕ್ಕ ತೊಡುಗಳಿಗೂ, ಹೊಳೆಗಳಿಗೂ ಕೆಲವು ಸ್ಥಳಗಳಲ್ಲಿ ಸಾಲಗಳನ್ನು ಅಂದರೆ ಉದ್ದವಾಗಿರುವ ಮರದ ತೊಲೆಗಳನ್ನು ಅಡ್ಡವಾಗಿ ಜನರಿಗೆ ದಾಟುವುದಕ್ಕೆ ಹಾಕುತ್ತಿದ್ದರು. ದೊಡ್ಡ ಹೊಳೆಗಳಿಗೆ ಪಾಲಗಳಿರಲಿಲ್ಲ; ಮತ್ತು ದೋಣಿಗಳೂ ಇರಲಿಲ್ಲ. ಇಂಥಾ ಹೊಳೆಗಳನ್ನು ಬೇಸಿಗೆಯಲ್ಲಿ ಮಾತ್ರ ಕೆಲವು ಸ್ಥಳಗಳಲ್ಲಿ ಇಳಿದು ದಾಟಬಹುದಿತ್ತು. ಆದುದರಿಂದ ಮಳೆಗಾಲದ ಪ್ರಾರಂಭದಿಂದ ಆರೇಳು ತಿಂಗಳುಗಳ ವರೆಗೆ ಈ ದೊಡ್ಡ ಹೊಳೆಗಳ ಮಧ್ಯೆ ಇರುವ ಹಳ್ಳಿಗಳು ದ್ವೀಪಗಳ ಹಾಗೆ ಇರುತ್ತಿದ್ದುವು. ಈ ಸಮಯದಲ್ಲಿ ಜನರ ತಿರುಗಾಟವೂ ಬಹಳ ಕಡಿಮೆಯಾಗಿರುತ್ತಿತ್ತು ಒಂದು ನಾಡಿನಿಂದ ಇನ್ನೊಂದು ನಾಡಿಗೆ ಹೋಗಬೇಕಾದರೆ ಕಾಲ-ದಾರಿಗಳು ಗೊತ್ತಿದ್ದವರಿಗೆ ಮಾತ್ರವೇ ಸಾಧ್ಯವಾಗಿತ್ತು. ಇಂಥಾ ಬೆಟ್ಟ-ಗುಡ್ಡಗಳ ಸೀಮೆಯಲ್ಲಿ ದುಷ್ಟ ಮೃಗಗಳ ಭೀತಿಯೂ ವಿಶೇಷವಾಗಿದ್ದಿತು. ಆದುದರಿಂದ ಟಿಪ್ಪುಸುಲ್ತಾನನ ಆಳ್ವಿಕೆಯು ಕೊಡಗಿನ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿರಲಿಲ್ಲ. ಆತನು ಕೊಡಗಿನಲ್ಲಿ ಮಡಿಕೇರಿ, ಕುಶಾಲ್‌ನಗರ, ಭಾಗಮಂಡಲ ಮತ್ತು ಬೆಪ್ಪುನಾಡು ಎಂಬ ನಾಲ್ಕು ಕೋಟೆಗಳನ್ನು ಕಟ್ಟಿಕೊಂಡು ಅವುಗಳ ಸುತ್ತಮುತ್ತಲಿನ ಹಳ್ಳಿ

ಗಳನ್ನು ಮಾತ್ರ ತನ್ನ ಅಧಿಕಾರಿಗಳ ಮೂಲಕ ಆಳುತ್ತಿದ್ದನು. ಕೊಡಗಿನ ನಿವಾಸಿಗಳು ಟಿಪ್ಪುವಿನ ಆಳ್ವಿಕೆಯನ್ನು ಮನ್ನಿಸಿರಲಿಲ್ಲ; ಅವರು ಆಗಾಗ್ಗೆ ಸುಲ್ತಾನನ ವಿರೋಧವಾಗಿ ದಂಗೆಯೇಳುತ್ತಿದ್ದರು. ಶತ್ರುಗಳು ಹತ್ತಿರ ಬಂದಾಗ ಅವರು ಗುಡ್ಡಗಳಿಗೂ ಕಾಡುಗಳಿಗೂ ಓಡಿ ಹೋಗಿ ತಮ್ಮ ತಲೆ ತಪ್ಪಿಸಿಕೊಳ್ಳುತ್ತಿದ್ದರು. ಇವರ ವಾಸಸ್ಥಳಗಳು ಅರಣ್ಯಗಳ ಮಧ್ಯದಲ್ಲಿದ್ದು ಶತ್ರುಗಳಿಗೆ ದುರ್ಗಮವಾಗಿದ್ದುವು. ಹೇರವಳ್ಳಿ ವೀರರಾಜನು ಬಂದಿಳಿದಿದ್ದ ಕುರ್ಚಿ ಗ್ರಾಮವು ಮಹಮ್ಮದೀಯರು ಕಟ್ಟಿದ್ದ ಕೋಟೆಗಳಿಗೆ ಬಹಳ ದೂರವಾಗಿದ್ದು, ಕೊಡಗು-ಮಲೆಯಾಳಗಳ ಸರಹದ್ದಿಗೆ ಸಮೀಪವಾಗಿದ್ದಿತು. ಈ ಭಾಗದಲ್ಲಿ ಕಾಡುಗಳೂ, ಹೊಳೆಗಳೂ ಹೆಚ್ಚಾಗಿದ್ದು, ಮಳೆಗಾಲದಿಂದ ಶಿವರಾತ್ರಿಯ ವರೆಗೂ ಇಲ್ಲಿಗೆ ಹೊರಗಿನವರು ಬರುವುದು ದುಸ್ಸಾಧ್ಯವಾಗಿದ್ದಿತು. ಆದುದರಿಂದಲೇ ವೀರರಾಜನು ತನ್ನ ಪರಿವಾರದವರೊಡನೆ ಅಲ್ಲಿಗೆ ಬಂದಿಳಿದನು.

ವೀರರಾಜನು ಅಲ್ಲಿಗೆ ಬಂದು ತಲಪಿದೊಡನೆಯೇ ತನ್ನ ಆಪ್ತರಾದ ಕೆಲವು ಜನರಿಗೆ ಹೇಳಿ ಕಳುಹಿಸಿದನು. ಅದಕ್ಕೋಸ್ಕರವೇ ಮಾಚು ಮತ್ತು ಐಯಪ್ಪ ಕೊಡಗಿನ ಪಶ್ಚಿಮದಿಕ್ಕಿನ ನಾಡುಗಳಾದ ಕಡಿಯತ್ನಾಡು, ನಾಲ್ಕ್ನಾಡುಗಳಿಗೆ ಹೊರಟಿದ್ದರು. ಆಗಲೆ ದಾರಿಯಲ್ಲಿ ಪ್ರಸಂಗವಶಾತ್ ಪೂವನ್ನನನ್ನೂ, ಮಾದಪ್ಪನನ್ನೂ ನದಿಯಿಂದೆತ್ತಿ ಬದುಕಿಸಿದುದು. ಮಾಚು ಮತ್ತು ಐಯಪ್ಪ ಸಹೋದರರಿಗೆ ಮಾದಪ್ಪನ ಮನೆಯಲ್ಲಿ ಹೆಚ್ಚು ದಿವಸಗಳಿರಲು ಸಾಧ್ಯವಿರಲಿಲ್ಲ. ಅದಷ್ಟು ಬೇಗನೆ ಜನರನ್ನು ಸೇರಿಸಿ ವೀರರಾಜನ ಸಹಾಯಕ್ಕೆ ಹೋಗಬೇಕಾಗಿದ್ದಿತು. ಪೆರಿಯಾಪಟ್ಟಣದಿಂದ ವೀರರಾಜನು ತಪ್ಪಿಸಿಕೊಂಡು ಹೋದನೆಂಬ ವರ್ತಮಾನವು ಟಿಪ್ಪುಸುಲ್ತಾನನಿಗೆ ತಿಳಿದೊಡನೆಯೆ ಆತನು ವೀರರಾಜನನ್ನು ತಿರುಗಿ ಸೆರೆ ಹಿಡಿಯುವುದಕ್ಕೆ ಪ್ರಯತ್ನಿಸದಿರಲಾರನು. ಆದುದರಿಂದ ಸುಲ್ತಾನನು ಕೊಡಗಿಗೆ ಸೈನವನ್ನು ಕಳುಹಿಸುವ ಮೊದಲೇ ವೀರರಾಜನು ಕೊಡಗಿನಲ್ಲಿದ್ದ ಟಿಪ್ಪುವಿನ ಸೈನಿಕರನ್ನೋಡಿಸಿ, ಅವರ ಸ್ವಾಧೀನವಲ್ಲಿದ್ದ ಕೋಟೆಗಳನ್ನು ವಶಪಡಿಸಿಕೊಳ್ಳಬೇಕಾಗಿದ್ದಿತು. ಆದುದರಿಂದ ಮಾಚುವಿಗೂ, ಐಯಪ್ಪನಿಗೂ ಅಲ್ಲಿ ಹೆಚ್ಚು ದಿವಸಗಳಿರಲು ಸಾಧ್ಯವಿರಲಿಲ್ಲ. ಮಾದಪ್ಪನ ತಾಯಿಯೂ, ಮಾದಪ್ಪನೂ ಮಾಚುವನ್ನು ಆಗಲೆ ಪೂವಿಯನ್ನು ವಿವಾಹವಾಗುವಂತೆ ಬಲಾತ್ಕರಿಸಿದರು; ಆದರೆ ಮಾಚು ಆಗ ವಿವಾಹಕ್ಕೆ ತಕ್ಕ ಸಮಯವಲ್ಲವೆಂದೂ, ವೈಶಾಖಮಾಸದಲ್ಲಿ ತಾನು ಪೂವಮ್ಮ

ನನ್ನು ಖಂಡಿತವಾಗಿ ವಿವಾಹವಾಗುವೆನೆಂದೂ ಹೇಳಿ, ಅವರನ್ನು ಸಮಾಧಾನ ಗೊಳಿಸಿದನು. ಅನಂತರ ಮಾದಪ್ಪನಿಗೆ ಅಲ್ಲಿ ಜನರನ್ನು ಸೇರಿಸುವುದಕ್ಕೆ ಮತ್ತು ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಿಡುವುದಕ್ಕೇರ್ಪಡಿಸಿ, ಅವರಿಬ್ಬರು ಅಲ್ಲಿಂದ ಹೊರಟರು. ಹಾಗೆ ಹೊರಟವರಲ್ಲಿ ಐಯಪ್ಪನು ಮೂನಾ೯ಡಿನ ಕಡೆಗೆ ಹೋಗುತ್ತಿದ್ದವನು ಹಿಂದಿನ ದಳದಲ್ಲಿ ವರ್ಣಿಸಿದಂತೆ, ಆ ಇಬ್ಬರು ದೇಶ- ದ್ರೋಹಿಗಳನ್ನು ಸಂಧಿಸಿದನು. ಐಯಪ್ಪನು ತಾನು ಮಡಿಕೇರಿಯಿಂದ ಹೊರಟ ರಾತ್ರಿಯೇ ನಡೆದು ಮೂನಾ೯ಡಿಗೆ ತಲುಪಿದನು. ಮಾರನೆಯ ದಿವಸ ಬೆಳಿಗ್ಗೆ ಅಲ್ಲಿದ್ದ ವೀರರಾಜನ ಪಕ್ಷದವರಿಗೆಲ್ಲ ರಾಜನು ಬೇಗನೆ ಬರುವನೆಂದೂ ನೀವೆ ಲ್ಲರೂ ವೀರರಾಜನಿಗೆ ಸಹಾಯ ಮಾಡುವದಕ್ಕೆ ಬೇಗನೆ ಕುರ್ಚಿ ಗ್ರಾಮಕ್ಕೆ ಬರಬೇಕೆಂದೂ ಗುಟ್ಟಾಗಿ ಹೇಳಿ, ತಾನು ಕಡಿಯತ್ತನಾಡಿಗೆ ಹೋದನು.

ಇತ್ತಲಾಗಿ ಮಾಚುವು ವೀರರಾಜನ ಆಪ್ತರಾದ ಕುಲ್ಲಟ್ಟಿ ಪೊನ್ನಣ್ಣ, ಕೇಟುನಳಿ ಅಚ್ಚುವಣ್ಣ, ಕಟ್ಟಿಚರವನ ಬೋಳುಕರೆಂಬ ವೀರ ತರುಣರಿಗೆ ವೀರರಾಜನು ಪೆರಿಯಾಪಟ್ಟಣದ ಸೆರೆಯಿಂದ ತಪ್ಪಿಸಿಕೊಂಡು ಬಂದ ವರ್ತ ಮಾನವನ್ನು ಹೇಳಿ, ಅವರನ್ನು ಕರೆದುಕೊಂಡು ಕುರ್ಚಿಗ್ರಾಮಕ್ಕೆ ಹೊರ ಟನು. ಐಯಪ್ಪನು ಕಡಿಯತ್ತು ನಾಡಿನಲ್ಲಿದ್ದ ವೀರರಾಜನ ಸ್ನೇಹಿತ ಅಪ್ಪನೆರವನ ಅಪ್ಪಚ್ಚುವನ್ನು ಕರೆದುಕೊಂಡು ಎಡೆನಾಲ್ಕುನಾಡಿನಲ್ಲಿ ಮಾಚು ವಿನ ಜೊತೆಗೆ ಸೇರಿಕೊಂಡನು. ಹೋಗು ಹೋಗುತ್ತಾ ದಾರಿಯಲ್ಲಿ ಇವರು ಶೂರರಾದ ಅನೇಕ ತರುಣರನ್ನು ತಮ್ಮ ಜೊತೆಗೆ ಸೇರಿಸಿಕೊಂಡರು.

ಕುರ್ಚಿಗ್ರಾಮದಲ್ಲಿ ವೀರರಾಜನು ಬಂದ ವರ್ತಮಾನವನ್ನು ತಿಳಿದು ಅಲ್ಲಿಯ ಸುತ್ತಮುತ್ತಲಿನ ಜನರು ಸಂತೋಷಭರಿತರಾದರು. ಅಲ್ಲಿಗೆ ಐದಾರು ಮೈಲುಗಳ ದೂರದಲ್ಲಿ ಬಡಗ ಮುತ್ತಣ್ಣನೆಂಬ ನಾಯಕನಿದ್ದನು. ಈತನು, ಕೊಡಗು ಮಲೆಯಾಳ ಸರಹದ್ದಿನಲ್ಲಿ ಕೊಡಗು ರಾಜನಿಂದ ನೇಮಿಸಲ್ಪಟ್ಟ ನಾಯಕನಾಗಿದ್ದನು. ಈತನ ಕೈಕೆಳಗೆ ನೂರಾರು ಮುಳ್ಳುಕುರುಬರೆಂಬ ಕಾಡು ಜನರಿದ್ದರು. ಬಡಗ ಮುತ್ತಣ್ಣನು ವೀರರಾಜನು ಕೊಡಗಿಗೆ ಬಂದ ವರ್ತಮಾನವನ್ನು ತಿಳಿದೊಡನೆಯೇ ತನ್ನ ಪರಿವಾರದೊಡನೆ ಬಂದು ಆತ ನನ್ನು ಮರ್ಯಾದೆಯಿಂದ ಕಂಡು ಆತನಿಗೆ ಬೇಕಾದ ಅನುಕೂಲತೆಗಳನ್ನು ಮಾಡಿಕೊಟ್ಟನು. ಅಲ್ಲಿ ವೀರರಾಜನ ಮತ್ತು ಆತನ ಕುಟುಂಬದವರ ವಾಸಕ್ಕೆ ಒಂದು ಚಿಕ್ಕ ಅರಮನೆಯನ್ನು ಕಟ್ಟಿಸಿ, ಅದರ ಸುತ್ತಲೂ ಮರದ

ಕೋಟೆಯನ್ನು ಮಾಡಿಸಿದನು. ಆ ಗ್ರಾಮದವರು ರಾಜನಿಗೆ ಬೇಕಾದ ದವಸ-ಧಾನ್ಯಗಳನ್ನು ಒದಗಿಸಿದರು.

ಇಷ್ಟರಲ್ಲಿ ಮಾಚು, ಅಯ್ಯಪ್ಪ ಮತ್ತು ವೀರರಾಜನ ಇತರ ಆಪ್ತರು ಅಲ್ಲಿಗೆ ಬಂದು ಸೇರಿದರು. ಕರಣಿಕ ಸುಬ್ಬಯ್ಯನೂ ಬಂದನು ವೀರರಾಜನನ್ನು ಕಂಡು ಅವರೆಲ್ಲರಿಗೂ ಬಹಳ ಆನಂದವಾಯಿತು ವೀರರಾಜನು ಅವರನ್ನೆಲ್ಲ ಆಲಿಂಗಿಸಿಕೊಂಡು ಅವರ ಯೋಗಕ್ಷೇಮಗಳನ್ನು ಕೇಳಿದನು. ತಮ್ಮ ರಾಜ ಕುಮಾರನು ಬಂದದ್ದರಿಂದ ಎಲ್ಲರಿಗೂ ಹೊಸ ಹುರುಪು ಉಂಟಾಯಿತು. ಈ ವರ್ತಮಾನವನ್ನು ಕೇಳಿ ಕಾಡು-ಗುಡ್ಡಗಳಲ್ಲಿ ಅಡಗಿಕೊಂಡಿದ್ದ ಅನೇಕ ಜನ ಕೊಡಗರು ವೀರರಾಜನಿದ್ದಲ್ಲಿಗೆ ಬಂದರು ವೀರರಾಜನು ತನ್ನ ಆಪ್ತ-ಮಿತ್ರರು ಬಂದ ನಂತರ ಒಂದು ದರ್ಬಾರನ್ನು ಕೂಡಿಸಿದನು. ಆ ದರ್ಬಾರಿನಲ್ಲಿ ನೆರೆದವರು ವೀರರಾಜನನ್ನು ಒಂದು ಎತ್ತರವಾದ ಆಸನದಲ್ಲಿ ಕುಳ್ಳಿರಿಸಿ, ಅವನನ್ನು 'ತಮ್ಮ ರಾಜನೆ'ಂದು ಅಂಗೀಕರಿಸಿ ಅವನಿಗೆ ಮುಜುರೆ ಮಾಡಿದರು. ತಾವು ದೇಹದಲ್ಲಿ ಪ್ರಾಣವಿರುವ ವರೆಗೂ ವೀರರಾಜನ ಪಕ್ಷ ನಿಂತು, ಅವನಿಗಾಗಿ ಹೋರಾಡುವೆವೆಂದು ಎಲ್ಲರೂ ಪ್ರತಿಜ್ಞೆ ಮಾಡಿದರು. ವೀರರಾಜನೂ ಅವರ ರಾಜಭಕ್ತಿಪ್ರದರ್ಶನಕ್ಕೆ ಬಹಳ ಕೃತಜ್ಞನಾಗಿ ಅವರನ್ನು ತಾನು ಚೆನ್ನಾಗಿ ಆಳುವೆನೆಂದೂ ತನಗೆ ಉಪಕಾರ ಮಾಡಿದವರಿಗೆ ಪ್ರತ್ಯುಪಕಾರ ಮಾಡದಿರಲಾರೆನೆಂದೂ ಭರವಸೆ ಕೊಟ್ಟನು. ಅಪ್ಪನೆರವನ ಅಪ್ಪಚ್ಚಯ್ಯ, ಪಟ್ಟಚರವನ ಬೋಳುಕ ಮೊದಲಾದವರನ್ನು ತನ್ನ ಕಾರ್ಯಕಾರರಾಗಿ ಅಂದರೆ ಸೈನ್ಯಾಧಿಕಾರಿಗಳಾಗಿ, ಸುಬ್ಬಯ್ಯನನ್ನು ಕರಣಿಕನನ್ನಾಗಿ ನಿಯಮಿಸಿದನು ಮಾರನೆಯ ದಿವಸ ಕಾರ್ಯಕಾರಿಗಳು ಜನರನ್ನು ಸೈನ್ಯಕ್ಕೆ ಸೇರಿಸುವದಕ್ಕೆ ಅದು ತಮ್ಮ ತಮ್ಮ ನಾಡುಗಳಿಗೆ ಹೊರಟರು. ಕರಣಿಕ ಸುಬ್ಬಯ್ಯ, ಮಾಚು, ಐಯಪ್ಪ ಇವರು ಅಲ್ಲೇ ಸುತ್ತುಮುತ್ತು ಗ್ರಾಮಗಳಿಂದ ಮುಂದಿನ ಯುದ್ಧದಲ್ಲಿ ಸೈನಿಕರಿಗೆ ಬೇಕಾಗುವ ಆಹಾರಸಾಮಗ್ರಿಗಳನ್ನೂ ಕತ್ತಿ-ಕೋವಿಗಳನ್ನೂ ಸಂಗ್ರಹಿಸಿಡಲು ತೊಡಗಿದರು. ಹೀಗೆ ಯುದ್ಧದ ಸಿದ್ಧತೆಯು ಭರದಿಂದ ನಡೆಯಿತು ವೀರರಾಜನು ಟಿಪ್ಪುವಿನ ಸ್ವಾಧೀನದಲ್ಲಿದ್ದ ತನ್ನ ಕೋಟೆ ಕೊತ್ತಳಗಳನ್ನು ಬಿಡಿಸಿಕೊಳ್ಳಲು ಸಮಯವನ್ನೂ ಮುಂದಿನ ವಿಜಯವನ್ನೂ ನಿರೀಕ್ಷಿಸುತ್ತಲಿದ್ದನು.

— ಸಂಪೂರ್ಣ —